# ಕೂತಂಡ ಪಾರ್ವತಿ ಪೂವಯ್ಯ

---

ಕನ್ನಡ ಕಟ್ಟಿದವರು ಮಾಲೆ

ಪ್ರಧಾನ ಸಂಪಾದಕರು

ಡಾ. ಸಿದ್ದಲಿಂಗಯ್ಯ

ಸಂಪಾದಕರು

ಡಾ. ಕರೀಗೌಡ ಬೀಚನಹಳ್ಳಿ

ಕೂತಂಡ ಪಾರ್ವತಿ ಪೂವಯ್ಯ

ಡಾ. ಎಂ.ಪಿ.ರೇಖಾ

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಬೆಂಗಳೂರು-೫೬೦ ೦೦೨

KUTHANDA PARVATHI POOVAIAH A Monograph on Kuthanda Parvathi Poovaiah in Kannada Written by: Dr.M.P.Rekha Published By B.H Mallikarjun, Administrative Officer, Kannada Pustaka Pradhikara, Kannada Bhavana, J.C.Road, Bengaluru - 560 002.

© ಈ ಆವೃತ್ತಿಯ ಗ್ರಂಥಸ್ವಾಮ್ಯ - ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

First Print : 2012

Pages : Xvi + 64

Copies:1000

Price :750.00

ಮೊದಲ ಮುದ್ರಣ : ೨೦೧೨

ಪುಟಗಳು : Xvi + ೬೪

ಪ್ರತಿಗಳು : ೧೦೦೦

ಬೆಲೆ : ೫೦.೦೦

ಕರಡು ತಿದ್ದಿದವರು: ಲೇಖಕರು

ಪ್ರಕಾಶಕರು:

ಬಿ.ಎಚ್.ಮಲ್ಲಿಕಾರ್ಜುನ ಕೆ.ಸಿ.ಎ.ಎಸ್.

ಆಡಳಿತಾಧಿಕಾರಿಗಳು

ಕನ್ನಡ ಪುಸ್ತಕ ಪ್ರಾಧಿಕಾರ

ಕನ್ನಡ ಭವನ, ಜೆ.ಸಿ.ರಸ್ತೆ

ಬೆಂಗಳೂರು-೫೬೦ ೦೦೨

ಮುದ್ರಕರು:

ಮೆ|| ಪ್ರಿಂಟ್ ಪಾರ್ಕ್

೧೪೯೬/೪, ೩ನೇ ಅಡ್ಡರಸ್ತೆ, ಮರಿಯಪ್ಪನಪಾಳ್ಯ,

ಶ್ರೀರಾಂಪುರಂ ಅಂಚೆ, ಬೆಂಗಳೂರು-೫೬೦ ೦೨೧

ದೂ : ೦೮೦-೨೩೪೨೨೮೩೮

ಸಂಪಾದಕ ಮಂಡಳಿ

ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ

ಶ್ರೀ ಹೊರೆಯಾಲ ದೊರೆಸ್ವಾಮಿ

ಪ್ರೊ. ಸುಕನ್ಯಾ ಮಾರುತಿ

ಡಾ. ಎಚ್. ಟಿ. ಪೋತೆ

ಶ್ರೀ ಪ್ರಕಾಶ್ ಕಂಬತ್ತಳ್ಳಿ

ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ

ಆಡಳಿತಾಧಿಕಾರಿಗಳು

# ಪ್ರಧಾನ ಸಂಪಾದಕರ ಮಾತು

ಕನ್ನಡ ಪುಸ್ತಕ ಪ್ರಾಧಿಕಾರವು ವಿವಿಧ ಸಾಹಿತ್ಯ ಮಾಲೆಗಳಡಿಯಲ್ಲಿ ಮಹತ್ವದ ಪುಸ್ತಕಗಳನ್ನು ಪ್ರಕಟಿಸುತ್ತಾ ಬರುತ್ತಿದೆ. ಪುಸ್ತಕೋದ್ಯಮವನ್ನು ಜನಪರವಾಗಿಸುವುದರ ಜೊತೆಗೆ ಜನಸಾಮಾನ್ಯರಿಗೆ ಸುಲಭ ಬೆಲೆಯಲ್ಲಿ ಪುಸ್ತಕಗಳು ಲಭ್ಯವಾಗಬೇಕೆಂಬ ದೃಷ್ಟಿಯಿಂದ ಈ ಮಾಲೆಗಳನ್ನು ಪ್ರಾಧಿಕಾರವು ಪ್ರಾರಂಭಿಸಿರುತ್ತದೆ.

ಈ ದೃಷ್ಟಿಯಿಂದ ಪ್ರಾಧಿಕಾರವು ಕೈಗೊಂಡಿರುವ ಮಹತ್ವದ ಯೋಜನೆಗಳಲ್ಲಿ "ಕನ್ನಡ ಕಟ್ಟಿದವರು ಮಾಲೆ' ಯೂ ಒಂದು. ಕನ್ನಡನಾಡು, ನುಡಿ, ಕಲೆ, ಸಂಸ್ಕೃತಿಯೇ ಮೊದಲಾದ ವಿವಿಧ ಕ್ಷೇತ್ರಗಳಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿಯೂ ಅಜ್ಞಾತರಾಗಿ ಉಳಿದ ವ್ಯಕ್ತಿಗಳನ್ನು ಒಳಗೊಂಡಂತೆ ಕನ್ನಡನಾಡು, ನುಡಿಯನ್ನು ಕಟ್ಟುವಲ್ಲಿ ನೆರವಾದ ಮಹನೀಯರನ್ನು ಕುರಿತು ಕಿರುಹೊತ್ತಿಗೆಗಳನ್ನು ಈ ಮಾಲೆಯಡಿ ಪ್ರಕಟಿಸಲಾಗುತ್ತಿದೆ. ಈ ಮಾಲೆಯನ್ನು ಅತ್ಯಂತ ರಚನಾತ್ಮಕವಾಗಿ ರೂಪಿಸಬೇಕೆಂಬ ದೃಷ್ಟಿಯಿಂದ ಒಂದು ಸಂಪಾದಕ ಮಂಡಳಿಯನ್ನು ಪ್ರಾಧಿಕಾರವು ರಚಿಸಿತು, ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಪ್ರೊ. ಸುಕನ್ಯಾ ಮಾರುತಿ, ಡಾ. ಎಚ್. ಟಿ. ಪೋತೆ, ಶ್ರೀಪ್ರಕಾಶ್ ಕಂಬತ್ತಳ್ಳಿ ಇವರನ್ನು ಸದಸ್ಯರನ್ನಾಗಿಯೂ ಪ್ರಾಧಿಕಾರವು ನೇಮಿಸಿತು. ಕನ್ನಡ ನಾಡು ನುಡಿ ಕ್ಷೇತ್ರದಲ್ಲಿ ಅಪಾರ ಪರಿಶ್ರಮವನ್ನು ಹೊಂದಿರುವ ಈ ಮಹನೀಯರು ಈ ಮಾಲಿಕೆಯಡಿ ಬರೆಸಬೇಕಾದ ನೂರಾರು ವ್ಯಕ್ತಿಗಳ ಹಾಗೂ ಅವರನ್ನು ಕುರಿತು ಬರೆಯಬಹುದಾದ ಲೇಖಕರ ಪಟ್ಟಿಯನ್ನು ಪರಿಶ್ರಮವಹಿಸಿ ಸಿದ್ಧಪಡಿಸಿಕೊಟ್ಟು ಉಪಕರಿಸಿರುತ್ತಾರೆ. ಸಂಪಾದಕ ಮಂಡಳಿಯು ಸಮರ್ಥವಾಗಿ ಈ ಮಾಲಿಕೆಯ ಹಸ್ತಪ್ರತಿಗಳನ್ನು ಪರಿಶೀಲಿಸಿಕೊಟ್ಟಿರುತ್ತದೆ. ಸಂಪಾದಕರಾದ ಡಾ. ಕರೀಗೌಡ ಬೀಚನಹಳ್ಳಿ ಅವರಿಗೆ, ಸಂಪಾದಕ ಸಮಿತಿಯ ಸದಸ್ಯರಿಗೆ ಹಾಗೂ ಎಲ್ಲ ಲೇಖಕರಿಗೆ ನನ್ನ ಕೃತಜ್ಞತೆಗಳು.

ಈ ಮಾಲೆಯ ಪುಸ್ತಕಗಳನ್ನು ಹೊರತರುವಲ್ಲಿ ಪ್ರಾರಂಭದಿಂದ ವಿಶೇಷ ಆಸಕ್ತಿ ವಹಿಸಿದ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ.ಹೆಚ್. ಮಲ್ಲಿಕಾರ್ಜುನ ಅವರಿಗೆ, ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ. ಮುಕುಂದನ್ ಅವರಿಗೆ, ಶ್ರೀ ಜೆ. ಎನ್. ಶಾಮರಾವ್ ಅವರಿಗೆ ಹಾಗೂ ಪ್ರಾಧಿಕಾರದ ಎಲ್ಲಾ ಸದಸ್ಯರು ಹಾಗೂ ಸಿಬ್ಬಂದಿ ವರ್ಗದವರಿಗೆ ಆಭಾರಿಯಾಗಿದ್ದೇನೆ. ಈ ಮಾಲೆಯ ಎಲ್ಲಾ ಕೃತಿಗಳನ್ನು ಕನ್ನಡ ವಾಚಕರು ತುಂಬುಹೃದಯದಿಂದ ಸ್ವಾಗತಿಸುತ್ತಾರೆಂದು ಆಶಿಸುತ್ತೇನೆ.

(ಡಾ. ಸಿದ್ಧಲಿಂಗಯ್ಯ)

ಅಧ್ಯಕ್ಷರು

# ಸಂಪಾದಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಪುಸ್ತಕ ಪ್ರಾಧಿಕಾರವು 'ಕನ್ನಡ ಕಟ್ಟಿದವರು ಮಾಲೆ'ಯಡಿಯಲ್ಲಿ ಕನ್ನಡ ನಾಡು, ನುಡಿ, ಸಾಹಿತ್ಯ, ಶಿಕ್ಷಣ, ಕಲೆ ಸಂಸ್ಕೃತಿ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಅಪರೂಪದ ವ್ಯಕ್ತಿಗಳ ಜೀವನ, ಸಾಧನೆ, ವ್ಯಕ್ತಿತ್ವ ಮತ್ತು ಹೋರಾಟದ ಕಥನವನ್ನು ಕುರಿತು ನುರಿತ ಲೇಖಕರಿಂದ ಕಿರುಹೊತ್ತಿಗೆಗಳನ್ನು ಬರೆಸಿ ಪ್ರಕಟಿಸಬೇಕೆಂದು ತೀರ್ಮಾನಿಸಿತು. ಈ ನಿಟ್ಟಿನಲ್ಲಿ ಸಂಪಾದಕ ಸಮಿತಿಯೊಂದನ್ನು ರಚಿಸಿ ನಮ್ಮನ್ನು ಆಹ್ವಾನಿಸಿದಾಗ ಈ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳಲು ಸಂತೋಷದಿಂದ ನಾವು ಒಪ್ಪಿಕೊಂಡೆವು. ಅನಂತರ ಈ ಸಮಿತಿಯು ಸೇರಿ ಹಲವು ಸಭೆಗಳನ್ನು ನಡೆಸಿ ಈ ಮಾಲೆಯ ಪುಸ್ತಕಗಳ ಸ್ವರೂಪ, ಬರೆಸಬೇಕಾದ ವ್ಯಕ್ತಿಗಳ ಹಾಗೂ ಬರೆಯುವ ಲೇಖಕರ ಪಟ್ಟಿ ಇದನ್ನೆಲ್ಲಾ ಸಿದ್ಧಪಡಿಸಲಾಯಿತು. ಈ ಮಾಲೆಯ ಪುಸ್ತಕಗಳು ಮುಖ್ಯವಾಗಿ ಈ ಕೆಳಕಂಡ ರೀತಿಯಲ್ಲಿ ಮೂರು ಮುಖ್ಯ ವಿಷಯಗಳನ್ನು ಒಳಗೊಂಡಿರಬೇಕೆಂದು ತೀರ್ಮಾನಿಸಿ ಕಾರ್ಯೋನ್ಮುಖರಾದೆವು.

೧. ಆಯಾ ವ್ಯಕ್ತಿಗಳ ಬಾಲ್ಯ, ವಿದ್ಯಾಭ್ಯಾಸ ಕೌಟುಂಬಿಕ ಹಿನ್ನೆಲೆ-ವಿವರಗಳು, ಗಣ್ಯರೊಡನೆ ಒಡನಾಟ, ಪಡೆದ ಪ್ರೇರಣೆ-ಪ್ರಭಾವಗಳು, ಭಾಗವಹಿಸಿದ ಚಳುವಳಿಹೋರಾಟಗಳು, ಸಂಘಟನೆಗಳು, ನಾಡು-ನುಡಿ-ಸಾಹಿತ್ಯ-ಸಂಸ್ಕೃತಿಗೆ ಸಲ್ಲಿಸಿದ ಸೇವೆಗಳು, ಮಾನವೀಯ ಗುಣ-ನಡತೆ ಇತ್ಯಾದಿ ವಿವರಗಳನ್ನು ಅಡಕವಾಗಿ ಈ ಪುಸ್ತಕಗಳಲ್ಲಿ ಅಳವಡಿಸಿ ಬರೆಯಬೇಕು.

೨. ಆಯಾ ವ್ಯಕ್ತಿಗಳ ಜೀವನ ಹಾಗೂ ಸಾಧನೆಗಳನ್ನು ದಾಖಲು ಮಾಡುವಾಗ ಅಧಿಕೃತ ದಾಖಲೆಗಳನ್ನು ಅವಲಂಬಿಸಿ ಬರೆಯಬೇಕು; ಆದಷ್ಟು ಕ್ಷೇತ್ರಕಾರ್ಯ ಮಾಡಿ ಮಾಹಿತಿಗಳನ್ನು ಕಲೆಹಾಕಿ ವಸ್ತುನಿಷ್ಠವಾಗಿ ನಿರೂಪಿಸಬೇಕು.

೩. ಎಲ್ಲಾ ಬಗೆಯ ಓದುಗರನ್ನು ದೃಷ್ಟಿಯಲ್ಲಿಟ್ಟುಕೊಂಡು ಈ ಪುಸ್ತಕಗಳನ್ನು ಸರಳವಾಗಿ, ಸಂಕ್ಷಿಪ್ತವಾಗಿ ಮತ್ತು ಸ್ಪಷ್ಟವಾಗಿ ಬರೆಯಬೇಕು.

ಹಲವಾರು ಜನ ಎಲೆಮರೆಯ ಕಾಯಂತೆ, ಕರ್ನಾಟಕದ ಏಳ್ಗೆಗಾಗಿ ದುಡಿದು ಕಣ್ಮರೆಯಾಗಿದ್ದಾರೆ. ಆದರೆ ಅಂತಹವರ ಬಗ್ಗೆ ಸಾಹಿತ್ಯ ಚರಿತ್ರೆಯಲ್ಲಿ ಒಂದು ಸಣ್ಣ ದಾಖಲೆಯೂ ಸಿಗುವುದಿಲ್ಲ. ಈ ನಿಟ್ಟಿನಲ್ಲಿ ಶ್ರಮಿಸಿದ ಅನೇಕ ಜನರ ಹೋರಾಟದ ಕಥೆ ನೇಪಥ್ಯಕ್ಕೆ ಸರಿದು ಹೋಗಿದೆ. ಅಂತಹ ವ್ಯಕ್ತಿಗಳ ಚರಿತ್ರೆಯನ್ನು ಇಂದು ಹುಡುಕಿ ಹೊರತೆಗೆದು ದಾಖಲಿಸಿ ಅವರ ಸೇವೆಯನ್ನು ಕೃತಜ್ಞತೆಯಿಂದ ಸ್ಮರಿಸಬೇಕಾಗಿದೆ. ಇಂತಹವರ ಹೋರಾಟದ ಜೀವನವು ಮುಂದಿನ ಪೀಳಿಗೆಗೆ ಆದರ್ಶವೂ ಅನುಕರಣೀಯವೂ ಆಗಬೇಕಾಗಿದೆ. ಈ ಪುಸ್ತಕಗಳಲ್ಲಿ ದೊಡ್ಡಗ್ರಂಥಗಳಲ್ಲಿ ಹೇಳಬಹುದಾದ ವಿವರಗಳೆಲ್ಲವನ್ನೂ ಹೇಳಲಾಗದಿದ್ದರೂ ಸೂಕ್ಷ್ಮವಾಗಿ, ಸಂಕ್ಷಿಪ್ತವಾಗಿ ಮತ್ತು ಪರಿಣಾಮಕಾರಿಯಾಗಿ ಹೇಳಲಾಗಿದೆ. ಈ ಪುಸ್ತಕಗಳನ್ನು ಓದುವಾಗ ಇವರ ವ್ಯಕ್ತಿತ್ವ, ಸಾಧನೆ, ಹೋರಾಟ,

ವಿಚಾರಲಹರಿ, ಆಸಕ್ತಿಗಳು ಇನ್ನಷ್ಟು ಸ್ಫುಟಗೊಳ್ಳುತ್ತಾ ಹೋಗುತ್ತವೆ; ಇವರ ವಿಷಯದಲ್ಲಿ ಪ್ರೀತ್ಯಾದರಗಳು ಇಮ್ಮಡಿಗೊಳ್ಳುವುದರ ಜೊತೆಗೆ ಕನ್ನಡ ಪುನರುಜ್ಜೀವನದ ಸಂದರ್ಭಗಳು ಹಾಗೂ ಸವಾಲುಗಳು ಸ್ಫುಟಗೊಳ್ಳುತ್ತವೆ. ಇವರು ಬರೀ ಕನ್ನಡ ನಾಡು, ನುಡಿ, ಸಾಹಿತ್ಯ ಕಟ್ಟಿದವರು ಮಾತ್ರವಲ್ಲ; ಇವರು ಕನ್ನಡ ಸಂಸ್ಕೃತಿಯ ನಿರ್ಮಾಪಕರೂ ಹೌದು. ಕನ್ನಡ ಸಂಸ್ಕೃತಿಯ ಬಗೆಗೆ ಮತ್ತು ಕನ್ನಡಿಗರ ಬದುಕಿನ ಬಗೆಗೆ ಕೆಲಸ ಮಾಡುವ ಯಾರಿಗಾದರೂ ಈ ವ್ಯಕ್ತಿಗಳು ಪ್ರೇರಕಶಕ್ತಿಗಳಾಗಿದ್ದಾರೆ.

ಮೊದಲಿಗೆ ಇಂತಹ ನೂರು ಜನ ಮಹನೀಯರ ಬಗ್ಗೆ ಕಿರುಹೊತ್ತಿಗೆಗಳನ್ನು ಬರೆಸಬೇಕೆಂದು ಸಮಿತಿಯ ಪಟ್ಟಿ ಮಾಡಿ ಬರೆದುಕೊಡುವಂತೆ ನೂರು ಜನ ನುರಿತ ಲೇಖಕರನ್ನು ಗುರುತಿಸಿ ಅವರಿಗೆ ಪತ್ರ ಬರೆಯಲಾಯಿತು. ಆದರೆ ಬರೆಯುವವರು ಸಿಗುವುದು ಬಹಳ ಕಷ್ಟ ಎಂಬ ಸಂಗತಿ ನಂತರ ನಮಗೆ ಮನವರಿಕೆಯಾಯಿತು. ಕೊನೆಗೆ ಈ ಮಾಲೆಗೆ ಇನ್ನೂ ಕೆಲವರು ಬರೆಯುತ್ತಿರುವುದಾಗಿ ತಿಳಿಸಿದ್ದರೂ, ಬರೆದು ಬಂದಂತಹ ಹಸ್ತಪ್ರತಿಗಳು ೨೫ ಮಾತ್ರ ಅವುಗಳನ್ನೆಲ್ಲಾ ಸಂಪಾದಕ ಮಂಡಲಿಯ ಸದಸ್ಯರೆಲ್ಲಾ ಓದಿ, ಪರಿಶೀಲಿಸಿ, ತಿದ್ದುಪಡಿಗಳಿದ್ದರೆ ಲೇಖಕರಿಗೆ ಅವುಗಳನ್ನು ಸೂಚಿಸಿ ನಂತರ ಹಸ್ತಪ್ರತಿಗಳನ್ನು ಮುದ್ರಣಕ್ಕೆ ಅಂತಿಮಗೊಳಿಸಲಾಯಿತು.

ಈ ಯೋಜನೆಯ ಪ್ರತಿಯೊಂದು ಹಂತದಲ್ಲಿಯೂ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾದ ಡಾ. ಸಿದ್ಧಲಿಂಗಯ್ಯ ಅವರು ತಮ್ಮ ಸಲಹೆ, ಸಹಕಾರವನ್ನು ನೀಡಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರದ ಆಡಳಿತಾಧಿಕಾರಿಗಳಾದ ಶ್ರೀ ಬಿ. ಹೆಚ್. ಮಲ್ಲಿಕಾರ್ಜುನ ಅವರು, ಹಿಂದಿನ ಶ್ರೀ ಅಶೋಕ ಎನ್. ಚಲವಾದಿ ಅವರು, ಅಧ್ಯಕ್ಷರ ಆಪ್ತಕಾರ್ಯದರ್ಶಿಗಳಾದ ಶ್ರೀ ಕೆ ಮುಕುಂದನ್ ಅವರು ಹಾಗೂ ಅವರ ಸಿಬ್ಬಂದಿ ಇಂತಹ ಜವಾಬ್ದಾರಿಯನ್ನು ವಹಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಗೌರವಾನ್ವಿತ ಸದಸ್ಯರು-ಇವರೆಲ್ಲರ ಸಲಹೆ, ಸಹಕಾರ ನಮಗೆ ದೊರೆತಿರುತ್ತದೆ. ಇದರ ಸಂಪಾದಕ ಸಮಿತಿ ಸದಸ್ಯರಾದ ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ, ಶ್ರೀ ಹೊರೆಯಾಲ ದೊರೆಸ್ವಾಮಿ, ಶ್ರೀಮತಿ ಸುಕನ್ಯಾ ಮಾರುತಿ, ಡಾ. ಹೆಚ್.ಟಿ. ಪೋತೆ, ಶ್ರೀ ಪ್ರಕಾಶ್ ಕಂಬತ್ತಹಳ್ಳಿ-ಇವರೆಲ್ಲರ ಸಲಹೆ, ಸಹಕಾರ ಹಾಗೂ ಸಾಮೂಹಿಕ ಪ್ರಯತ್ನದ ಫಲವಾಗಿ ಈ ಕೃತಿಗಳು ಸಕಾಲದಲ್ಲಿ ಪ್ರಕಟವಾಗಲು ಕಾರಣವಾಗಿದೆ. ಹೀಗೆ ಇಂತಹ ಒಂದು ಅಪರೂಪದ ಯೋಜನೆಯೊಂದನ್ನು ಅನುಷ್ಠಾನಗೊಳಿಸಲು ನೆರವಾದ ಎಲ್ಲರಿಗು ಸಂಪಾದಕ ಸಮಿತಿಯ ಪರವಾಗಿ ಕೃತಜ್ಞತೆಗಳು.

ಡಾ. ಕರೀಗೌಡ ಬೀಚನಹಳ್ಳಿ

ಸಂಪಾದಕ

# ಲೇಖಕಿಯ ಮಾತು

ಕೊಡಗು ಕರ್ನಾಟಕದ ಪುಟ್ಟ ಜಿಲ್ಲೆ. ಇದು ದೇಶಕ್ಕೆ ಸೈನಿಕರನ್ನು, ಕ್ರೀಡಾಪಟುಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ನೀಡಿದ ನಾಡೆಂದು ಪ್ರಸಿದ್ಧವಾಗಿದೆ. ಇದೇ ಹೊತ್ತಿನಲ್ಲಿ ಸದ್ದಿಲ್ಲದೆ ಸಾಹಿತ್ಯಕೃಷಿಯೂ ಇಲ್ಲಿ ನಿರಂತರವಾಗಿ ನಡೆಯುತ್ತಾ ಬಂದಿದೆ. ಭೌಗೋಳಿಕವಾಗಿ, ಸಾಂಸ್ಕೃತಿಕವಾಗಿ ತನ್ನದೇ ಆದ ವಿಶಿಷ್ಟತೆಗಳನ್ನು ಹೊಂದಿರುವ ಈ ಪ್ರದೇಶ ರಾಜ್ಯ ರಾಜಧಾನಿಯಿಂದ ದೂರವಿದೆ. ಕನ್ನಡ ಸಾಹಿತ್ಯ ಪರಂಪರೆಯ ಮುಖ್ಯವಾಹಿನಿಯಲ್ಲಿ ಇಲ್ಲಿಯ ಪ್ರತಿಭೆಗಳು ಗುರುತಿಸಿಕೊಂಡಿರುವುದು ಕಡಿಮೆ. ಸಾಹಿತ್ಯಕವಾಗಿ ಬಹುಸಂಖ್ಯೆಯ ಬರಹಗಾರರು ರಚನೆಗಳನ್ನು ಮಾಡಿದ್ದರೂ ತೆರೆಮರೆಯಲ್ಲಿ ಉಳಿದುಕೊಂಡದ್ದೇ ಹೆಚ್ಚು. ಅಂತಹ ಮಹನೀಯರನ್ನು ಗುರುತಿಸಿ "ಕನ್ನಡ ಕಟ್ಟಿದವರು" ಮಾಲಿಕೆಯಡಿಯಲ್ಲಿ ಸಾಹಿತ್ಯಲೋಕಕ್ಕೆ ಪರಿಚಯಿಸುತ್ತಿರುವ ಕನ್ನಡ ಪುಸ್ತಕ ಪ್ರಾಧಿಕಾರದ ಕಾರ್ಯ ನಿಜಕ್ಕೂ ಶ್ಲಾಘನೀಯ.

ಕನ್ನಡ ಸಣ್ಣಕಥಾಲೋಕದಲ್ಲಿ ಕೊಡಗಿನ ಗೌರಮ್ಮನ ಹೆಸರೊಂದು ಮೈಲಿಗಲ್ಲು. ಗೌರಮ್ಮನವರ ಸಮಕಾಲೀನರಾಗಿಯೇ ಬದುಕಿದ್ದು ಕೊಡವ ಹಾಗೂ ಕನ್ನಡ ಭಾಷೆಗಳೆರಡರಲ್ಲೂ ಕಥೆ, ಕವನ, ಕಾದಂಬರಿಗಳನ್ನು ಬರೆದು ಪ್ರಕಟಿಸಿರುವ ಕೂತಂಡ ಪಾರ್ವತಿ ಪೂವಯ್ಯನವರ ಜೀವನ-ಸಾಧನೆಯ ಕುರಿತು ಕೊಡಗಿನ ಜನತೆಯಾಗಲೀ, ಕನ್ನಡ ಸಾಹಿತ್ಯಲೋಕವಾಗಲಿ ಅರಿತಿರುವುದು ಅತ್ಯಲ್ಪ. ಮಹಿಳೆಯರು ಹೆಚ್ಚಾಗಿ ಬರವಣಿಗೆ, ಪ್ರಕಟಣೆಗಳಲ್ಲಿ ತೊಡಗಿಸಿಕೊಳ್ಳದೇ ಇದ್ದ ಕಾಲಘಟ್ಟದಲ್ಲಿ ಸಾಹಿತ್ಯದ ವಿವಿಧ ಪ್ರಕಾರಗಳಲ್ಲಿ ಬರವಣಿಗೆ ಮಾಡಿ, ಸಾಮಾಜಿಕ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಪಾರ್ವತಿ ಪೂವಯ್ಯನವರ ಸಾಧನೆ ಕೊಡಗಿನ ಯುವ ಲೇಖಕಿಯರಿಗೆ ಮಾದರಿಯಾಗಿದೆ. ಇವರ ಬದುಕುಬರಹವನ್ನು ಕನ್ನಡ ಸಾಹಿತ್ಯಲೋಕಕ್ಕೆ ಪರಿಚಯಿಸುವ ಒಂದು ಕಿರುಹೊತ್ತಿಗೆಯನ್ನು ಬರೆಯಲು ನನಗೆ ಅವಕಾಶ ಮಾಡಿಕೊಟ್ಟ ಕನ್ನಡ ಪುಸ್ತಕ ಪ್ರಾಧಿಕಾರಕ್ಕೆ ನಾನು ಆಭಾರಿಯಾಗಿದ್ದೇನೆ. ಜೊತೆಗೆ ಈ ಪುಸ್ತಕ ರಚನೆಯ ಸಂದರ್ಭದಲ್ಲಿ ಬೇಕಾದ ಅಗತ್ಯ ಮಾಹಿತಿ, ದಾಖಲೆಗಳನ್ನು ಪ್ರೀತಿ, ಉತ್ಸಾಹದಿಂದ ಒದಗಿಸಿಕೊಟ್ಟು ಸಹಕರಿಸಿದ ಶ್ರೀ. ಕೆ.ಪಿ. ಉತ್ತಪ್ಪ, ಶ್ರೀಮತಿ ವಾಣಿ ಉತ್ತಪ್ಪ ಹಾಗೂ ಅವರ ಕುಟುಂಬ ವರ್ಗಕ್ಕೆ ನನ್ನ ಕೃತಜ್ಞತೆಗಳು.

**ಡಾ. ಎಂ.ಪಿ, ರೇಖಾ**

## ಪರಿವಿಡಿ

೧. ಕೌಟುಂಬಿಕ ಜೀವನ

೨. ಸಮಾಜ ಸೇವೆ, ಪ್ರವಾಸ ವಿವರ

೩. ಸಾಹಿತ್ಯಕ ರಚನೆಗಳು

೪. ಅನುಬಂಧ



## ಕೌಟುಂಬಿಕ ಜೀವನ

ಅಂದು ೧೯೬೦ ನೆಯ ಸೆಪ್ಟೆಂಬರ್ ೨೮. ಮೈಸೂರಿನ ಪ್ರತಿಷ್ಠಿತ ದಸರಾ ಆಚರಣೆಯ ಸಂಭ್ರಮದ ದಿನಗಳು. ಅಂದವಾಗಿ ಅಲಂಕಾರಗೊಂಡ ಜಗನ್ಮೋಹನ ಅರಮನೆಯ ಕಿಕ್ಕಿರಿದ ಸಭಾಂಗಣದಲ್ಲಿ ಡಾ. ಚಂದ್ರಶೇಖರ ಪಾಟೀಲರ ಅಧ್ಯಕ್ಷತೆಯಲ್ಲಿ ಕವಿಗೋಷ್ಠಿ ನಡೆದಿತ್ತು. ಆವರೆಗೆ ಕೊಡವ ಭಾಷೆಯ ಕವಿಗಳಿಗೆ ಅವಕಾಶ ಒದಗಿ ಬಂದಿರಲಿಲ್ಲ. ಆದರೆ ಈ ಸಲದ ಗೋಷ್ಠಿಯಲ್ಲಿ ಕೊಡವ ಭಾಷೆಯ ಕವನ ವಾಚನಕ್ಕೆ ಅವಕಾಶ

ನೀಡಲಾಗಿತ್ತು. ಸಹಜ ಕೊಡವತಿಯ ಚಹರೆಯ, ಪ್ರಶಾಂತ ಮುಖಮುದ್ರೆಯ, ಬಟ್ಟಲು ಕಂಗಳ, ಗೌರವರ್ಣದ, ತುಂಬು ನಿಲುವಿನ ಮಹಿಳೆ ಕೊಡವ ಸಾಂಪ್ರದಾಯಿಕ ಸೀರೆಯುಟ್ಟು ವೇದಿಕೆಗೆ ಬಂದರು. ಸುಶ್ರಾವ್ಯ ದನಿಯಲ್ಲಿ

ಜೂಜುಮಾಡ್ಲಾ | ಬೆಜಿಕುಂಞಯೆ

ಬೇಜರಿಲ್ಲತೇ.........

ಚಾಯಿತೊಟ್ಟಲ್ | ಜೂಜುಮಾಡ್

ಚಾಯಿ ಕುಂಞ ಯೇ.............

(ನಿದ್ದೆ ಮಾಡು ಮುದ್ದು ಮಗುವೇ

ನೀ ಬೇಸರಿಸದೇ........

ಸೊಗದ ತೊಟ್ಟಿಲಲಿ ನಿದ್ದೆ ಮಾಡುನೀ

ಸೊಗಸು ಕಂದನೇ.......)

ಎಂದು ಕನ್ನಡದ ತೊಟ್ಟಿಲಲಿ ಕೊಡವ ಕಂದನನ್ನಿಟ್ಟು ಜೋಗುಳ ಹಾಡಿ ನೆರೆದವರ ಮನವನ್ನು ಜೋಕಾಲಿಯಾಡಿಸಿದರು. ಸಾಹಿತ್ಯ ಪರಿಷತ್ತಿನಿಂದ ಪ್ರಶಸ್ತಿ, ಸನ್ಮಾನಗಳನ್ನೂ ಪಡೆದರು. ತಮ್ಮ ದೀರ್ಘಕಾಲದ ಸಾಹಿತ್ಯ ಸೇವೆಗೆ ಇಳಿವಯಸ್ಸಿನಲ್ಲಿ ಗೌರವ ಸಂದಾಗ ಧನ್ಯರಾದರು. ಅವರೇ ಕೂತಂಡ ಪಾರ್ವತಿ ಪೂವಯ್ಯ.

ಕನ್ನಡ ಸಣ್ಣಕಥಾಲೋಕದಲ್ಲಿ ಕೊಡಗಿನ ಗೌರಮ್ಮನ ಹೆಸರು ಒಂದು ಐತಿಹಾಸಿಕ ಹೆಜ್ಜೆ. ಅವರ ಸಮಕಾಲೀನರಾಗಿಯೇ ಕಥೆ, ಕವನ, ಕಾದಂಬರಿಗಳನ್ನು ಬರೆದಿರುವ ಪಾರ್ವತಿ ಪೂವಯ್ಯನವರು ಎಲೆಮರೆಯ ಕಾಯಿಯಾಗಿಯೇ ಬಹುಕಾಲ ಉಳಿದುಬಿಟ್ಟರು.

೧೯೧೩ ರಿಂದ ೧೯೯೪ರ ಕಾಲಘಟ್ಟದಲ್ಲಿ ಜೀವಿಸಿದ್ದ ಪಾರ್ವತಿ ಪೂವಯ್ಯನವರು ೧೯೧೩ರ ಮೇ ೩ರಂದು ಕೊಡಗಿನ ಭಾಗಮಂಡಲ ಸಮೀಪದ ಕುಂಬಳದಾಳು ಗ್ರಾಮದಲ್ಲಿ ನೆರವಂಡ ನಂಜಪ್ಪ - ಮಾಯಮ್ಮ (ತಂಗಮ್ಮ) ದಂಪತಿಗಳಿಗೆ ಆರನೆಯ ಮಗುವಾಗಿ ಜನಿಸಿದರು. ತಾಯಿ ತವರು ಅಪ್ಪನೆರವಂಡ (ಕೊಡಗಿನ ಆದಿಕವಿ ಎಂದೇ ಹೆಸರಾದ ಹರದಾಸ ಅಪಚ್ಚ ಕವಿಯ) ಮನೆತನದವರು.

ಬ್ರಿಟಿಷರ ಅಧಿಕಾರವಧಿಯಲ್ಲಿ ಮಡಿಕೇರಿಯಲ್ಲಿ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಅಧಿಕಾರಿಯಾಗಿ ಉದ್ಯೋಗದಲ್ಲಿದ್ದ ತಂದೆ ನಂಜಪ್ಪನವರು ಶಿಕ್ಷಣದ ಬಗೆಗೆ ಅಪಾರ ಮೋಹವಿದ್ದವರು. ಜೊತೆಗೆ ತಮ್ಮ ಗಂಡುಮಕ್ಕಳಿಗೆ ನೀಡಿದಷ್ಟೇ ಪ್ರೋತ್ಸಾಹವನ್ನು ಹೆಣ್ಣುಮಕ್ಕಳಿಗೂ ನೀಡಿದವರು. ಮಕ್ಕಳ ವಿದ್ಯಾಭ್ಯಾಸಕ್ಕಾಗಿ ಮತ್ತಷ್ಟು ಹಣವನ್ನು ಹೊಂದಿಸಿಕೊಳ್ಳಲು ಕಛೇರಿಯ ಕೆಲಸದ ವೇಳೆಯ ನಂತರ ಬ್ರಿಟಿಷ್ ಅಧಿಕಾರಿಗಳಿಗೆ ಕನ್ನಡ ಭಾಷೆಯನ್ನು ಕಲಿಸಿಕೊಡುತ್ತಿದ್ದರು. ತಮ್ಮ ಉದ್ಯೋಗ ಹಾಗೂ ಮಕ್ಕಳ ವಿದ್ಯಾಭ್ಯಾಸದ ಸಲುವಾಗಿ ಹುಟ್ಟೂರು ಕುಂಬಳದಾಳುವನ್ನು ಬಿಟ್ಟು ಜಿಲ್ಲಾ ಕೇಂದ್ರ ಮಡಿಕೇರಿಗೆ ತಮ್ಮ ವಾಸ್ತವ್ಯವನ್ನು ಬದಲಾಯಿಸಿದರು. ಮಡಿಕೇರಿಯ

ರಾಣಿಪೇಟೆಯಲ್ಲಿ ಮನೆಯನ್ನು ಖರೀದಿಸಿರು. ಅತ್ಯುತ್ತಮ ಇಂಗಿಷ್ ಹಾಗೂ ಕನ್ನಡ ಪುಸ್ತಕಗಳನ್ನು ಖರೀದಿಸಿ ಸಂಗ್ರಹಿಸುವ ಹವ್ಯಾಸ ನಂಜಪ್ಪನವರದ್ದು. ತಾಯಿ ಮಾಯಮ್ಮಳಿಗೆ ಕಸೂತಿಯ ಜೊತೆಗೆ ನಿರಂತರವಾಗಿ ಕನ್ನಡ ಪುಸ್ತಕಗಳನ್ನೇ ಓದುವ ಅಭ್ಯಾಸವಿತ್ತು. ತಂದೆ-ತಾಯಿಯರಿಗಿದ್ದ ಪುಸ್ತಕ ಪ್ರೀತಿ ಪಾರ್ವತಿಯವರ ಮೇಲೆ ಹೆಚ್ಚು ಪ್ರಭಾವ ಬೀರಿ ಓದಿನ ಕಡೆಗೆ ಆಸಕ್ತಿ ಅಧಿಕವಾಗುವಂತಾಯಿತು.

ಹೆತ್ತವರ ಶಿಕ್ಷಣಕುರಿತ ಕಾಳಜಿಯಿಂದಾಗಿ ಮಕ್ಕಳೆಲ್ಲರೂ ವಿದ್ಯಾವಂತರಾಗಿ ಹಲವು ಕ್ಷೇತ್ರಗಳಲ್ಲಿ ಉದ್ಯೋಗದಲ್ಲಿ ತೊಡಗಿಸಿಕೊಂಡರು. ಪಾರ್ವತಿಯವರ ಹಿರಿಯ ಅಣ್ಣ ಕುಟ್ಟಪ್ಪ ಇಂಗ್ಲಿಷ್ ಸಾಹಿತ್ಯದಲ್ಲಿ ಎಂ.ಎ. ಪದವಿಯನ್ನು ಪಡೆದು ತಹಶೀಲ್ದಾರರಾಗಿ ಉದ್ಯೋಗದಲ್ಲಿದ್ದರು. ಪಟ್ಟಮಾಡ ದೇವಮ್ಮಾಜಿಯನ್ನು ಮದುವೆಯಾದರು. ಇವರಿಗೆ ಇಬ್ಬರು ಗಂಡು ಹಾಗೂ ನಾಲ್ಕುಜನ ಹೆಣ್ಣು ಮಕ್ಕಳು. ಎರಡನೆಯ ಅಣ್ಣ ದೇವಯ್ಯ ಬಿ.ಎ. ಪದವಿಯನ್ನು ಪಡೆದು ಭಾರತೀಯ ರೈಲ್ವೆ ಇಲಾಖೆಯಲ್ಲಿ ಅಧಿಕಾರಿಯಾಗಿ ಉದ್ಯೋಗದಲ್ಲಿದ್ದರು. ನಡಿಕೇರಿಯಂಡ ಅಮ್ಮಣಿಯನ್ನು ವಿವಾಹವಾದರು. ಇವರಿಗೆ ಇಬ್ಬರು ಗಂಡು ಹಾಗೂ ಒಬ್ಬಳು ಹೆಣ್ಣು ಮಗಳು ಇದ್ದಾರೆ. ಪಾರ್ವತಿಯವರ ಮೊದಲ ಅಕ್ಕ ಪೊನ್ನಮ್ಮ ಶಾಲಾ ಚಟುವಟಿಕೆಯಲ್ಲಿ ಸದಾ ಮುಂದಿದ್ದು ಅತಿ ಹೆಚ್ಚು ಬಹುಮಾನ, ಪದಕಗಳನ್ನು ವಿದ್ಯಾರ್ಥಿದೆಸೆಯಲ್ಲಿ ಪಡೆದುಕೊಂಡಿದ್ದಾಳೆ. ಮದ್ರಾಸಿನ ಕ್ಲೀನ್ ಮೇರಿ'ಸ್ ಕಾಲೇಜಿನಲ್ಲಿ ಬಿ.ಎ.ಎಲ್.ಟಿ. ಪದವಿಯನ್ನು ಪಡೆದರು. ಅಧ್ಯಾಪಕಿಯಾಗಿ ಮಂಗಳೂರು, ಉಡುಪಿ ಮೊದಲಾದ ಕಡೆಗಳಲ್ಲಿ ಸುಮಾರು ೩೩ ವರ್ಷಗಳ ದೀರ್ಘ ಸೇವೆಯನ್ನು ಸಲ್ಲಿಸಿ ಮಂಗಳೂರಿನ ಕಾರ್‌ಸ್ಟ್ರೀಟ್‌ನಲ್ಲಿರುವ ಸರ್ಕಾರಿ ಬಾಲಕಿಯರ ಪ್ರೌಢಶಾಲೆಯಲ್ಲಿ ಮುಖ್ಯೋಪಾಧ್ಯಾನಿಯಾಗಿ ನಿವೃತ್ತರಾದರು.

ಶಿಕ್ಷಣ ಕ್ಷೇತ್ರದಲ್ಲಿ ತೊಡಗಿಸಿಕೊಂಡು, ಸಹಾಯಕ ಶಿಕ್ಷಣ ಅಧಿಕಾರಿ (ಎ.ಇ.ಒ) ಯಾಗಿದ್ದ ನಡಿಕೇರಿಯಂಡ ಸುಬ್ಬಯ್ಯನವರನ್ನು ಪೊನ್ನಮ್ಮ ವಿವಾಹವಾದರು. ಇವರಿಗೆ ನಾಲ್ಕು ಜನ ಗಂಡು ಮಕ್ಕಳು ಹಾಗೂ ಇಬ್ಬರು ಹೆಣ್ಣು ಮಕ್ಕಳು.

ಪಾರ್ವತಿಯವರ ಎರಡನೆಯ ಅಕ್ಕ ಉಮ್ಮಯ್ಯಳನ್ನು ಇಂಜಿನಿಯರ್ ಹುದ್ದೆಯಲ್ಲಿದ್ದು ಮದ್ರಾಸು, ದೆಹಲಿ ಮುಂತಾದ ಸ್ಥಳಗಳಲ್ಲಿ ಉತ್ತಮ ಸೇವೆಯನ್ನು ಸಲ್ಲಿಸಿದ ಚೇಂದೀರ ಸುಬ್ಬಯ್ಯನವರಿಗೆ ಮದುವೆ ಮಾಡಿಕೊಡಲಾಯಿತು. ಇವರಿಗೆ ಒಂಬತ್ತು ಜನ ಮಕ್ಕಳು. - ತಮ್ಮ ಅಪ್ಪಯ್ಯ ಎಂ.ಎ. ಪದವಿಯನ್ನು ಅಮೆರಿಕಾ ದೇಶದಲ್ಲಿ ಪಡೆದು ಅಲ್ಲಿ ಗಾಲ್ಫ್ ತರಬೇತುದಾರರಾಗಿ ಉದ್ಯೋಗದಲ್ಲಿದ್ದರು. ಇದಕ್ಕಿಂತ ಪೂರ್ವದಲ್ಲಿ ಕೆಲವು ವರ್ಷಗಳ ಕಾಲ ಇಂಡಿಯನ್ ಅರ್ಮಿಯಲ್ಲಿ ಕರ್ನಲ್ ಹುದ್ದೆಯಲ್ಲಿದ್ದರು. ಇವರು ಅಧ್ಯಾಪಕಿಯಾಗಿ ವೃತ್ತಿಯಲ್ಲಿದ್ದ ಪಂಜಾಬಿ ಹೆಣ್ಣು ಮೋಹಿನಿಯನ್ನು ಮದುವೆಯಾದರು. ಇವರಿಗೆ ಇಬ್ಬರು ಗಂಡು ಹಾಗೂ ಇಬ್ಬರು ಹೆಣ್ಣು ಮಕ್ಕಳು.

ತಂಗಿ ಅಕ್ಕಮ್ಮ ಸುಂದರಿಯಾಗಿದ್ದು ವಿದ್ಯಾಭ್ಯಾಸ ನಂತರ ಪೊಲೀಸ್ ಇಲಾಖೆಯಲ್ಲಿ ಪೊಲೀಸ್ ವರಿಷ್ಠಾಧಿಕಾರಿ (ಎಸ್.ಪಿ)ಯಾಗಿದ್ದ ಬೊವೇರಿಯಂಡ ಅಪ್ಪಚ್ಚು ಅವರನ್ನು ಮದುವೆಯಾಗಿ ಸಂಸಾರಸ್ಥಳಾದಳು.

ಇವರಿಗೆ ಒಬ್ಬ ಮಗ ಹಾಗೂ ಮೂವರು ಹೆಣ್ಣು ಮಕ್ಕಳು. ಇಂತಹ ವಿದ್ಯಾವಂತ, ಉದ್ಯೋಗಸ್ಥ ಕುಟುಂಬದ ನಡುವೆ ಪಾರ್ವತಿಯವರು ಹುಟ್ಟಿ ಬೆಳೆದರು.

ಹೆತ್ತವರ, ಒಡಹುಟ್ಟಿದವರ, ತುಂಬು ಪ್ರೀತಿ-ವಿಶ್ವಾಸದಲ್ಲಿ ಬೆಳೆದ ಪಾರ್ವತಿಯವರು ತಮ್ಮ ಆರಂಭಿಕ ವಿದ್ಯಾಭ್ಯಾಸವನ್ನು ಮಡಿಕೇರಿಯ ಸೆಂಟ್ರಲ್ ಹೈಸ್ಕೂಲಿನಲ್ಲಿ ಮಾಡಿದರು. ಮಾಧ್ಯಮಿಕ ವಿದ್ಯಾಭ್ಯಾಸವನ್ನು ಮನೆಯ ಹತ್ತಿರವಿದ್ದ ಸೈಂಟ್ ಜೋಸೆಫ್ ಶಾಲೆಯಲ್ಲಿ ಪಡೆದರು. ತರಗತಿಗಳಲ್ಲಿ ಚಟುವಟಿಕೆಯಿಂದಿದ್ದು ಓದಿನಲ್ಲಿ ಸದಾ ಮುಂದಿದ್ದ ಪಾರ್ವತಿ ಉನ್ನತ ವಿದ್ಯಾಭ್ಯಾಸವನ್ನು ಪಡೆದುಕೊಳ್ಳುವ ಗುರಿಯನ್ನು ಹೊಂದಿದ್ದರು. ತಂದೆ ತನ್ನೆಲ್ಲಾ ಆರ್ಥಿಕ ಸಂಕಷ್ಟಗಳ ನಡುವೆಯೂ ಮಗಳ ಆಸಕ್ತಿಯನ್ನು ಪ್ರೋತ್ಸಾಹಿಸುತ್ತಿದ್ದರು. ಪದವಿಯ ನಂತರ ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪಾರ್ವತಿಯವರನ್ನು ಶಾಂತಿನಿಕೇತನಕ್ಕೆ ಕಳುಹಿಸುವುದಾಗಿ ಮಾತುಕೊಟ್ಟಿದ್ದರು. ದೂರದ ಮದ್ರಾಸಿನ ಕ್ಲೀನ್ ಮೇರಿ'ಸ್ ಕಾಲೇಜಿನಲ್ಲಿ ಪದವಿ ವ್ಯಾಸಂಗ ಮಾಡುತ್ತಿದ್ದಾಗಲೇ ಅವರ ಕುಟುಂಬಕ್ಕೆ ದೊಡ್ಡದೊಂದು ಆಘಾತವಾಯಿತು. ವಿದ್ಯಾಭ್ಯಾಸಕ್ಕೆ ನಿರಂತರ ಪ್ರೋತ್ಸಾಹ ನೀಡುತ್ತಿದ್ದ, ಕುಟುಂಬದ ಆಧಾರಸ್ತಂಭವಾಗಿದ್ದ ನಂಜಪ್ಪನವರ ಅಕಾಲಿಕ ನಿಧನದಿಂದ ಹಲವಾರು ತೊಂದರೆಗಳನ್ನು ಕುಟುಂಬ ಎದುರಿಸಬೇಕಾಯಿತು. ಪಾರ್ವತಿಯವರು ಪದವಿಯನ್ನು ಪೂರ್ಣಗೊಳಿಸದೆ ಅರ್ಧದಲ್ಲೇ ವಿದ್ಯಾಭ್ಯಾಸ ನಿಲ್ಲಿಸಿ ಹುಟ್ಟೂರಿಗೆ ಮರಳಬೇಕಾಯಿತು. ಪಾರ್ವತಿಯವರ ಶಾಂತಿನಿಕೇತನದ ಕನಸು ಕನಸಾಗಿಯೇ ಉಳಿಯಿತು. ಬಾಲ್ಯದಲ್ಲಿಯೇ ಹಾಡುನೃತ್ಯ-ಸಂಗೀತದ ಕಡೆಗೆ ಸಹಜವಾದ ಆಸಕ್ತಿಯನ್ನು ಹೊಂದಿದ್ದ ಪಾರ್ವತಿಯವರಿಗೆ ಸಾಹಿತ್ಯದಲ್ಲಿ ಒಲವು ಮೂಡಲು ಕಾರಣವಾದ ಅಂಶಗಳೆಂದರೆ

ಹೆತ್ತವರ ಹವ್ಯಾಸ, ಪರಿಸರದ ಪ್ರಭಾವದ ಜೊತೆಗೆ ಮಾಧ್ಯಮಿಕ ವಿದ್ಯಾಭಾಸದ ಅವಧಿಯಲ್ಲಿ ಕನ್ನಡ ಉಪಾಧ್ಯಾಯರಾಗಿದ್ದ ಶ್ರೀ ವೆಂಕಟರಮಣರವರು ಪ್ರತೀ ಸೋಮವಾರ ಒಂದೊಂದು ಕಥೆಯನ್ನು ಕಡ್ಡಾಯವಾಗಿ ಬರೆದು ತಂದು ಓದುವಂತೆ ಹೇಳಿದ್ದರು. ಅದಕ್ಕಾಗಿ ತಾಯಿಯಿಂದ ಕೇಳಿದ ಸುತ್ತಮುತ್ತಲ ನಿತ್ಯದ ಘಟನೆಗಳನ್ನು ವಸ್ತುವಾಗಿಸಿಕೊಂಡು ಸಣ್ಣಸಣ್ಣ ಕಥೆಗಳನ್ನು ಬರೆಯುವ ಅಭ್ಯಾಸ ಪಾರ್ವತಿಯವರಿಗೆ ರೂಢಿಯಾಯಿತು. ಅವರ ಈ ಆಸಕ್ತಿಗೆ ನೀರೆರೆಯುವಂತೆ ಮತ್ತೊಂದು ಘಟನೆ ಅವರ ಬದುಕಿನಲ್ಲಿ ನಡೆಯಿತು.

ಆಧುನಿಕ ಕೊಡವ ಸಾಹಿತ್ಯದ ಆದಿಕವಿ ಹರದಾಸ ಅಪ್ಪನೆರವಂಡ ಅಪ್ಪಚ್ಚನವರು. ೨೦ನೆಯ ಶತಮಾನದ ಆರಂಭದ ಕಾಲದಲ್ಲಿ ಕೊಡವ ಭಾಷೆಗೆ ನಿರ್ದಿಷ್ಟ ಲಿಪಿಯೇ ಇಲ್ಲದಿದ್ದಾಗ ಕನ್ನಡ ಲಿಪಿ ಬಳಸಿ ಕೊಡವ ಭಾಷೆಯಲ್ಲಿ ನಾಲ್ಕು ನಾಟಕಗಳನ್ನು ಬರೆದರು. ಸಾಹಿತ್ಯಕ್ಕೆ ಕವಿಯಾಗಿ, ನಾಟಕಕಾರರಾಗಿ, ಸಂಗೀತಗಾರರಾಗಿ, ನಿರ್ದೇಶಕರಾಗಿ, ನಟರಾಗಿ ಹತ್ತು ಹಲವು ಕ್ಷೇತ್ರಗಳಲ್ಲಿ ತೊಡಗಿಸಿಕೊಂಡು ಕೊಡವ ಸಾಹಿತ್ಯಕ್ಕೆ ಭದ್ರ ಬುನಾದಿಯನ್ನು ಹಾಕಿದವರು. ಇವರು ಪಾರ್ವತಿಯವರ ತಾಯಿ ತವರಿನ ಕಡೆಯ ನೆಂಟರಾಗಿದ್ದರು. ಇವರು ಪಾರ್ವತಿಯವರ ಮನೆಗೆ ಬಹಳ ಸಲ ಭೇಟಿ ನೀಡುತ್ತಿದ್ದರು. ಆ ಸಂದರ್ಭದಲ್ಲೆಲ್ಲಾ ಮುಂಜಾವಿನ ವೇಳೆಯಲ್ಲಿ ಹಾಗೂ ರಾತ್ರಿಯ ಹೊತ್ತಲ್ಲಿ ಕವಿ ಸುಶ್ರಾವ್ಯವಾಗಿ ಸ್ವರಚಿತ ಕವನಗಳನ್ನು, ದೇವರ ಸ್ತೋತ್ರಗಳನ್ನು ಹಾಡುತ್ತಿದ್ದಾಗ

ಹತ್ತು ವರ್ಷ ವಯಸ್ಸಿನ ಬಾಲಕಿ, ಪಾರ್ವತಿ ಕವಿಯ ಹತ್ತಿರ ಕುಳಿತು ತದೇಕಚಿತ್ತದಿಂದ ಆಲಿಸುತ್ತಿದ್ದಳು. ಸ್ವಲ್ಪ ಹೊತ್ತಿನಲ್ಲೇ ಆ ಹಾಡನ್ನು ಕಲಿತುಕೊಂಡು ತಾನೂ ಹಾಡುತ್ತಿದ್ದಳು. ಬಾಲ್ಯದಲ್ಲೇ ಸಂಗೀತ, ಸಾಹಿತ್ಯದ ಕಡೆಗಿನ ಪುಟ್ಟಪಾರ್ವತಿಯ ಒಲವನ್ನು, ಆಸಕ್ತಿಯನ್ನು ಗಮನಿಸಿದ ಅಪ್ಪಚ್ಚ ಕವಿ ಪಾರ್ವತಿಯ ತಂದೆ ನಂಜಪ್ಪನವರಿಗೆ ಆಕೆಗೆ ಸಂಗೀತಾಭ್ಯಾಸ ಮಾಡಿಸಲು ಸೂಚಿಸಿದರು. ಅದರಂತೆ ಅವರು ಮಗಳಿಗೆ ಸಂಗೀತ ಪಾಠಕ್ಕಾಗಿ ಒಬ್ಬ ಗುರುವನ್ನು ನೇಮಿಸಿದರು. ಅವರಿಂದ ಸ್ವರಸಂಗೀತದ ಜೊತೆಗೆ ವೀಣೆ, ಹಾರ್ಮೋನಿಯಂ ವಾದನವನ್ನು ಪಾರ್ವತಿ ಕಲಿತಳು. ಆರ್ಥಿಕವಾಗಿ ಅಷ್ಟೊಂದು ಸುಧಾರಿಸಿಲ್ಲದ ಸ್ಥಿತಿ ಇದ್ದಾಗಲೂ ಮಗಳ ಆಸಕ್ತಿಯನ್ನು ನೋಡಿ ಒಂದು ವೀಣೆಯನ್ನು ಖರೀದಿಸಿಕೊಟ್ಟರು. ತಂದೆ ಪ್ರೀತಿಯಿಂದ ಕೊಡಿಸಿದ ಆ ವೀಣೆಯನ್ನು ಮದುವೆಯ ನಂತರವೂ ಕೂಡ ಬಹಳ ವರ್ಷಗಳವರೆಗೆ ಪಾರ್ವತಿಯವರು ತಮ್ಮೊಂದಿಗೆ ಉಳಿಸಿಕೊಂಡಿದ್ದರು.

ಪಾರ್ವತಿಯವರೇ ಹೇಳಿಕೊಂಡಿರುವಂತೆ, ೧೯೩೩ರಲ್ಲಿ ಮಡಿಕೇರಿಯಲ್ಲಿ ನಡೆದ ೧೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಕನ್ನಡ ಪಂಡಿತರಾಗಿದ್ದ ಜಿ. ಶ್ರೀನಿವಾಸಮೂರ್ತಿಯವರು ಬರೆದು ಹಾಡಿದ ಸ್ವಾಗತ ಗೀತೆಯಾದ -

"ಬನ್ನಿರಿ ಕರ್ನಾಟಕ ಬಂಧುಗಳೇ
ನಮ್ಮಿ ಕುಡುಮಲೆಗೆ
ಕೊಡಗಿನ ನಡುವಿನ ಗುಡ್ಡದ ಮೇಲ್
ರಾರಾಜಿಪ ಮಡಿಕೇರಿಗೆ
ಬಲು ಬೆಡಗಿನ ಮಡಿಕೇರಿಗೆ.......

ಎಂಬ ಸಾಲುಗಳು ಇವರ ಮನದಾಳವನ್ನು ಮುಟ್ಟಿತು. ಬಾಲ್ಯದಿಂದಲೇ ಜೊತೆಗಿದ್ದ ಸಾಹಿತ್ಯಾಸಕ್ತಿಗೆ ಗರಿಮೂಡಿದಂತಾಯಿತು. ತಾನೂ ಇಂತಹ ಕವನಗಳನ್ನು ರಚಿಸಲೇಬೇಕೆಂಬ ಹುರುಪು ಮೂಡಿ ಕ್ರಿಯಾಶೀಲಗೊಂಡಿತು.

ಹೀಗೆ ಬಾಲಕಿ ಪಾರ್ವತಿಯ ಮೇಲಾದ ಈ ಮೂರು ಘಟನೆಗಳು ಮುಪ್ಪರಿಗೊಂಡು ಅವರೊಳಗಿನ ಕವಯತ್ರಿ ಜಾಗೃತಳಾದಳು. ಮುಂದೆ ಕಥೆ, ಕವನ ರಚನೆಯನ್ನು ಹವ್ಯಾಸವಾಗಿಸಿಕೊಂಡು ನಿರಂತರವಾಗಿ ಸಾಹಿತ್ಯ ರಚನೆಯಲ್ಲಿ ತೊಡಗಿಸಿಕೊಂಡರು.

ಕಥೆ, ಕವನಗಳನ್ನು ಕನ್ನಡ, ಕೊಡವ ಪತ್ರಿಕೆಗಳಿಗೆ ಕಳುಹಿಸಿ ಪ್ರಕಟಿಸಲಾರಂಭಿಸಿದರು. ಉತ್ತಮ ಶಾರೀರವನ್ನು ಹೊಂದಿದ್ದ ಅವರು ಸ್ವರಚಿತ ಕವನಗಳನ್ನು ಸಭೆ, ಸಮಾರಂಭಗಳಲ್ಲಿ ಹಾಡಿ ಜನಮೆಚ್ಚುಗೆಯನ್ನೂ ಪಡೆಯಲಾರಭಿಸಿದರು. ಇದರೊಂದಿಗೆ ಅತ್ಯುತ್ತಮವಾಗಿ ಯಾವುದೇ ವಿಷಯದ ಕುರಿತು ವೇದಿಕೆಯಲ್ಲಿ ನಿಂತು ಭಾಷಣ ಮಾಡುವ ಕಲೆಯೂ ಇವರಿಗೆ ಸಿದ್ಧಿಸಿತ್ತು.

ಇವರ ಬದುಕಿನಲ್ಲಿ ನಡೆದ ಪ್ರಮುಖ ಘಟನೆಗಳಲ್ಲಿ ಗಾಂಧೀಜಿಯನ್ನು ಭೇಟಿಯಾದ ಪ್ರಸಂಗವೂ ಒಂದು. ಮದುವೆಗಿಂತ ಪೂರ್ವದಲ್ಲಿ ಪಾರ್ವತಿಯವರು ಸೇಲಂನಲ್ಲಿದ್ದ ತಮ್ಮ ನೆಂಟರ ಮನೆಗೆ ಹೋಗಿದ್ದರು. ಆಗ ಗಾಂಧೀಜಿಯವರನ್ನು ನೋಡಿ, ಅವರ ಮಾತುಗಳನ್ನು ಕೇಳುವ ಒಂದು ಅಪೂರ್ವ ಅವಕಾಶ ದೊರಕಿತು. ಗಾಂಧೀಜಿಯವರ ವಿಚಾರಧಾರೆಯಿಂದ ಪ್ರಭಾವಿತರಾದ ಪಾರ್ವತಿಯವರು ಅವರ ಸರಳತೆಗೆ ಮಾರುಹೋದರು. ನಂತರದಲ್ಲಿ ೧೯೩೪ರಲ್ಲಿ ಗಾಂಧೀಜಿ ಕೊಡಗಿಗೆ ಬಂದಿದ್ದಾಗ ಅವರನ್ನು ಹತ್ತಿರದಿಂದ ಕಂಡು ಅವರ ಪಾದಮುಟ್ಟಿ ನಮಸ್ಕರಿಸಿ ಆಶೀರ್ವಾದವನ್ನು ಪಡೆದರು. ಮುಂದೆ ತಮ್ಮ ಬದುಕಿನುದ್ದಕ್ಕೂ ಸರಳತೆಯನ್ನೇ ಮೈಗೂಡಿಸಿಕೊಂಡರು. ತಮ್ಮ ನಿರ್ಧಾರಕ್ಕೆ ಬದ್ಧವಾಗಿಯೇ ಬದುಕಿದರು.

೧೯೩೫ರಲ್ಲಿ ಪಾರ್ವತಿಯವರಿಗೆ ಕೊಡಗಿನ ಪಾಲಿಬೆಟ್ಟದ ಕೂತಂಡ ಮಂದಣ್ಣಅಕ್ಕಮ್ಮ ದಂಪತಿಗಳ ಮಗನಾದ ಪೂವಯ್ಯನವರೊಂದಿಗೆ ವಿವಾಹವಾಯಿತು. ಅದೃಷ್ಟವಶಾತ್ ದೊರಕಿದ ಗಂಡನೂ ಗಾಂಧೀತತ್ವಗಳ ಅನುಯಾಯಿಯಾಗಿದ್ದು 'ಸ್ವಾತಂತ್ರ್ಯ ಹೋರಾಟ, ಸಮಾಜಸೇವೆ, ಸಾಹಿತ್ಯ ಕ್ಷೇತ್ರಗಳಲ್ಲಿ ಆಸಕ್ತರಾಗಿದ್ದುದು ಪಾರ್ವತಿಯವರಿಗೆ ಮತ್ತಷ್ಟು ಅನುಕೂಲವಾಯಿತು. ಕೊಡವರಲ್ಲಿ ಮದುವೆಯಲ್ಲಿ ಹೆಣ್ಣಿಗೆ ರೇಷ್ಮೆಯ ಸೀರೆಗಳನ್ನು ಉಡುಗೊರೆಯಾಗಿ ತವರು ಮನೆಯವರು ಕೊಡುವ ಸಂಪ್ರದಾಯವಿದೆ. ಆದರೆ ಮದುವೆಗೆ ಮುಂಚೆಯೇ ಗಾಂಧೀಜಿಯವರ ಸರಳತೆಗೆ ಮಾರುಹೋಗಿದ್ದ ಪಾರ್ವತಿಯವರು ತನ್ನ ಮದುವೆಗೆ ಕೇವಲ ಖಾದಿಯ ಸೀರೆಗಳನ್ನು ಮಾತ್ರ ಆರಿಸಿಕೊಂಡಿದ್ದರು. ಮುಂದೆ ಕುಟುಂಬದ ಆರ್ಥಿಕಸ್ಥಿತಿ ಅತ್ಯಂತ ಉತ್ತಮಗೊಂಡರೂ ಬದುಕಿರುವವರೆಗೆ ಕೇವಲ ಖಾದಿಯ ಸೀರೆಯನ್ನೇ ಉಟ್ಟು ಆದರ್ಶವನ್ನು ಮೆರೆದರು.

ಪೂವಯ್ಯ - ಪಾರ್ವತಿ ದಂಪತಿಗಳಿಗೆ ಉತ್ತಪ್ಪ (ಜಪ್ಪು), ಗಂಗಮ್ಮ (ಶಾಂತಿ), ಕಾವೇರಿ (ರಾಧಾ), ಕಾಮವ್ವ (ಯಾಶ್), ಮಾಯಮ್ಮ (ಸಾವಿತ್ರಿ) ಮತ್ತು ಅಕ್ಕಮ್ಮ (ಮಧು) ಎಂಬ ಆರು ಜನ ಮಕ್ಕಳು. ಈ ಆರು ಮಕ್ಕಳ ಪಾಲನೆ-ಪೋಷಣೆ ಮನೆಯ ಜವಾಬ್ದಾರಿಯ ನಡುವೆ ವೀಣೆ ನುಡಿಸುವ ಹವ್ಯಾಸ ಕೈತಪ್ಪಿ ಹೋಯಿತು. ಆದರೆ ಬರವಣಿಗೆ ಮತ್ತೂ ಹೆಚ್ಚಾಯಿತು. ಬಿಡುವಿಲ್ಲದ ತನ್ನ ನಿರಂತರ ಕೆಲಸಕಾರ್ಯಗಳ ನಡುವೆ ಸ್ಫೂರ್ತಿಬಂದಾಗಲೆಲ್ಲಾ ಕಥೆ, ಕವನಗಳನ್ನು ಬರೆದು ಹಾಸಿಗೆಯ ಅಡಿಯಲ್ಲಿ ಅಡಗಿಸಿಡುತ್ತಿದ್ದರು. ಮಕ್ಕಳ ಪ್ರೀತಿಯ ಅಮ್ಮನಾಗಿದ್ದ ಕತೆಗಾರ್ತಿ ಪಾರ್ವತಿಯವರು ಬಾಲ್ಯದಲ್ಲಿಯೇ ಮಕ್ಕಳಿಗೆ ಸಾಹಿತ್ಯದ ಸವಿರುಚಿಯನ್ನುಣಿಸಿದರು. ಮಗ ಉತ್ತಪ್ಪನವರು ಹೇಳುವಂತೆ ಮಕ್ಕಳು ಯಾರೂ ರಾಮಾಯಣ, ಮಹಾಭಾರತ ಕೃತಿಗಳನ್ನು ಎಂದೂ ಓದಿದವರಲ್ಲ. ನಿತ್ಯವೂ ಸಂಜೆ ಮಕ್ಕಳನ್ನು ಸುತ್ತುಕೂರಿಸಿಕೊಂಡು ಆ ಎಲ್ಲಾ ಕಥೆಗಳನ್ನು ಆಕರ್ಷಕ ಶೈಲಿಯಲ್ಲಿ ಹೇಳಿಕೊಡುತ್ತಿದ್ದರಂತೆ. ಅಮ್ಮನಿಂದ ಕೇಳಿದ್ದ ಕಥೆಗಳು ಮಕ್ಕಳ ಮೇಲೆ ಹೆಚ್ಚಿನ ಪ್ರಭಾವವನ್ನು ಬೀರಿವೆ. ಮಕ್ಕಳೂ ಹೆತ್ತವರಂತೆ ಸಮಾಜಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಆಗ ಕೇಳಿದ ಧ್ರುವನ ಕಥೆ, ಗಜೇಂದ್ರ ಮೋಕ್ಷ ಮುಂತಾದ ಕಥೆಗಳನ್ನು ಉತ್ತಪ್ಪನವರು ಈಗಲೂ ನೆನಪಿಸಿಕೊಳ್ಳುತ್ತಾರೆ.

ಶಿಕ್ಷಣದ ಕುರಿತು ಅತ್ಯಂತ ಕಾಳಜಿಯನ್ನು ಹೊಂದಿದ್ದ ಪೂವಯ್ಯ-ಪಾರ್ವತಿ ದಂಪತಿಗಳು ಮಕ್ಕಳೆಲ್ಲರಿಗೂ ಉತ್ತಮ ವಿದ್ಯಾಭಾಸ ನೀಡಿದ್ದಾರೆ. ಎಲ್ಲರೂ ಉನ್ನತ ಪದವಿಗಳನ್ನು ಗಳಿಸಿ, ಸಾಂಸಾರಿಕ ಬದುಕನ್ನು ಕಟ್ಟಿಕೊಂಡು ಉತ್ತಮ ಜೀವನ ನಡೆಸುತ್ತಿದ್ದಾರೆ.

ಮಗ ಉತ್ತಪ್ಪ ಮದ್ರಾಸಿನ ಲಾಯಲ್ ಕಾಲೇಜಿನ ಬಿ.ಎಸ್ಸಿ. ಪದವೀಧರ. ಒಂದು ವರ್ಷ ಇಂಗ್ಲೆಂಡಿನಲ್ಲಿ ಉದ್ಯೋಗ ಮಾಡಿ ಮತ್ತೆ ಹುಟ್ಟೂರಿಗೆ ಬಂದು ೧೯೫೭ರಲ್ಲಿ ಟಾಟಾ ಕಾಫಿ (ಹಿಂದಿನ ಕಾಲಿಡೇಟೆಡ್ ಕಾಫಿ) ಸಂಸ್ಥೆಯಲ್ಲಿ ಉದ್ಯೋಗಕ್ಕೆ ಸೇರಿ ಎಕ್ಸಿಕ್ಯೂಟಿವ್ ಡೈರೆಕ್ಟರ್ ಆಗಿ ೧೯೯೫ರಲ್ಲಿ ನಿವೃತ್ತರಾಗಿದ್ದಾರೆ. ನಿವೃತ್ತಿಯ ನಂತರ ಸಮಾಜ ಸೇವೆಯಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಇವರು ಹಲವಾರು ಪ್ರತಿಷ್ಠಿತ ಸಂಘ-ಸಂಸ್ಥೆಗಳಲ್ಲಿ ಅಧ್ಯಕ್ಷರು, ನಿರ್ದೇಶಕರೂ ಆಗಿದ್ದಾರೆ. ಕೂರ್ಗ್ ಫೌಂಡೇಶನ್ ಸಂಸ್ಥೆಯ ಅಧ್ಯಕ್ಷರಾಗಿದ್ದ ಇವರು ಪ್ರಸ್ತುತ ಭಾರತೀಯ ವಿದ್ಯಾಭವನ, ಕೊಡಗು ಶಾಖೆಯ ಅಧ್ಯಕ್ಷರಾಗಿಯೂ, ಕೊಡವ ವಿದ್ಯಾನಿಧಿಯ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಸಂಸ್ಥೆಗಳ ಮೂಲಕ ಕೊಡಗಿನ ಬಡವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು, ಆರ್ಥಿಕ ಸಹಾಯವನ್ನೂ ನೀಡುತ್ತಿದ್ದಾರೆ. ಕೊರವಂಡ ದೇವಯ್ಯ - ಬೊಳ್ಳಮ್ಮ (ಜೂಬಿ) ದಂಪತಿಗಳ ಮಗಳಾದ ವಾಣಿಯನ್ನು ವಿವಾಹವಾಗಿರುವ ಇವರಿಗೆ ವಿವೇಕ್ ಹಾಗೂ ನಂದಾ ಎಂಬ ಇಬ್ಬರು ಪುತ್ರರು. ಉನ್ನತ ವಿದ್ಯಾಭ್ಯಾಸವನ್ನು ಪಡೆದು ಉದ್ಯೋಗ ಮಾಡುತ್ತಿರುವ ಇವರೂ ಸಾಮಾಜಿಕ ಕಾವ್ಯಗಳಲ್ಲಿ ಹೆತ್ತವರಂತೆಯೇ ಆಸಕ್ತರು. - ಪಾರ್ವತಿಯವರ ಮೊದಲ ಮಗಳು ಶಾಂತಿಯನ್ನು ಪಟ್ಟಾಮಾಡ ಕರ್ನಲ್ ಗಣಪತಿಯವರಿಗೆ ವಿವಾಹ ಮಾಡಿಕೊಟ್ಟರೆ, ಎರಡನೆಯ ಮಗಳು ರಾಧಾಳನ್ನು ಮದ್ರಾಸಿನಲ್ಲಿ ಇಂಜಿನಿಯರ್ ಆಗಿದ್ದ ಕೋಟೇರ ಚಂಗಪ್ಪನವರಿಗೆ ಮದುವೆ ಮಾಡಿಕೊಟ್ಟರು. ಮೂರನೆಯ ಮಗಳು ಯಾಶ್‌ಳನ್ನು ಕೇರಳದ ಕಣ್ಣನೂರಿನ ಟೀ ಕಂಪೆನಿಯಲ್ಲಿ ನಿರ್ದೇಶಕರಾಗಿ ಉದ್ಯೋಗದಲ್ಲಿದ್ದ ಗುಮ್ಮಟೀರ ಮುತ್ತಣ್ಣನವರೊಂದಿಗೆ ವಿವಾಹ ಮಾಡಿಸಿದರು. ನಾಲ್ಕನೆಯ ಮಗಳು ಸಾವಿತ್ರಿಯನ್ನು ಪ್ಲಾಂಟರ್ ನಡಿಕೇರಿಯಂಡ ನಾಣಯ್ಯನವರಿಗೆ, ಕೊನೆಯ ಮಗಳು ಮಧುವನ್ನು ಮಚ್ಚಿಯಂಡ ಏರ್‌ಮಾರ್ಷಲ್ ಉತ್ತಯ್ಯನವರೊಂದಿಗೆ ಮದುವೆ ಮಾಡಿಕೊಟ್ಟರು. ಎಲ್ಲರಿಗೂ ಇಬ್ಬರು, ಮೂರು ಜನ ಮಕ್ಕಳಿದ್ದು, ಮಕ್ಕಳು, ಮೊಮ್ಮಕ್ಕಳಿಂದ ತುಂಬಿದ ಕುಟುಂಬದ ಪ್ರೀತಿಯಲ್ಲಿ ಬಾಳಿದವರು ಪಾರ್ವತಿಯವರು. ಇವರಿಗೆ ಒಟ್ಟು ೧೬ ಜನ ಮೊಮ್ಮಕ್ಕಳೇ ಇದ್ದರು. ಮೊಮ್ಮಕ್ಕಳಿಗೂ ರಜೆಯಲ್ಲಿ ಒಟ್ಟು ಸೇರಿಸಿ ಕಥೆ ಹೇಳುತ್ತಿದ್ದು, ಮಕ್ಕಳ ಪ್ರೀತಿಯ ಅಜ್ಜಿಯಾಗಿದ್ದರು. ಅಜ್ಜಿಯ ಬರಹದ ಹವ್ಯಾಸವನ್ನು ರೂಢಿಸಿಕೊಂಡ ಮೊಮ್ಮಗಳು ಕವಿತಾ ಮಂದಣ್ಣ ಇಂಗ್ಲಿಷ್‌ನಲ್ಲಿ ತನ್ನಜ್ಜಿಯ ಕುರಿತು ಲೇಖನಗಳನ್ನು ಬರೆದು ಪತ್ರಿಕೆಯಲ್ಲಿ ಪ್ರಕಟಿಸಿದ್ದಾಳೆ. ಅಜ್ಜಿಯ ಕಥೆಗಳನ್ನು Folk tales from Kodagu ಎಂದು ಇಂಗ್ಲಿಷಿಗೆ ಅನುವಾದಿಸಿರುವುದು ಡೆಕನ್ ಹೆರಾಲ್ಡ್ ಪತ್ರಿಕೆಯಲ್ಲಿ ಫೆಬ್ರವರಿ ೧೨, ೨೦೦೦ ರಂದು ಪ್ರಕಟವಾಗಿದೆ.

ಬಹುಮುಖ ಪ್ರತಿಭೆಯ ಪಾರ್ವತಿ ಪೂವಯ್ಯನವರು ಸಂಗೀತ, ಸಾಹಿತ್ಯದ ಜೊತೆಗೆ ಜೇಡಿಮಣ್ಣಿನಲ್ಲಿ ಮೂರ್ತಿಗಳನ್ನು (CLAY ART) ಮಾಡುವ ಹವ್ಯಾಸವನ್ನೂ ಬೆಳೆಸಿಕೊಂಡಿದ್ದರು. ಹುತ್ತಕಟ್ಟಿದಾಗ ಕಾಣುವ ಹೊಸ

ಮಣಿನಿಂದ ಇವರು ಮಾಡಿದ ಗಣಪತಿಯ ಆಕೃತಿ ಅವರ ಮಗನ ಮನೆಯಲಿದೆ (ಅನುಬಂಧದಲ್ಲಿ ಛಾಯಾಚಿತ್ರ ನೀಡಿದೆ), ಮನೆಯ ಸುತ್ತಲೂ ಸುಂದರ ಹೂತೋಟವನ್ನು ಮಾಡುವುದರೊಂದಿಗೆ ರುಚಿರುಚಿಯಾದ ಅಡುಗೆಗಳನ್ನು ತಿಂಡಿಗಳನ್ನು ಮಾಡಿ ಮನೆಯವರಿಗೆ, ನೆಂಟರಿಷ್ಟರಿಗೆ ಪ್ರೀತಿಯಿಂದ ಬಡಿಸುತ್ತಿದ್ದರು ಅವರು ಮಾಡುತ್ತಿದ್ದ ಕಣಿಲೆ, ಅಣಬೆಯ ಉಪ್ಪಿನಕಾಯಿಗಳನ್ನು ಮೊಮಕ್ಕಳ ಬಾಯಿ ನೀರೂರಿಸಿಕೊಂಡು ನೆನಪಿಸಿಕೊಳ್ಳುತ್ತಾರೆ.

ಪ್ರಕೃತಿಯ ಸುಂದರ ದೃಶ್ಯಗಳನ್ನು ನೋಡಿ ಅವುಗಳ ಜಲವರ್ಣದ ತೈಲಚಿತ್ರಗಳನ್ನು (Water Paint) ಮಾಡಿ ಅದಕ್ಕೆ ತಕ್ಕಂತೆ ಕವನಗಳನ್ನು ರಚಿಸುವ ಪ್ರತಿಭೆ ಇವರಿಗೆ ದೈವದತ್ತವಾಗಿ ಬಂದಿತ್ತು. ಇವರು ರಚಿಸಿದ ಕೆಲವಾರು ತೈಲಚಿತ್ರಗಳನ್ನು ಸೊಸೆ ವಾಣಿ ಮನೆಯಲ್ಲಿ ಜೋಪಾನವಾಗಿಟ್ಟಿದ್ದಾರೆ. ಹಾಗೆಯೇ ಬಿಡುವಿನ ವೇಳೆಯಲ್ಲಿ ಕ್ರೋಶಾದಲ್ಲಿ ನಿಟ್ಟಿಂಗ್ ಮಾಡುವುದರಲ್ಲೂ ಅವರಿಗೆ ಆಸಕ್ತಿ ಇತ್ತು. ಇಳಿವಯಸ್ಸಿನಲ್ಲೂ ಮೊಮ್ಮಕ್ಕಳಿಗೆ ತಾವೇ ಟೋಪಿಹೊಲಿದು ಕೊಡುತ್ತಿದ್ದರು. ಬಟ್ಟೆಯ ಮೇಲೆ ಕಸೂತಿಹಾಕುವ, ಬ್ಲಾಟಿಂಗ್ ಪೇಪರ್‌ನ ಮೇಲೆ ಚಿತ್ರ ರೂಪಿಸುವ ಹೀಗೆ ಹತ್ತು ಹಲವು ಹವ್ಯಾಸಗಳನ್ನು ಹಚ್ಚಿಕೊಂಡು ಸದಾ ಚಟುವಟಿಕೆಯಿಂದ, ಆಕಸ್ತಿಯಿಂದ ಬದುಕನ್ನು ಪ್ರೀತಿಸುವ ಗುಣ ಅವರ ವಿಶೇಷತೆ. ಬಡವರ ಮೇಲೆ ಅಪಾರವಾದ ಕರುಣೆಯೂ ಇವರಿಗಿತ್ತು. ಮುಂಬಾಗಿಲಿಂದ ಬರುವ ನೆಂಟರಿಗಿಂತ ಹಿಂಬಾಗಿಲಿನ ನೆಂಟರೇ ಅವರಿಗೆ ಅಧಿಕವಾಗಿದ್ದರು ಎಂದು ಈಗಲೂ ಅವರ ಮಕ್ಕಳು ನೆನಪಿಸಿಕೊಳ್ಳುತ್ತಾರೆ.

ಅವರ ಮತ್ತೊಂದು ವಿಶೇಷವೆಂದರೆ, ಅವರಲ್ಲಿದ್ದ ಅತೀವ ತಾಳ್ಮೆ, ಸಹನೆಯ ಗುಣ. ಅತ್ಯಂತ ತುಂಟಾಟ ಮಾಡುತ್ತಿದ್ದ ೬ ಜನ ಮಕ್ಕಳನ್ನು ಸಾಕಿದಾಗಲೂ ಒಮ್ಮೆಯೂ ಯಾರ ಮೇಲೂ ಕೈ ಎತ್ತಿ ಪೆಟ್ಟುಕೊಡದ, ಜೋರಾಗಿ ಮಾತಾಡದ ತಾಳ್ಮೆ ಅವರಿಗಿತ್ತು. ಮಗ ಉತ್ತಪ್ಪ ಬಾಲ್ಯದಲ್ಲಿ ಬಹಳ ಕೀಟಲೆಯ ಸ್ವಭಾವದವನಾಗಿದ್ದ. ಒಮ್ಮೆ ನವದಂಪತಿಗಳು ನೆಂಟರಾಗಿ ಮನೆಗೆ ಬಂದಾಗ ಆಕೆಯ ಪಕ್ಕದಲ್ಲಿ ನೆಲದಲ್ಲಿದ್ದ ಸಗಣಿಯ ಮೇಲೆ ಕಲ್ಲು ಎತ್ತಿಹಾಕಿದ್ದ. ಆಕೆಯ ರೇಷ್ಮೆಯ ಸೀರೆ ಎಲ್ಲಾ ಸಗಣಿ ಮೆತ್ತಿಕೊಂಡಾಗ ಎಲ್ಲರೂ ಅಮ್ಮನಿಂದ ಮಗನಿಗೆ ಈಗ ಪೆಟ್ಟು ಬೀಳಬಹುದೆಂದು ಕಾಯುತ್ತಿದ್ದ ಕ್ಷಣದಲ್ಲೂ ಅಮ್ಮ ತಮಗೆ ಹೊಡೆದಿರಲಿಲ್ಲವೆಂದು ತನ್ನ ತಾಯಿಯಲ್ಲಿದ್ದ ಸಹನೆಯ ಕುರಿತು ಮಗ ಉತ್ತಪ್ಪ ನೆನಪಿಸಿಕೊಳ್ಳುತ್ತಾ ಆಶ್ಚರ್ಯ ವ್ಯಕ್ತಪಡಿಸುತ್ತಾರೆ. ಅಮ್ಮನ ಕುರಿತ ಸಿಹಿ ನೆನಪುಗಳನ್ನು ಮೆಲುಕು ಹಾಕುವ ಮಕ್ಕಳು, ಸೊಸೆ ಧನ್ಯತಾಭಾವ ತಾಳುತ್ತಾರೆ.

# ಸಮಾಜ ಸೇವೆ

"ನೀಡುವ ಕೈ ನುಡಿಯುವ ತುಟಿಗಳಿಗಿಂತ ಶ್ರೇಷ್ಠ" ಎಂದು ನಂಬಿದ್ದ ಪೂವಯ್ಯ - ಪಾರ್ವತಿ ದಂಪತಿಗಳಿಬ್ಬರೂ ಗಾಂಧೀತತ್ವದ ಅನುಯಾಯಿಗಳಾದುದರಿಂದ ಸಮಾಜಸೇವೆ ಇವರ ಬದುಕಿನ ಭಾಗವಾಗಿಯೇ ಜೀವನದುದ್ದಕ್ಕೂ ಬಂದಿತು. "ಬಲಗೈಯಲ್ಲಿ ನೀಡಿದ ದಾನ ಎಡಗೈಗೆ ತಿಳಿಯಬಾರದೆಂಬ" ಕೊಡವ ನುಡಿಯಂತೆ ನಡೆದವರು ಇವರು.

ಪತಿ ಪೂವಯ್ಯ ಸಾರ್ವಜನಿಕ ಹಿತಾಸಕ್ತಿಯ ಕುರಿತು ಹಲವಾರು ಲೇಖನಗಳನ್ನು ಪತ್ರಿಕೆಗಳಿಗೆ ಬರೆಯುತ್ತಿದ್ದರು. ಬಡವರಿಗೆ ಶಿಕ್ಷಣವನ್ನೊದಗಿಸಬೇಕೆಂಬ ಕಾಳಜಿಯನ್ನು ಹೊಂದಿದ್ದ ಇವರು ಊರಿನ ನೂರಾರು ಬಡವರ ಮನೆಗಳಿಗೆ ತೆರಳಿ ಅವರ ಮನವೊಲಿಸಿ ಮಕ್ಕಳಿಗಾಗಿ ಸರ್ಕಾರದಿಂದ ಶಾಲೆಯೊಂದನ್ನು ಹುಟ್ಟೂರಿನಲ್ಲಿ ಆರಂಭಿಸುವಲ್ಲಿ ಸಫಲರಾದರು.

ಪತಿ ಪೂವಯ್ಯನವರು ಸ್ವಾತಂತ್ರ್ಯ ಹೋರಾಟದಲ್ಲಿ ನೇರವಾಗಿ ಭಾಗವಹಿಸಿದರೆ ಪಾರ್ವತಿಯವರು ತಮ್ಮ ಆಭರಣಗಳನ್ನೆಲ್ಲಾ ಗಾಂಧೀಜಿಯವರಿಗೆ ನೀಡಿ, ಬ್ರಿಟಿಷರ ಫ್ಯಾಕ್ಟರಿಗಳಲ್ಲಿ ತಯಾರಾಗುತ್ತಿದ್ದ ಬಟ್ಟೆಗಳನ್ನು ವಿರೋಧಿಸಿ ಕೈಮಗ್ಗದ ಬಟ್ಟೆಗಳನ್ನು ಮಾತ್ರ ಬಳಸುವುದರ ಮೂಲಕ ಪರೋಕ್ಷವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿದ್ದರು.

೧೯೩೪ರಲ್ಲಿ ಗಾಂಧೀಜಿಯವರು ಕೊಡಗಿಗೆ ಭೇಟಿ ನೀಡಿದ್ದಾಗ ಕೊಡಗಿನ ಜನರು ಗಾಂಧೀಜಿಯವರ ನೇತೃತ್ವದಲ್ಲಿ ನಡೆಯುತ್ತಿದ್ದ ಸ್ವಾತಂತ್ರ್ಯ ಸಂಗ್ರಾಮಕ್ಕಾಗಿ ತಮ್ಮ ಕೈಲಾದ ಧನಸಹಾಯ ಮಾಡುತ್ತಿದ್ದರು. ಪಾರ್ವತಿಯವರು ಗಾಂಧೀಜಿಯವರನ್ನು ಭೇಟಿ ಮಾಡಿದ ಸಂದರ್ಭದಲ್ಲಿ ಜೊತೆಗಿದ್ದ ಅವರ ಅಕ್ಕನ ಪುಟ್ಟಮಗಳು ಚೆಂದಂಡ ಸೀತಮ್ಮ ತನ್ನ ಕೈಯಲ್ಲಿದ್ದ ಎರಡು ಚಿನ್ನದ ಬಳೆಗಳನ್ನು ತೆಗೆದುಕೊಟ್ಟಿದ್ದಳು. ಸಮಾಜಸೇವೆ ಇವರ ವಂಶದಲ್ಲೇ ರಕ್ತಗತವಾಗಿ ಹರಿದು ಬಂದಿತ್ತು ಎನ್ನುವುದಕ್ಕೆ ಇದೊಂದು ನಿದರ್ಶನ.

ಎರಡನೆಯ ಮಹಾಯುದ್ಧದ ಕಾಲದಲ್ಲಿ ರೆಡ್‌ಕ್ರಾಸ್ ಸಂಸ್ಥೆಯೊಂದಿಗೆ ಸೇರಿ ಪಾರ್ವತಿಯವರು ಜನಸೇವೆಯನ್ನು ಮಾಡಿದ್ದಾರೆ.

೧೯೪೨ರಲ್ಲಿ ಬ್ರಿಟಿಷ್ ಅಧಿಕಾರಿ ಐವರ್‌ಬುಲ್ ರವರು ಕನ್ಸಾಲಿಡೇಟೆಡ್ ಕಾಫಿ ಎಸ್ಟೇಟಿನ ವ್ಯವಸ್ಥಾಪಕ ನಿರ್ದೇಶಕರೂ, ಅಧ್ಯಕ್ಷರೂ ಆಗಿದ್ದ ಅವಧಿಯಲ್ಲಿ ಆರಂಭವಾದ ಕಿತ್ತಳೆ ಬೆಳೆಗಾರರ ಸಂಘದಲ್ಲಿ ಪೂವಯ್ಯನವರು ಕಾರ್ಯದರ್ಶಿಯಾಗಿ ನೇಮಕಗೊಂಡರು. ಆ ಸಂದರ್ಭದಲ್ಲಿ ಶ್ರೀಮತಿ ಕತ್ರೀನಾಬುಲ್‌ರವರೊಂದಿಗೆ ಸೇರಿ ಪಾರ್ವತಿಯವರು ಹಲವಾರು ಸಮಾಜಪರ ಕೆಲಸಗಳನ್ನು ಮಾಡಿದರು.

೧೯೫೬ರಲ್ಲಿ ಪಾಲಿಬೆಟ್ಟದ ನಿವಾಸಿಗಳಾದ ಬಿದ್ದಂಡ ಅಯ್ಯಮ್ಮ - ಪೂವಮ್ಮ ರೊಡಗೂಡಿ ಪಾಲಿಬೆಟ್ಟದಲ್ಲಿ ಮಹಿಳಾ ಸಮಾಜವನ್ನು ಆರಂಭಿಸಿದರು. ಹಲವಾರು ವರ್ಷಗಳವರೆಗೆ ತಾವೇ ಅಧ್ಯಕ್ಷರಾಗಿದ್ದು ಸಾಮಾಜಿಕವಾಗಿ ಸುತ್ತಮುತ್ತಲಿನ ಮಹಿಳೆಯರನ್ನು ಸಂಘಟಿಸಿದರು. ಅವರನ್ನು ಹಲವು ಚಟುವಟಿಕೆಗಳಲ್ಲಿ - (ಹೊಲಿಗೆ, ಸಾಂಸ್ಕೃತಿಕ ಕಾರ್ಯಕ್ರಮಗಳು, ಭಜನೆ ಮುಂತಾದವು) ತೊಡಗಿಸಿಕೊಳ್ಳಲು ಪ್ರೋತ್ಸಾಹಿಸಿ ಗ್ರಾಮೀಣ ಮಹಿಳೆಯರನ್ನು ಮುಖ್ಯವಾಹಿನಿಗೆ ತಂದರು.

ನೆರೆಹೊರೆಯ ಮಕ್ಕಳನ್ನು ಸಂಜೆಯ ವೇಳೆಗೆ ತಮ್ಮ ಮನೆಗೆ ಕರೆಸಿ ಅವರಿಗೆ ಸಂಗೀತ, ನೃತ್ಯಗಳನ್ನು ಕಲಿಸಿಕೊಡುತ್ತಿದ್ದರು. ಊರಿನ ಹಲವಾರು ಬಡಕುಟುಂಬಗಳಿಗೆ ಆಹಾರ, ಹಣದ ಸಹಾಯ ನೀಡುತ್ತಿದ್ದರು. ಇವರಿಂದ ಆರ್ಥಿಕ ನೆರವನ್ನು ಪಡೆದ ನೆರೆಮನೆಯ ಮಲಯಾಳಿ ಯುವಕನೊಬ ಇಂಜಿನಿಯರಿಂಗ್ ಪದವಿ ಪಡೆದು ಇಂದು ಇಂಗ್ಲೆಂಡಿನಲ್ಲಿ ವರ್ಲ್ಡ್ ಬ್ಯಾಂಕಿನಲ್ಲಿ ಪ್ರತಿಷ್ಠಿತ ಹುದ್ದೆಯಲ್ಲಿದ್ದಾನೆ. ಈತ ತನ್ನ ಹುಟ್ಟೂರಿಗೆ ಬಂದಿದ್ದಾಗ ತನಗೆ ವಿದ್ಯಾಭ್ಯಾಸ ಕೊಡಿಸಿದ ಪೂವಯ್ಯ-ಪಾರ್ವತಿ ದಂಪತಿಗಳ ಹೆಸರಿನಲ್ಲಿ ದತ್ತಿನಿಧಿಯೊಂದನ್ನು ಸ್ಥಾಪಿಸಿ ತನ್ನ ಕೃತಜ್ಞತೆಯನ್ನು ಮೆರೆದಿದ್ದಾನೆ.,

ಸಾಮಾಜಿಕವಾಗಿ ಹೊಂದಿದ್ದಷ್ಟೇ ಕಾಳಜಿಯನ್ನು ಅವರು ತಮ್ಮ ಕುಟುಂಬದ ಕಾರ್ಯಕಲಾಪಗಳಲ್ಲೂ ಇಟ್ಟಿದ್ದರು. ಸುಮಾರು ೪೦ ರ ದಶಕದಲ್ಲಿ ಪತಿ ಪೂವಯ್ಯನವರು ಅನಾರೋಗ್ಯದಿಂದ ಬೆಂಗಳೂರಿನಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಆ ಸಂದರ್ಭದಲ್ಲಿ ಮನೆಯಿಂದ ಸುಮಾರು ಎರಡು ಕಿ.ಮೀ.ನಷ್ಟು ಕಾಡಿನ ಹಾದಿಯನ್ನು ಕಾಲ್ನಡಿಗೆಯಲ್ಲೇ ಕ್ರಮಿಸಿ ತಮ್ಮ ತೋಟಕ್ಕೆ ಹೋಗುತ್ತಿದ್ದರು. ಬುತ್ತಿಕಟ್ಟಿಕೊಂಡು ಹೋಗಿ ತೋಟದಲ್ಲಿ ಕೆಲಸಕಾರ್ಯವನ್ನು ಮಾಡಿಸಿ ಬರುತ್ತಿದ್ದ ಇವರಲ್ಲಿ ಕೊಡಗಿನ ಸಹಜ ಧೈರ್ಯ್ಯ, ಪರಿಶ್ರಮಗಳೂ ಇದ್ದವು. - ಕವಯತ್ರಿಯೂ, ಕಥೆಗಾರ್ತಿಯೂ ಆಗಿದ್ದ ಪಾರ್ವತಿಯವರು ಕೊಡಗಿನಲ್ಲಿ ಸಾಹಿತ್ಯಪರ ಚಟುವಟಿಕೆಗಳನ್ನು ನಡೆಸುತ್ತಿದ್ದ ಸಂಘ ಸಂಸ್ಥೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ವಿರಾಜಪೇಟೆಯ ಕರ್ನಾಟಕ ಸಂಘ, ಕನ್ನಡ ಸಾಹಿತ್ಯ ಪರಿಷತ್ತು, ಕರ್ನಾಟಕ ಲೇಖಕಿಯರ ಸಂಘ, ಕೊಡವ ತಕ್ಕ ಪರಿಷತ್ ಮುಂತಾದ ಸಾಹಿತ್ಯಪರ ಸಂಸ್ಥೆಗಳಲ್ಲಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಉತ್ತಮ ಶಾರೀರವನ್ನು ಹೊಂದಿದ್ದು ಸಂಗೀತಾಭ್ಯಾಸ ಮಾಡಿದ್ದ ಅವರು ಸಾರ್ವಜನಿಕ ಸಭೆ ಸಮಾರಂಭಗಳಲ್ಲಿ ಹಾಡುಗಾರ್ತಿಯಾಗಿ, ಭಾಷಣಕಾರ್ತಿಯಾಗಿ ಭಾಗವಹಿಸುತ್ತಿದ್ದರು. ಹಲವು ಸಂದರ್ಭಗಳಲ್ಲಿ ಜಿಲ್ಲೆಯೊಳಗೆ ನಡೆದ ಸಾಹಿತ್ಯ ಸಮ್ಮೇಳನಗಳ ಅಧ್ಯಕ್ಷ ಸ್ಥಾನವನ್ನೂ ಇವರು ವಹಿಸಿದ್ದಾರೆ.

೧೯೯೦ ಹಲವು ವಿಷಯಗಳಿಗಾಗಿ ಪಾರ್ವತಿಯವರ ಬದುಕಿನ ಪರ್ವಕಾಲ. ದೀರ್ಘವರ್ಷಗಳ ಅವರ ಸಾಹಿತ್ಯಸೇವೆಗೆ ಮನ್ನಣೆ ಸಂದವರ್ಷವಿದು. ೧೯೯೦ ರಲ್ಲಿ ಮೈಸೂರಿನ ಜಗನ್ಮೋಹನ ಪ್ಯಾಲೆಸ್ಸಿನಲ್ಲಿ ನಡೆದ ದಸರಾ ಕವಿಗೋಷ್ಠಿಯಲ್ಲಿ ಕೊಡವ ಭಾಷೆಯ ಕವನವನ್ನು ಪ್ರಥಮ ಬಾರಿಗೆ ವಾಚಿಸಿದ ಅವಕಾಶ ಇವರದಾಯಿತು. ಈ ಸಂದರ್ಭದಲ್ಲಿ ಸಾಹಿತ್ಯ ಪರಿಷತ್ ವತಿಯಿಂದ ಪಾರ್ವತಿಪೂವಯ್ಯನವರನ್ನು ಸನ್ಮಾನಿಸಲಾಯಿತು. ೧೯೯೦ ರ ಮೇ ೫ ಮತ್ತು ೬ ರಂದು ಕೊಡಗಿನ ಪಾರಾಣೆಯಲ್ಲಿ ನಡೆದ ೫ ನೆಯ ಕೊಡವತಕ್ಕೆ ಸಮ್ಮೇಳನದ ಅಧ್ಯಕ್ಷರಾಗಿ

ಇವರನ್ನು ಕೊಡವ ತಕ್ಕ ಪರಿಷತ್ತು ಆಯ್ಕೆ ಮಾಡಿ ಇವರ ಸಾಹಿತ್ಯ ಸೇವೆಯನ್ನು ಗೌರವಿಸಿತು. ೧೯೯೦ ರ ಡಿಸೆಂಬರ್ ೭ ರಂದು ವಿರಾಜಪೇಟೆ ತಾಲೂಕು ಕನ್ನಡ ರಾಜ್ಯೋತ್ಸವ ಸಮಿತಿ ತನ್ನ ೩೪ ನೆಯ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭದಲ್ಲಿ ಪಾರ್ವತಿ ಪೂವಯ್ಯನವರನ್ನು ನಾಡು-ನುಡಿಯ ಸೇವೆಗಾಗಿ ಸನ್ಮಾನಿಸಿತು.

ದಾನಿಗಳೆಂದೇ ಗುರುತಿಸಿಕೊಂಡ ಪೂವಯ್ಯ-ಪಾರ್ವತಿ ದಂಪತಿಗಳು ಕೊನೆಗಾಲದವರೆಗೂ ಪರರಿಗೆ ನೀಡಿ ಸಂತೋಷಪಟ್ಟವರು. ಪತಿ ಪೂವಯ್ಯನವರು ೧೯೮೭ ನೆಯ ಫೆಬ್ರವರಿ ೮ ರಂದು ವಿಧಿವಶರಾದರು. ಮಕ್ಕಳು, ಮೊಮ್ಮಕ್ಕಳೊಂದಿಗೆ, ನೆರೆಹೊರೆ, ನೆಂಟರಿಷ್ಟರೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿದ್ದ ಪಾರ್ವತಿಯವರು ತುಂಬು ಜೀವನವನ್ನು ನಡೆಸಿದವರು. ತನಗೆ ಬಂದ ಎಲ್ಲಾ ಕಷ್ಟಗಳನ್ನು ನಗುನಗುತ್ತಲೇ ಗಟ್ಟಿ ಮನಸ್ಸಿನಿಂದಲೇ ಸ್ವೀಕರಿಸಿದವರು. ತಮ್ಮ ಕೊನೆಯ ದಿನಗಳಲ್ಲಿ ಅನಾರೋಗ್ಯದಿಂದ ಆಸ್ಪತ್ರೆಯಲ್ಲಿ ಮಲಗಿದ್ದಾಗ ನೋವಿನ ನಡುವೆಯೂ ಬಂದವರೊಡನೆ ಹಾಸ್ಯಮಾಡುತ್ತಾ ಲವಲವಿಕೆಯಿಂದ ಮಾತನಾಡುತ್ತಿದ್ದರು. ಇವರು ೧೯೯೪ರ ಫೆಬ್ರವರಿ ೧೧ ರಂದು ದೈವಾಧೀನರಾದರು.

ಹೆತ್ತವರ ಸಮಾಜಸೇವೆ, ಆದರ್ಶಗಳನ್ನು ಮೈಗೂಡಿಸಿಕೊಂಡ ಮಗ ಉತ್ತಪ್ಪನವರು ಪೂವಯ್ಯ ಪಾರ್ವತಿ ದಂಪತಿಗಳ ಹೆಸರಿನಲ್ಲಿ ದತ್ತಿ ನಿಧಿಯೊಂದನ್ನು ವಿರಾಜಪೇಟೆಯ ಕಾವೇರಿ ಪದವಿ ಕಾಲೇಜಿನಲ್ಲಿ ಸ್ಥಾಪಿಸಿದ್ದಾರೆ. ವಿವೇಕಾನಂದರ ಬದುಕು ಬರಹಗಳಿಂದ ಪ್ರಭಾವಿತರಾದ ಇವರು ಪ್ರತಿ ವರ್ಷ ಜನವರಿ ೧೨ರ ವಿವೇಕಾನಂದ ಜಯಂತಿಯಂದು ಸ್ವಾಮಿ ವಿವೇಕಾನಂದರ ಬದುಕು, ಬರಹಗಳ ಕುರಿತಂತೆ ಇಂಗ್ಲಿಷ್ ಹಾಗೂ ಕನ್ನಡದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ಜಿಲ್ಲಾ ಮಟ್ಟದ ಭಾಷಣ ಸ್ಪರ್ಧೆ ನಡೆಸುವಂತೆ ಸೂಚಿಸಿದ್ದಾರೆ.

ಪಾರ್ವತಿಯವರ ಮನೆಗೆ ಬಂದು ಅವರ ಸಂಸಾರದೊಂದಿಗೆ ಒಡನಾಡಿ ಕೊಡಗಿನ ಪ್ರಕೃತಿ ಸೌಂದಯ್ಯವನ್ನು, ಆಳವಾದ ಮೌನವನ್ನು ಮೆಚ್ಚಿಕೊಂಡ ಜೆ.ಓ. ಟೆರಿಯವರು 'PEACE' (you can't find it in the Marketplace) ಎಂಬ ಕವನವನ್ನು ಬರೆದು ಪಾರ್ವತಿಯವರಿಗೆ ಅರ್ಪಿಸಿದ್ದಾರೆ.

'ಕೋಶ ಓದು ದೇಶ ನೋಡು' ಎಂಬಂತೆ ಓದು ಬರಹದ ಜೊತೆಗೆ ಪ್ರವಾಸವೂ ಇವರಿಗೆ ಸಂತೋಷದ ವಿಷಯವಾಗಿತ್ತು. ೧೯೭೮ ರಲ್ಲಿ ಮುಂಬಯಿ, ಆಗ್ರ, ದೆಹಲಿ, ಶ್ರೀನಗರ, ಬನಾರಸ್, ಕಲ್ಕತ್ತ, ಮದ್ರಾಸು, ೧೯೮೨ರಲ್ಲಿ ಮಧುರೈ, ರಾಮೇಶ್ವರ, ಕನ್ಯಾಕುಮಾರಿ, ತಿರುವನಂತಪುರ, ಗುರುವಾಯೂರ್‌ಗಳಿಗೆ ಹೋಗಿ ಬಂದಿದ್ದಾರೆ. ೧೯೯೧ರಲ್ಲಿ ದೆಹಲಿಯಲ್ಲಿ ಸುಮಾರು ಎರಡು ತಿಂಗಳ ಕಾಲ ತಂಗಿದ್ದು ಆ ಹೊತ್ತಿನಲ್ಲಿ ಕಥೆಯನ್ನು ಬರೆದಿದ್ದಾರೆ.

# ಸಾಹಿತ್ಯಕ ರಚನೆಗಳು

ಬಾಲ್ಯದಿಂದಲೇ ಸಂಗೀತ, ಸಾಹಿತ್ಯದ ಕಡೆಗೆ ಆಸಕ್ತಿ ಬೆಳೆಸಿಕೊಂಡಿದ್ದ ಪಾರ್ವತಿಯವರು ತಮ್ಮ ಹದಿನೈದರ ಹರೆಯದಲ್ಲೇ ಕವನಗಳನ್ನು, ಕಥೆಗಳನ್ನು ಬರೆಯಲಾರಂಭಿಸಿದರು.

ಭಾರತದ ಸ್ವಾತಂತ್ರ್ಯದ, ಮಹಾತ್ಮಗಾಂಧೀಜಿಯವರ ಕುರಿತು ಕೊಡವ ಭಾಷೆಯಲ್ಲಿ ಕವನವೊಂದನ್ನು ರಚಿಸಿ ೧೯೪೭ ರ ಅಕ್ಟೋಬರ್ ೧ ರಂದು ಸಭೆಯಲ್ಲಿ ಹಾಡಿದ್ದಾರೆ. ೧೯೬೧ರ ಆಗಸ್ಟ್ ೧೫ ರಂದು ಸ್ವಾತಂತ್ರ್ಯೋತ್ಸವದ ಸಮಾರಂಭವೊಂದರಲ್ಲಿ 'ಸ್ವರಾಜ್ಯ' ಎಂಬ ಕವನ ಬರೆದು ಹಾಡಿದರು. ಈ ಕವನವನ್ನು ಖ್ಯಾತಕೊಡವ ಕವಿ ಹರದಾಸ ಅಪ್ಪಚ್ಚನವರ 'ಅಂಬಿಕೆ ಸುಗಮಾಡ್ ಈ ಜಗಕ್' ಎಂಬ ಪ್ರಸಿದ್ಧ ಹಾಡಿನ ಧಾಟಿಯಲ್ಲಿ ಬರೆದಿದ್ದಾರೆ. (ಈ ಕವನಗಳನ್ನು ಅನುವಾದ ಸಮೇತವಾಗಿ ಅನುಬಂಧದಲ್ಲಿ ನೀಡಲಾಗಿದೆ).

ಉತ್ತಮ ಕಂಠಸಿರಿಯನ್ನು ಹೊಂದಿದ್ದ ಪಾರ್ವತಿಯವರು ಹಲವಾರು ಕವನಗಳನ್ನು ಸಂದರ್ಭಕ್ಕೆ ತಕ್ಕಂತೆ ರಚಿಸಿ ಸಭೆ ಸಮಾರಂಭಗಳಲ್ಲಿ ಹಾಡುತ್ತಿದ್ದರು. ಕೆಲವು ಕವನಗಳು ಹಾಗೂ ಕಥೆಗಳನ್ನು ಸೇರಿಸಿದಂತೆ ಇವರು ಮೂರು ಕೃತಿಗಳನ್ನು ಪ್ರಕಟಿಸಿದ್ದಾರೆ. ಕಥೆಗಳೊಂದಿಗೆ ಕವನಗಳನ್ನು ಜೊತೆಯಾಗಿ ಒಂದೇ ಕೃತಿಯೊಳಗೆ ಪ್ರಕಟಿಸಿರುವುದಕ್ಕೆ "ಗದ್ಯಭಾಗವನ್ನು ಓದಿ ಆಯಾಸಗೊಂಡ ವಾಚಕರ ಬೇಸರವನ್ನು ಪರಿಹರಿಸಲೋಸುಗ ಇದರಲ್ಲಿ ೧೫ ಚಿಕ್ಕ ಕವನಗಳನ್ನು ಜೋಡಿಸಿರುವೆನು. 'ಗಾನ ವಿದ್ಯವು ಲೇಸು.....!!' ಎಂಬ ಸರ್ವಜ್ಞ ಕವಿಗಳ ವಚನ ಸತ್ಯ, ಪದಪದ್ಯಗಳಿಗೆ ಮಾರು ಹೋಗುವಂತೆ ಮಾನವನ ಮನವು ಗದ್ಯಕ್ಕೆ ಬಲಿಯಾಗದು. ಮಾನವರೇಕೆ? ಮೃಗ ಪಕ್ಷಿಗಳೂ, ಮರಗಿಡಗಳೂ ಕೂಡ ಮೃದು ಮಧುರ ಗಾನಕ್ಕೆ ತನ್ಮಯರಾಗುವರು ಎಂದು ತಜ್ಞರು ಕಂಡು ಹಿಡಿದಿರುವರು" ಎಂದು ಕೃತಿಯ ಮುನ್ನುಡಿಯಲ್ಲಿ ಅವರೇ ಹೇಳಿಕೊಂಡಿದ್ದಾರೆ.

ಇವರ ಪ್ರಕಟಿತ ಕೃತಿಗಳೆಂದರೆ:

೧) ೧೯೭೬ರಲ್ಲಿ 'ಕೊಡಗಿನ ಸಣ್ಣ ಕಥೆಗಳು ಮತ್ತು ಕವನಗಳು'.

೨) ೧೯೭೭ರಲ್ಲಿ 'ಕೊಡಗಿನ ಕಥೆಗಳು' (ಕಥೆಗಳು ಮತ್ತು ಕವನಗಳು)

೩) ೧೯೮೦ ರಲ್ಲಿ 'ಭುಗಿಲ ಗೊಂಚಲು'

'ವಿಧಿವಿಲಾಸ' ಎಂಬ ಕಾದಂಬರಿಯನ್ನು ಇವರು ಬರೆದಿದ್ದು ಪ್ರಕಟವಾಗಿಲ್ಲ. ಇದರೊಂದಿಗೆ ಕೆಲವಾರು ಕಥೆ, ಕವನಗಳೂ ಅಪ್ರಕಟಿತವಾಗಿಯೇ ಉಳಿದುಕೊಂಡಿವೆ.

## ಕೊಡಗಿನ ಸಣ್ಣಕಥೆಗಳು ಮತ್ತು ಕವನಗಳು

೧೯೭೬ರಲ್ಲಿ ತಮ್ಮದೇ ಪ್ರಕಾಶನದ ಮೂಲಕ ಈ ಕೃತಿಯನ್ನಿವರು ಹೊರತಂದಿದ್ದಾರೆ. ಕೃತಿಯ ಪೀಠಿಕೆಯಲ್ಲಿ ತಿಳಿಸಿರುವಂತೆ ಇದು ಅವರ ಎರಡನೆಯ ಕೃತಿಯಾದರೂ ಪ್ರಕಟಗೊಂಡ ಮೊದಲಕೃತಿ. ಇದರಲ್ಲಿ ೩೦ ಕಥೆಗಳು ಹಾಗೂ ೧೫ ಕವನಗಳಿವೆ. ಆ ಕಾಲದಲ್ಲಿ ಕೊಡಗಿನಲ್ಲಿ ಪ್ರಚಲಿತವಿದ್ದ ಅಪೂರ್ವ ಜನಪದ ಕಥೆಗಳ ಸಂಗ್ರಹವಾಗಿ ಈ ಕೃತಿಗೆ ಮಹತ್ವದ ಸ್ಥಾನವಿದೆ.

"ಅಜ್ಜಿಯ ಬಾಯಿಂದ ಮಗಳ ಕಿವಿಗೆ, ಮಗಳ ಬಾಯಿಂದ ಮೊಮ್ಮಕ್ಕಳ ಕಿವಿಗೆ - ಹೀಗೆ ಕಿವಿಯಿಂದ ಕಿವಿಗೆ ಕೇಳಿಬಂದ ಕಥೆಗಳನ್ನು ಇಲ್ಲಿ ಸರಳ ಭಾಷೆಯಲ್ಲಿ ಸಂಗ್ರಹಿಸಿ ಕೊಡಲಾಗಿದೆ. ನಮ್ಮ ನಾಡಿನ ಈ ಕಥೆಗಳು ಅಳಿಯದೆ ಉಳಿಯಬೇಕು. ನಮ್ಮ ಮುಂದಿನ ಮಕ್ಕಳಿಗೆ ಇವು ತಿಳಿಯಬೇಕು ಎಂಬ ಭಾವನೆಯಿಂದ ಮಕ್ಕಳಿಗೆ ತಕ್ಕುದಾದ ಸರಳ ಶೈಲಿಯಲ್ಲಿ ಇವುಗಳನ್ನು ಬರೆದಿರುವುದಾಗಿ ಲೇಖಕಿ ತಿಳಿಸಿದ್ದಾರೆ.

ಮಕ್ಕಳನ್ನು ಗಮನದಲ್ಲಿಟ್ಟುಕೊಂಡೇ ಕಥೆಗಳನ್ನು ಬರವಣಿಗೆಗೆ ಇಳಿಸಿರುವುದರಿಂದ ಇವುಗಳಲ್ಲಿ ಸತ್ಯ, ನೀತಿ, ಸಹನೆ, ಪರೋಪಕಾರದಂತಹ ಗುಣಗಳನ್ನುಳ್ಳ ನೀತಿಬೋಧಕ ಅಂಶಗಳೇ ಹೆಚ್ಚಾಗಿವೆ. ಹಾಗೆಯೇ ಅನ್ಯಾಯ, ಮೋಸ, ಅತಿಯಾಸೆ, ಅನಾಚಾರಗಳನ್ನು ಮಾಡಿದಾಗ ತಪ್ಪದೆ ತಕ್ಕ ಶಿಕ್ಷೆಯಾಗುವುದರ ಅರಿವನ್ನು ಮೂಡಿಸುವ ಕಥೆಗಳೂ ಇಲ್ಲಿವೆ. ಹೆಜ್ಜೆಹೆಜ್ಜೆಗೂ ಎಳೆಯರ ಕುತೂಹಲವನ್ನು ಕೆರಳಿಸುವ ರೀತಿಯಲ್ಲಿ ಇಲ್ಲಿನ ಕಥಾಸಂವಿಧಾನವಿದೆ. ಮಾನವ ಮೃಗಗಳೊಡನೆ ಮಾತನಾಡುವುದು, ಪ್ರಾಣಿಗಳು ಮನುಷ್ಯನಂತೆ ವರ್ತಿಸುವುದು, ಮನುಷ್ಯ ಗರ್ಭದಲ್ಲಿ ನಾಯಿಮರಿಗಳ ಜನನ, ನಾಯಿಯ ಗರ್ಭದಲ್ಲಿ ಮಾನವ ಶಿಶುವಿನ ಜನನ ಮುಂತಾದವು. ವೈಜ್ಞಾನಿಕ ದೃಷ್ಟಿಯಿಂದ ಅಸಹಜವಾಗಿ ಕಂಡರೂ 'ಪಂಚತಂತ್ರ' ದಂತಹ ಕಥಾಲೋಕದಲ್ಲಿ ಬಂದಿರುವಂತೆ ಇವು ಚಮತ್ಕಾರಗಳನ್ನು ಹೆಚ್ಚಿಸುವಲ್ಲಿ ಪ್ರಧಾನಪಾತ್ರವಹಿಸಿವೆ ಎನ್ನಬಹುದು. ಇಂತಹ ಅದ್ಭುತ ವಿಚಾರಗಳೇ ಕಥೆಗಳ ಆಕರ್ಷಣೆಯನ್ನು ಹೆಚ್ಚಿಸಿವೆ ಎಂಬ ಅಭಿಪ್ರಾಯವನ್ನು ಪ್ರೊ. ರಾಮಕೃಷ್ಣ ಉಡುಪರು ತಮ್ಮ ಮುನ್ನುಡಿಯ ಮಾತುಗಳಲ್ಲಿ ವ್ಯಕ್ತಪಡಿಸಿರುವುದು ಸರಿಯಾಗಿಯೇ ಇದೆ.

'ಪ್ರತಿಫಲ' ಕಥೆಯಲ್ಲಿ ನಾಯಿಯ ಹೊಟ್ಟೆಯಲ್ಲಿ ಹುಟ್ಟಿದ ಇಬ್ಬರು ಮನುಷ್ಯ ಹೆಣ್ಣು ಮಕ್ಕಳು ಮುಂದೆ ರಾಜಕುಮಾರರನ್ನು ಮದುವೆಯಾಗುತ್ತಾರೆ. ಹಿರಿಯ ಮಗಳು ತಾಯಿ ನಾಯಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಾಳೆ. ಆದರೆ ಕಿರಿಯವಳು ತನ್ನ ತಾಯಿ ನಾಯಿ ಎಂದು ಹೇಳಲು ಅವಮಾನಗೊಂಡು ಅದನ್ನು ಕಲ್ಲುಹೊಡೆದು ಓಡಿಸುತ್ತಾಳೆ. ಗಾಯಗೊಂಡ ನಾಯಿ ಹಿರಿಮಗಳ ಮನೆಯಲ್ಲಿ ಕೆಲವು ದಿವಸಗಳಲ್ಲಿ ಪ್ರಾಣಬಿಡುತ್ತದೆ. ಸಾಯುವಾಗ ತನ್ನ ದೇಹವನ್ನು ಪೆಟ್ಟಿಗೆಯಲ್ಲಿಟ್ಟು ಮುಚ್ಚಿ ಮೂರು ದಿನಗಳ ನಂತರ ತೆರೆದು ನೋಡುವಂತೆ ತಿಳಿಸಿರುತ್ತದೆ. ಹಿರಿಯ ಮಗಳು ಹಾಗೇ ಮಾಡಿ ನೋಡಿದಾಗ ಆ ಪೆಟ್ಟಿಗೆಯ ತುಂಬಾ ನವರತ್ನಗಳಿರುತ್ತವೆ. ಈ ವಿಚಾರವನ್ನು ಕೇಳಿದ ಕಿರಿಯ ಮಗಳಿಗೆ ಹೊಟ್ಟೆಕಿಚ್ಚಾಗಿ ಆಕೆ ದಾರಿಯಲ್ಲಿ ಹೋಗುತ್ತಿದ್ದ ನಾಯಿಯೊಂದನ್ನು ಕೊಲ್ಲಿಸಿ

ಪೆಟ್ಟಿಗೆಯಲ್ಲಿಟ್ಟು ಮೂರು ದಿವಸ ಕಳೆದು ನೋಡಿದರೆ ಅದರ ತುಂಬಾ ಹುಳಗಳು ತುಂಬಿಕೊಂಡಿರುತ್ತವೆ. ಆಗ ತನ್ನ ಅವಿವೇಕಕ್ಕೆ ಮರುಗುತ್ತಾಳೆ. ಹೀಗೆ ಆಕರ್ಷಕವಾಗಿ ಪ್ರಾಣಿರೂಪಕಗಳ ಮೂಲಕ 'ನಾಯಿಯಾದರೂ ತಾಯಿ' ಎಂದು 'ತಾಯಿ'ಯ ಮಹತ್ತ್ವವನ್ನು ಈ ಕಥೆ ತಿಳಿಸುತ್ತದೆ. 'ಮೀನುರಾಜ' ಕಥೆಯಲ್ಲಿ ಸರ್ಪವೊಂದರ ಸಹಾಯದಿಂದ ಬದುಕನ್ನು ಕಂಡ ಬಲಮಗಳ ಕಥೆ ಇದ್ದರೆ 'ಮೋಸ' ಗುಳ್ಳೆ ನರಿಯೊಂದು ಅಕ್ಕ ತಂಗಿಯರಿಗೆ ಮೋಸಮಾಡಿದ ಕಥೆಯಾಗಿದೆ.

ಕಥೆಗಳಲ್ಲಿ ಘಟನೆಗಳು, ಪಾತ್ರಗಳು, ಎಲ್ಲವೂ ಕೊಡವ ಪರಿಸರದಲ್ಲೇ ನಡೆಯುವುದರಿಂದ ಕೊಡಗಿನ ಹಲವು ಸಂದರ್ಭದ ಸಾಮಾಜಿಕ ಸನ್ನಿವೇಶಗಳನ್ನು ಒಳಗೊಂಡಿವೆ. ಕೆಲವಾರು ಕಥೆಗಳಲ್ಲಿ ನಡುನಡುವೆ ಕೊಡವ ಭಾಷೆಯ ಪದಗಳನ್ನೇ ಬಳಸಿರುವುದು ಕಂಡುಬರುತ್ತದೆ. ಇದು ಮತ್ತಷ್ಟು ಕಥೆಗೆ ಆತ್ಮೀಯತೆಯನ್ನು ತಂದುಕೊಟ್ಟಿದೆ ಎನ್ನಬಹುದು. ನಿದರ್ಶನಕ್ಕೆ "ಬುತ್ತಿ ಅನ್ನ" ಕಥೆಯನ್ನು ಗಮನಿಸಬಹುದು. ಬಸುರಿ ಗೌರಿ ಎಲೆಯಲ್ಲಿ ಒಂದಗುಳು ಅನ್ನವನ್ನೂ ಬಿಡದೆ ಉಂಡು ಎಲೆಯನ್ನು ಬಿಸಾಡದೆ ಹೂತು ಹಾಕುತ್ತಾಳೆ. ಇದನ್ನು ಕಂಡ ಕಾಗೆಯೊಂದು ಆಕೆಯ ಮೇಲೆ ಕೋಪಗೊಂಡು ಗೌರಿಯಲ್ಲಿ ಆಸೆ ಹುಟ್ಟಿಸಲು ಕೆಂಪಾದ ಕಿತ್ತಳೆ ಹಣ್ಣನ್ನು ತಂದು ಆಕೆಯನ್ನು ನೋಡುತ್ತಾ ತಿನ್ನಲಾರಂಭಿಸುತ್ತದೆ. ಗೌರಿ ಆಸೆ ತಡೆಯಲಾರದೆ ಕಾಗೆಯಿಂದ ಕಿತ್ತಳೆ ತೋಟದ ದಾರಿ ಕೇಳಿಕೊಂಡು ಹಣ್ಣು ತರಲು ಹೋಗುತ್ತಾಳೆ. ಆ ಸಂದರ್ಭದಲ್ಲಿ ನಡುವಿನಲ್ಲಿ ಒಂದು ಹೊಳೆ ದಾಟಬೇಕಾಗಿರುತ್ತದೆ. ಹೆಣ್ಣು ಮಗುವಾದರೆ ತನಗೆ ಕೊಡಬೇಕೆಂದು ಗೌರಿಯಿಂದ ಮಾತುಪಡೆದುಕೊಂಡ ಹೊಳೆ ಇಬ್ಭಾಗವಾಗಿ ಗೌರಿಗೆ ದಾರಿಬಿಟ್ಟುಕೊಡುತ್ತದೆ. ಮುಂದೆ ಗೌರಿಗೆ ಹೆಣ್ಣು ಮಗುವಾಗುತ್ತದೆ. ಆಕೆ ದೊಡ್ಡವಳಾದರೂ ಗೌರಿ ಮಗಳನ್ನು ನದಿಗೆ ಕೊಡದಿರುವಾಗ ನದಿಯೇ ಮನೆ ಬಾಗಿಲಿಗೆ ಮಗಳನ್ನು ಕೇಳುತ್ತಾ ಬರುತ್ತದೆ. ಅಂಗಳದಲ್ಲಿ ಹೂಕುಯ್ಯುತ್ತಿದ್ದ ಮಗಳು ಸ್ವಲ್ಪಸ್ವಲ್ಪವಾಗಿ ನದಿಯಲ್ಲಿ ಮುಳುಗಲಾರಂಭಿಸುತ್ತಾಳೆ. ಈ ಸಂದರ್ಭದಲ್ಲಿ ಮಗಳು ತಾಯಿಯನ್ನು ಸಹಾಯಕ್ಕಾಗಿ ಕರೆಯುವ ಭಾಗ ಕೊಡವ ಭಾಷೆಯಲ್ಲಿದೆ. ಆತಂಕದ ಕ್ಷಣಗಳಲ್ಲಿ ನಮ್ಮ ಮೂಲ ಭಾಷೆ, ಗುಣಗಳೇ ಪ್ರಕಟವಾಗುವಂತೆ ಈ ಘಟನೆ ಕಥೆಯ ಸಾಂದ್ರತೆಯನ್ನು ಮತ್ತಷ್ಟು ಹೆಚ್ಚಿಸಿದೆ.

ಇಲ್ಲಿ ಬರುವ 'ಉಪ್ಪಿನಕಾಯಿ' ಕಥೆಯಲ್ಲಿ ಅತ್ತೆ ತಾನು ಮಾಡಿದ ಉಪ್ಪಿನ ಕಾಯಿಯನ್ನು ತನ್ನ ಅನುಮತಿ ಇಲ್ಲದೆ ತಿಂದ ಸೊಸೆಯನ್ನು ಹುಲ್ಲಿನ ನಡುವೆ ಕೂರಿಸಿ ಬೆಂಕಿಕೊಡಲು ತೀರ್ಮಾನಿಸುತ್ತಾಳೆ. ಕೊನೆಯಗಳಿಗೆಯಲ್ಲಿ ಬೆಂಕಿಪೊಟ್ಟಣ ಮರೆತು ಬಂದದ್ದರಿಂದ ಮನೆಗೆ ಮರಳಿ ಬೆಂಕಿಪೊಟ್ಟಣ ತರುವಷ್ಟರಲ್ಲಿ ಸೊಸೆ ತಪ್ಪಿಸಿಕೊಂಡು ಬದುಕಿ ಉಳಿಯುತ್ತಾಳೆ. ರಾತ್ರಿ ಕಳ್ಳರು ಕದ್ದು ತಂದಿಟ್ಟ ಚಿನದ ಗಂಟಿನೊಂದಿಗೆ ಹಿಂತಿರುಗಿದ ಸೊಸೆಯನ್ನು ನೋಡಿದ ಅತ್ತೆಗೆ ತಾನೂ ಬೆಂಕಿಯಲಿ ಬೆಂದು ಚಿನ್ನತರಲು ಆಸೆಯಾಗುತ್ತದೆ. ಅತ್ತೆಗೆ ಬೆಂಕಿ ಹಚ್ಚಬೇಕಾದಾಗ ಮರೆಯದೆ ಬೆಂಕಿಪೊಟ್ಟಣವನ್ನು ಕೊಂಡೊಯ್ದು ಸೊಸೆ ಅತ್ತೆಯನ್ನು ಕೊಲ್ಲುತ್ತಾಳೆ.

ಉತ್ತರ ಕರ್ನಾಟಕದ ಜನಪದ ಕಥೆಗಳಲ್ಲೂ ಇದೇ ಸಾರಾಂಶ ಹೊಂದಿರುವ ಕಥೆ ಇದೆ. ಅಲ್ಲಿ ಸೊಸೆ ನೂಲು ತೆಗೆಯಲು ಸೋಮಾರಿಯಾದವಳನ್ನು ಅತ್ತೆ ಬೆಂಕಿಕೊಟ್ಟು ಸಾಯಿಸಲು ಪ್ರಯತ್ನಿಸುತ್ತಾಳೆ. ಆದರೆ ಸೊಸೆಯ ಚಾಣಾಕ್ಷತನದಿಂದ ಅತ್ತೆಯೇ ಸಾಯಬೇಕಾಗುತ್ತದೆ.

ಇಲ್ಲಿ ಬಂದಿರುವ ಬಹುಪಾಲು ಕಥೆಗಳು ಆಕರ್ಷಕವಾಗಿವೆ. ನಿರರ್ಗಳವಾಗಿ ಓದಿಸಿಕೊಂಡು ಹೋಗುವುದರಲ್ಲಿ ಎರಡು ಮಾತಿಲ್ಲ. ಕೊಡವ ಸೀಮೆಯ ಈ ಜನಪದ ಕಥೆಗಳನ್ನು ಕನ್ನಡದಲ್ಲಿ ಕೊಟ್ಟಿರುವುದರಲ್ಲಿ ಲೇಖಕಿಯ ಬರವಣಿಗೆಯ ವಿಶೇಷ ಶೈಲಿಯ, ಕಲೆಗಾರಿಕೆಯ ಪರಿಚಯವಾಗುತ್ತದೆ. ನಿಜ ಆದರೆ ಈ ಎಲ್ಲಾ ಕಥೆಗಳನ್ನು ಮೂಲದ ಕೊಡವ ಭಾಷೆಯಲ್ಲಿಯೇ ಸಂಗ್ರಹಿಸಿಕೊಟ್ಟಿದ್ದರೆ ಅವುಗಳ ಮಹತ್ವ ಮತ್ತಷ್ಟು ಹೆಚ್ಚಾಗುತ್ತಿತ್ತೇನೋ. ಇಲ್ಲಿರುವ ಹೆಚ್ಚಿನ ಕಥೆಗಳು ನಾನು ಬಾಲ್ಯದಲ್ಲಿ ನನ್ನ ಅಜ್ಜಿ, ಅಮ್ಮನಿಂದ ಕೇಳಿದ ಜನಪದ ಕಥೆಗಳೇ ಆಗಿವೆ.

ಒಂದಕ್ಕಿಂತ ಒಂದು ಆಕರ್ಷಕ ವಸ್ತು ವೈವಿಧ್ಯತೆಯ ಕಥೆಗಳ ಜೊತೆಗೆ ಪ್ರಕೃತಿ ದೇವಿಯ ವಿವಿಧ ವಿನ್ಯಾಸಗಳ ಕುರಿತಂತೆ ಕವನಗಳನ್ನೂ ಇಲ್ಲಿ ಸೇರಿಸಿದ್ದಾರೆ. ಮಳೆಗಾಲ, ಕಾಮನಬಿಲ್ಲು, ಬನಸಿರಿ, ಮಿಂಚು, ಮುಗಿಲು ಹೀಗೆ ವೈವಿಧ್ಯಮಯ ಕವನಗಳಲ್ಲಿ ಕೊಡಗಿನ ಪ್ರಾಕೃತಿಕ ಸೌಂದರ್ಯವನ್ನು ಎತ್ತಿ ಹಿಡಿದಿದ್ದಾರೆ. ಕಾವೇರಿಯ ಕುರಿತ ಸ್ತುತಿಪದ್ಯದಿಂದ ಕವನಭಾಗ ಆರಂಭವಾಗಿದೆ.

ಸುಲಭಶೈಲಿಯಲ್ಲಿ ಸಾಗುವ ಇಲ್ಲಿನ ಕವನಗಳೂ ಕೂಡ ಮಕ್ಕಳಿಗಾಗಿಯೇ ಬರೆದಂತಿವೆ. ನಿದರ್ಶನಕ್ಕೆ 'ಮಳೆಗಾಲ' ಕವನದ ಕೆಲವು ಸಾಲುಗಳನ್ನು ನೋಡಬಹುದು.

“ಕಾಳ ಮುಗಿಲು
ಒಂದು ಗೂಡಿ
ಮಳೆಯ ಗಾಲ
ಬಂತು ನೋಡಿ
ಕಪ್ಪೆ ಕರಕರ
ಕೂಗುವಲ್ಲಿ
ಬಿರುಸುಗಾಳಿ
ಬೀಸಿತಲ್ಲಿ.....”||

ಎಂಬಲ್ಲಿ 'ಕಪ್ಪೆ ವಟಗುಟ್ಟಲಾರಂಭಿಸಿದಾಗ ಮಳೆಗಾಲದ ತೀವ್ರತೆ ಹೆಚ್ಚಾಗುತ್ತದೆ' ಎಂಬ ಕೊಡಗಿನ ಜನಪದ ನಂಬಿಕೆಯನ್ನೂ ಬಳಸಿಕೊಂಡಿದ್ದಾರೆ. ಇಲ್ಲಿನ ಎಲ್ಲಾ ಕವನಗಳು ೩, ೪ ಮಾತ್ರೆಯ ಗಣಗಳಲ್ಲಿ ಸಾಗುವಂತೆ ಸರಳ ಬಂಧದಲ್ಲಿ ರಚಿತವಾಗಿವೆ.

## ೨. ಕೊಡಗಿನ ಕಥೆಗಳು

## (ಕಥೆಗಳು ಮತ್ತು ಕವನಗಳು)

೧೯೭೭ರಲ್ಲಿ ತಮ್ಮದೇ ಪ್ರಕಾಶನವಾದ ಶ್ರೀಮತಿ. ಕೆ.ಪಿ. ಪೂವಯ್ಯ, ಲಕ್ಷ್ಮಿ ತೋಟ, ಪಾಲಿಬೆಟ್ಟದ ಮುಖಾಂತರ ಈ ಕೃತಿಯನ್ನು ಪ್ರಕಟಿಸಿದ್ದಾರೆ. ಈ ಕೃತಿಯಲ್ಲಿ ಕೊಡಗಿನಲ್ಲಿ ನಡೆದ ಘಟನೆಗಳನ್ನೇ ಆಧಾರವಾಗಿಟ್ಟುಕೊಂಡು ಕಥೆ ರಚಿಸಿರುವುದಾಗ ಲೇಖಕಿ ಮುನ್ನುಡಿಯ ಭಾಗದಲ್ಲಿ ಹೇಳಿಕೊಂಡಿದ್ದಾರೆ. ಅದಲ್ಲದೆ ಈ ಕೃತಿ ಹೊರಬರಲು ಆ ಕಾಲದ ಕೊಡಗಿನ ಪ್ರಮುಖ ಸಾಹಿತಿಗಳಲ್ಲೊಬ್ಬರಾದ ಬಿ.ಡಿ. ಗಣಪತಿಯವರು ಕಾರಣಕರ್ತರಾಗಿದ್ದುದನ್ನು ನೆನಪಿಸಿಕೊಳ್ಳುತ್ತಾರೆ.

ಈ ಕೃತಿಯಲ್ಲಿ ಒಟ್ಟು ೧೨ ಕಥೆಗಳು ಹಾಗೂ ೨೯ ಕವನಗಳಿವೆ. ಆರಂಭದಲ್ಲಿ ಕೃತಿಯ ಕುರಿತು 'ಎರಡು ಮಾತು'ಗಳನ್ನು ಬರೆದ ಕನ್ನಡದ ಪ್ರಮುಖ ಕವಿ ಜಿ.ಪಿ. ರಾಜರತ್ನಂ ರವರು ಇವರ ಕಥೆ-ಕವನಗಳನ್ನು ಓದಿ ಸಂತೋಷಪಟ್ಟು ಈ ಮುಂದಿನ ಮಾತುಗಳನ್ನು ಬರೆದಿದ್ದಾರೆ...... "ನಮ್ಮ ಸುತ್ತಿನ ಜೀವನದಲ್ಲಿ ನಾವು ಕಾಣುವ ಪ್ರಕೃತಿಗಳು, ವಿಕೃತಿಗಳು, ನೋವು ನಲಿವುಗಳು, ಸಂತೋಷಕರವಾದ ಸ್ನೇಹಗಳು, ಅಣ್ಣ-ತಮ್ಮಂದಿರ ವೈಮನಸ್ಯ, ಕುಟುಂಬಗಳಲ್ಲಿ ಕಾಣಿಸಿಕೊಳ್ಳುವ ವಿರಸ-ಹೀಗೆ ಹಲವು ಬಗೆಯ ಭಾವನೆಗಳನ್ನು ಯಾವ ಆಡಂಬರವೂ ಇಲ್ಲದ ರೀತಿಯಲ್ಲಿ, ಮನೆಯಲ್ಲಿ ಮಕ್ಕಳಿಗೆ ಹೇಳಿದ ಹಾಗೆ, ಸರಳರಿಗೆ ಸರಳವಾಗಿ ಕಥೆ ಹೇಳಿಕೊಂಡು ಹೋಗುವ ಜಾಣ್ಮೆ ಶ್ರೀಮತಿಯವರಿಗೆ ಸಹಜವಾಗಿ ಇದೆ. ಎಲ್ಲಕ್ಕಿಂತ ಹೆಚ್ಚಾಗಿ ವಸ್ತುವನ್ನು ಆಯುವುದರಲ್ಲಿಯೂ, ಅದನ್ನು ನಿರೂಪಿಸುವುದರಲ್ಲಿಯೂ ಪದಗನ್ನು ಪವಣಿಸುವುದರಲ್ಲೂ ಎಲ್ಲಿಯೂ ಯಾವ ರೀತಿಯ ಅಪಸ್ವರವೂ ಇಲ್ಲ. ಲೋಕಾನುಭವವನ್ನು ಪಡೆದಿರುವ ಕುಲೀನ ಮಹಿಳೆಯು ಇದನ್ನು ಬರೆದಿದ್ದಾರೆ ಎಂದು ಧಾರಾಳವಾಗಿ ಹೇಳಬಹುದು. ಇವುಗಳನ್ನು ಓದುವಾಗ "A plain unvarnished talel unfold"ಎಂಬ ಕವಿವಾಣಿ ನೆನಪಾಗುತ್ತದೆ. ಇದರಲ್ಲಿ ಕಲಿತ ವಿದ್ಯೆಯ ಚಮತ್ಕಾರ ಭಾರವಾಗಿ ಕುಳಿತಿಲ್ಲ. ಸುಖದುಃಖಗಳಿಗೆ ಮಿಡಿಯುವ ಮುಗ್ಧ ಹೃದಯ ಇಲ್ಲಿ ಹಗುರವಾಗಿ ತೇಲುತ್ತಿದೆ" ಎನ್ನುತ್ತಾರೆ.

ಇಲ್ಲಿರುವ ಹನ್ನೆರಡು ಕಥೆಗಳಲ್ಲಿ 'ವಿಚಿತ್ರ ಘಟನೆ' ಮತ್ತು 'ಸ್ತ್ರೀರತ್ನ' ಕಥೆಗಳನ್ನು ಆಧಾರದಿಂದ ಬರೆದುದಾಗಿ ಲೇಖಕಿ ಹೇಳಿಕೊಂಡಿದ್ದಾರೆ. 'ವಿಚಿತ್ರ ಘಟನೆ'ಯಲ್ಲಿ ಮುಂಬಯಿಯಲ್ಲಿ ಸರ್ ಡಾಮಿನಕ್ ಹೋಳ್ಡನ್ ಎಂಬ ಪ್ರಖ್ಯಾತ ವೈದ್ಯನೊಬ್ಬನಿದ್ದ. ಆತ ಚಿಕಿತ್ಸೆ ಮಾಡುವ ಸಂದರ್ಭದಲ್ಲಿ ಪಠಾಣನೊಬ್ಬನ ಬಲದಕೈಯನ್ನು ಕತ್ತರಿಸಿ ತೆಗೆದಿದ್ದ. ತಾನು ಸಾಯುವ ಕಾಲಕ್ಕೆ ತನ್ನ ಕೈಯನ್ನು ಕೊಡಬೇಕೆಂದು ಪಠಾಣ ಹೇಳಿದ್ದ. ಮುಂಬಯಿಯ ತನ್ನ ಮನೆ ಆಕಸ್ಮಿಕವಾಗಿ ಬೆಂಕಿಗಾಹುತಿಯಾದಾಗ ಈ ವೈದ್ಯ ಮುಂಬಯಿ ಬಿಟ್ಟು ಇಂಗ್ಲೆಂಡಿಗೆ ಬಂದು ನೆಲೆಸುತ್ತಾನೆ. ಇಂಡಿಯಾದಲ್ಲಿ ನಡೆದ ಎಲ್ಲ ಘಟನೆಗಳನ್ನೂ ಮರೆತುಬಿಡುತ್ತಾನೆ. ಕೆಲವು ವರ್ಷಗಳು ಕಳೆದನಂತರ ಇದ್ದಕ್ಕಿದ್ದಂತೆಯೇ ನಡುರಾತ್ರಿಯಲ್ಲಿ ಪಠಾಣನ ಭೂತ ಬಂದು ವೈದ್ಯ ಡಾಮಿನಿಕನನ್ನು ತನ್ನ ಕೈಗಾಗಿ ಪೀಡಿಸಲಾರಂಭಿಸುತ್ತದೆ. ಈ ಸಮಸ್ಯೆಯಿಂದ ಬಿಡಿಸಿಕೊಳ್ಳಲಾಗದ ಆತ ತನ್ನ ಸ್ನೇಹಿತ ಡೇವಿಡ್‌ನ ಸಹಾಯ

ಕೇಳುತ್ತಾನೆ. ಆತ ಯುದ್ಧದಲ್ಲಿ ಕತ್ತರಿಸಿದ್ದ ಯೋಧನ ಕೈಯನ್ನು ತಂದು ಆತನ ಮನೆಯಲ್ಲಿಟ್ಟು ಪಠಾಣನ ಭೂತವನ್ನು ತೃಪ್ತಿ ಪಡಿಸಿದ ಕಥೆ ಇಲ್ಲಿದೆ. ಅವೈಜ್ಞಾನಿಕ ಹಿನ್ನೆಲೆ ಇದ್ದಾಗಲೂ ರೋಚಕತೆಯನ್ನು ಹೊಂದಿರುವ ಈ ಕಥೆ ಉದ್ದಕ್ಕೂ ಓದುಗರ ಕುತೂಹಲವನ್ನು ಹಿಡಿದಿಡುವಲ್ಲಿ ಸಫಲವಾಗಿದೆ.

'ಸ್ತ್ರೀರತ್ನ' ಕಥೆಯಲ್ಲಿ ಸನ್ಯಾಸಿಯೊಬ್ಬನ ತಪಸನ್ನು ಕೆಡಿಸಲು ಬಂದ ಅಪ್ಸರೆಯೊಬ್ಬಳು ಆ ಸನ್ಯಾಸಿಯಿಂದ ಶಾಪಕ್ಕೊಳಗಾಗುತ್ತಾಳೆ. ಅದರಂತೆ ಕುರೂಪಿಯಾದ ಕೂಲಿಗಾರ ಒಡ್ಡನೊಬ್ಬನ ಮಡದಿಯಾಗಿ ಜನ್ಮವೆತ್ತಬೇಕಾಗುತ್ತದೆ. ಮುಂದೆ ದೂರದ ಗುಜರಾತಿನ ಮುಖ್ಯ ಪಟ್ಟಣದಲ್ಲಿ ಸಹಸ್ರಲಿಂಗ ಸರೋವರನ್ನು ತೋಡಿಸುವಾಗ ಮಣ್ಣು ಕೆಲಸಕ್ಕೆ ಗಂಡ-ಹೆಂಡತಿಯರಿಬ್ಬರೂ ಹೋಗುತ್ತಾರೆ.

ಅಲ್ಲಿನ ರಾಜಕುಮಾರ ಸಿದ್ಧರಾಜನು ಒಡ್ಡರ 'ಜಸ್ಮ'ಳ ಸೌಂದರ್ಯಕ್ಕೆ ಮಾರುಹೋಗಿ ತನ್ನ ರಾಣಿಯಾಗುವಂತೆ ಆಕೆಯನ್ನು ಒತ್ತಾಯಿಸುತ್ತಾನೆ. ಈ ಸಂದರ್ಭದಲ್ಲಿ ರಾಜನಿಗೆ ಬುದ್ಧಿವಾದ ಹೇಳಿದ ಆಕೆಯ ಮೇಲೆ ರೋಷಗೊಂಡ ರಾಜ ಆಕೆಯ ಕುರೂಪಗಂಡ ರೊಡ್ಯೂನನ್ನು ಕೊಲ್ಲಿಸುತ್ತಾನೆ. ಗಂಡನ ಸಾವಿನಿಂದ ಶೋಕತಪ್ತಳಾದ ಜಸ್ಮ ಆತನ ಮೃತದೇಹದೊಂದಿಗೆ ಸತಿ ಹೋಗುತ್ತಾಳೆ." ಆಕರ್ಷಕ ಶೈಲಿಯಲ್ಲಿ ಸಾಗುವ ಈ ಕಥೆಯಲ್ಲಿ ಹೆಣ್ಣು ತನಗೆ ದೊರಕಬಹುದಾದ ಎಲ್ಲ ಸುಖ ಸಂಪತ್ತುಗಳಿಗಿಂತಲೂ ಮರ್ಯ್ಯಾದೆಯ ಬದುಕಿಗೆ ಒತ್ತುಕೊಟ್ಟು ದಿಟ್ಟತನ ತೋರುತ್ತಾಳೆ.

"ವೇಣುಗಾನ', 'ನವೀನನಾರಿ', 'ಬೀದಿಯ ಭಿಕಾರಿ' 'ಪರಿವರ್ತನೆ' 'ಹಣೆಯಬರಹ' 'ಅರಳಲಾಗದ ಮುಗುಳು' ಕಥೆಗಳು ಸ್ತ್ರೀ ಕೇಂದ್ರಿತ ಕಥೆಗಳಾಗಿವೆ.

'ವೇಣುಗಾನ' ಕಥೆಯಲ್ಲಿ ಮನೆಯ ಕೆಲಸಗಾರನ 'ಕೊಳಲಿನ ಗಾನಕ್ಕೆ ಮಾರುಹೋಗಿ ಆತನಿಗೆ ಒಲಿದ ಮಾಯೆ ತನ್ನನ್ನು ಬೇರೊಬ್ಬ ವರನೋಡಲು ಬಂದಾಗ ಮನಸ್ಸು ಬದಲಿಸಲಾಗದೆ, ತನ್ನ ಪ್ರೀತಿಯನ್ನು ಎದುರಿಸಲಾರದೆ ಹೊಳೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಕಥೆ ಇದ್ದರೆ 'ನವೀನ ನಾರಿ'ಯಲ್ಲಿ ಗೆಳತಿಯ ಜೊತೆ ನಾಟಕದ ಫೋಟೋದಲ್ಲಿದ್ದ ಹುಡುಗನನ್ನು ಮೆಚ್ಚಿಕೊಂಡು ಆತನನ್ನೇ ಮದುವೆಯಾಗಬೇಕೆಂದು ಹೊರಟ ಗೌರಿಗೆ ಕೊನೆಗೆ ಆತ ನಿಜವಾದ ಹುಡುಗನಲ್ಲ. ಹುಡುಗನ ಪಾತ್ರಧಾರಿಯಾದ ಮತ್ತೊಬ್ಬಳು ಹುಡುಗಿ ಎಂದು ತಿಳಿದು ನಿರಾಶಳಾದ ಕಥೆ ಇದೆ. "ಬೀದಿಯ ಭಿಕಾರಿ' ಕಥೆಯಲ್ಲಿ ಗಂಡ, ಮಗನನ್ನು ಕಳೆದುಕೊಂಡ ಹೆಣ್ಣು ವೃದ್ಧಾಪ್ಯದಲ್ಲಿ ಮಗಳು ಕಾವೇರಿಯಲ್ಲಿಗೆ ಆಶ್ರಯ ಬಯಸಿ ಬರುತ್ತಾಳೆ. ತಾಯಿಯ ಕಡೆಯಿಂದ ತನಗೆ ಯಾವುದೇ ಹಣ, ಆಸ್ತಿ ಸಿಗುವುದಿಲ್ಲ ಎಂದು ತಿಳಿದಾಗ ಮಗಳು ತಾಯಿಯ ಮೇಲೆ ದ್ವೇಷ ಸಾಧಿಸುತ್ತಾಳೆ. "ಇಲ್ಲಿ ಕೂತು ಉಣ್ಣಲಿಕ್ಕೆ ನೀನೇನು ನನಗೆ ಕುಡಿಕೆ ಹಣ ಕೊಡಲಿಲ್ಲ. ನಡಿ ನನ್ನ ಮನೆಯಿಂದ" ಎಂದು ನಡುರಾತ್ರಿಯಲ್ಲಿ ಹೆತ್ತ ತಾಯಿಯನ್ನೇ ಮನೆಯಿಂದ ಹೊರಹಾಕಿ ಆಕೆಯನ್ನು "ಬೀದಿಯ ಭಿಕಾರಿ'ಯಾಗಿಸಿದ ವಸ್ತುವಿದೆ. 'ಪರಿವರ್ತನೆ' ಕಥೆಯಲ್ಲಿ ಬಾಲ್ಯದಲ್ಲಿ ಬಡತನದಲ್ಲಿದ್ದ ಸಹಪಾಠಿ ದೇವಕಿಯ ಮೇಲೆ, ಆಕೆಯ ಬುದ್ಧಿವಂತಿಕೆಗಾಗಿ ದ್ವೇಷ ಬೆಳೆಸಿಕೊಂಡ ಶ್ರೀಮಂತ

ಕುಟುಂಬದ ಗೌರಿ ಕೊನೆಗೆ ತನ್ನ ಗುಣದಲ್ಲೇ 'ಪರಿವರ್ತನೆ' ಮಾಡಿಕೊಂಡು ಆಕೆಯನ್ನು ತನ್ನ ಅಣ್ಣ ಗಣಪತಿಗೆ ಮದುವೆಮಾಡಿಸಿ ಅನ್ಯೋನ್ಯವಾಗಿರುವ ವಿಷಯವಿದೆ.

'ಹಣೆಯ ಬರಹ' ಕಥೆಯಲ್ಲಿ ವೈದ್ಯನಾಗಿದ್ದ ತಂದೆ ತನ್ನ ಹೆಣ್ಣುಮಕ್ಕಳನ್ನು ಅವರ ಆಸೆಯಂತೆ ಉನ್ನತ ವಿದ್ಯಾಭ್ಯಾಸಕ್ಕೆ ಕಳುಹಿಸುತ್ತಾನೆ. ನಂತರ ದೂರದ ಊರಲ್ಲಿ ಉದ್ಯೋಗ ಮಾಡಲು ಅನುಮತಿಯನ್ನು ನೀಡುತ್ತಾನೆ. ಈ ಸಂದರ್ಭದಲ್ಲಿ ಮಗಳು ಪರಜಾತಿಯ ಹುಡುಗನೊಂದಿಗೆ ಮದುವೆ ಮಾಡಿಕೊಂಡು ಅಮೆರಿಕಾಕ್ಕೆ ಹೊರಟು ಹೋದಾಗ ಕುಟುಂಬದ ತಳಮಳ, ಆತಂಕಗಳನ್ನು ವಿವರಿಸಲಾಗಿದೆ.

ಹೆತ್ತವರ ಮೂಢನಂಬಿಕೆಯಿಂದ ಹತ್ತು ವರ್ಷದ ಹೆಣ್ಣುಮಗಳು ರಶ್ಮಿಗೆ ಬಂದ ಕಾಯಿಲೆಗೆ ಆಸ್ಪತ್ರೆಯ ಔಷಧಿ ತೆಗೆದುಕೊಳ್ಳದೆ ಜ್ಯೋತಿಷ್ಯನನ್ನು ಕರೆಸಿ ಮಂತ್ರ-ತಂತ್ರ ಮಾಡಿಸಿ ಹಣದ ಜೊತೆಗೆ ಮಗಳನ್ನೂ ಕಳೆದುಕೊಂಡ ವಿಚಾರ "ಅರಳಲಾಗದ ಮುಗುಳು' ಕಥೆಯಲ್ಲಿದೆ.

'ಮೋತಿ', 'ಕಲಿಯುಗದ ಕೌರವ' ಕಥೆಗಳು ಆಸ್ತಿಯ ಆಸೆಗಾಗಿ ಒಡಹುಟ್ಟಿದವರಲ್ಲೇ ನಡೆದ ಕೊಲೆಯ ಸುತ್ತ ಹೆಣೆಯಲ್ಪಟ್ಟಿದೆ.

ಶ್ರೀಮಂತನಾದ ಅಪ್ಪಯ್ಯ ತನಗೆ ಸ್ವಂತ ಮಕ್ಕಳಿಲ್ಲದಾಗ ತಂಗಿಯಮಗ ಚಂಗಪ್ಪನನ್ನು ದತ್ತು ತೆಗೆದುಕೊಂಡು ಸಾಕಿ ತನ್ನ ಆಸ್ತಿಗೆ ಉತ್ತರಾಧಿಕಾರಿಯಾಗಿಸುತ್ತಾನೆ. ಅಪ್ಪಯ್ಯನ ಮರಣಾನಂತರ ಆತನ ತಮ್ಮನ ಮಗ ಮಾಚಯ್ಯ ಆ ಆಸ್ತಿದ ಮೇಲೆ ಕಣ್ಣಿಟ್ಟು ಚಂಗಪ್ಪನನ್ನು ಕೊಂದು ಕೆರೆಗೆ ಹಾಕುತ್ತಾನೆ. ಆ ಕೆರೆಯಲಿ ಈಜಾಡಿ ಕೆಂಪಗಾಗಿ ಹೊರಬಂದ ಬಾತುಕೋಳಿ 'ಮೋತಿ'ಯ ಮುಖಾಂತರ ಕೊಲೆಯ ಗುರುತು ಹಿಡಿಯುವ ತಂತ್ರ ಕಥೆಯಲ್ಲಿದೆ.

'ಕಲಿಯುಗದ ಕೌರವ' ಕಥೆಯಲ್ಲಿ ತಂದೆ ತನ್ನ ಆಸ್ತಿಯನ್ನು ಇಬ್ಬರು ಗಂಡುಮಕ್ಕಳಿಗೆ ಸಮನಾಗಿ ಹಂಚಿದ್ದರೂ ಅತಿ ಆಸೆಯ ಅಣ್ಣ, ತಮ್ಮನ ಅರ್ಧಭಾಗವನ್ನು ಬಿಟ್ಟುಕೊಡದೆ ತಮ್ಮನನ್ನೇ ಗುದ್ದಲಿಯಿಂದ ಕಡಿದು ಕೊಂದ ವಿಚಾರವಿದೆ.

"ದಿವ್ಯದರ್ಶನ'ದಲ್ಲಿ ಕೊಡವ ಭಾಷೆಯ ಆದಿಕವಿ ಹರದಾಸ ಅಪ್ಪನೆರವಂಡ ಅಪಚ್ಚ ಕವಿಯವರು ಲೇಖಕಿಯ ಮನೆಗೆ ಬಂದಾಗ ನಡೆದ ಘಟನೆಯೊಂದನ್ನು ನಿರೂಪಿಸಲಾಗಿದೆ. ಮುಂಜಾವಿನ ಹಾಗೂ ಮುಸ್ಸಂಜೆಯ ವೇಳೆಯಲ್ಲಿ ದೇವರ ನಾಮವನ್ನು ಹಾಡುವ ಅಭ್ಯಾಸ ಕವಿಯದ್ದು. ಒಮ್ಮೆ ಬೆಳಗಿನ ಜಾವದಲ್ಲಿ ಕವಿ ಮಂಚದ ಮೇಲೆ ಕುಳಿತು ಶಿವಸ್ತುತಿ ಮಾಡುತ್ತಿದ್ದರೆ ನಾಗರ ಹಾವೊಂದು ಅವರು ಮಲಗಿದ ಕೊಠಡಿಯೊಳಗೆ ಬಂದು ಹಾಡಿಗೆ ತಕ್ಕಂತೆ ನರ್ತಿಸಲಾರಂಭಿಸುತ್ತದೆ. ಕೊಡವರ ನಂಬಿಕೆಯಂತೆ ಸುಬ್ರಹ್ಮಣ್ಯದ ದೇವರಿಗೆ ಹರಕೆ ಮಾಡಿದಾಗ ಹಾವು ಅದರ ಪಾಡಿಗೆ ಹೊರಟುಹೋಗುತ್ತದೆ.

'ಮೊದಲು ಮನೆಸೇರಿದ' ಕಥೆಯಲ್ಲಿ ತನ್ನ ತಾಯಿಗಿಂತ ಮೊದಲು ಮನೆಸೇರಲು ಆತುರವಾಗಿ ಹೊರಟ ಮಗ ದಾರಿಯಲ್ಲಿ ಬೇಟೆಯಾಡುತ್ತಿದ್ದ ಗೆಳೆಯನೊಂದಿಗೆ ನಡೆದು ಹೋಗುವಾಗ ಆಕಸ್ಮಿಕವಾಗಿ ಆತನ ಹೆಗಲಲ್ಲಿದ್ದ ಕೋವಿಯಿಂದ ಗುಂಡುಸಿಡಿದು ಸಾವನ್ನಪ್ಪಿದ ಕಥೆಯಿದೆ.

ಹೀಗೆ ಸಂಕಲನದಲ್ಲಿರುವ ೧೨ ಕಥೆಗಳೂ ವೈವಿಧ್ಯಮಯ ವಸ್ತುಗಳನ್ನು ಕೇಂದ್ರವಾಗಿಸಿಕೊಂಡಿವೆ. ಮಹಿಳಾ ಪ್ರಧಾನ ಕಥೆಗಳಲ್ಲಿ ಬಾಲ್ಯದಿಂದ ವೃದ್ಧಾಪ್ಯದವರೆಗಿನ ಕಾಲಮಾನದ ಹೆಣ್ಣಿನ ಸಂಬಂಧದ ವಿವಿಧ ಮುಖಗಳ ಚಿತ್ರಣ, ಸ್ತ್ರೀ ಉನ್ನತ ಶಿಕ್ಷಣ, ಹೊರ ಊರಲ್ಲಿ ಉದ್ಯೋಗಕ್ಕೆ ತೊಡಗಿಕೊಂಡಾಗಿನ ಸನ್ನಿವೇಶಗಳು ಮುಖಾಮುಖಿಯಾಗಿವೆ. ಪುರುಷ ಪ್ರಧಾನ ಕಥೆಗಳಲ್ಲಿ ಕೊಡಗಿನ ಆರ್ಕಿಟೈಪ್ ಎನ್ನಬಹುದಾದ ಸಮಸ್ಯೆಗಳು - ಆಸ್ತಿ, ಬೇಟೆ, ಕೋವಿ ಮುಂತಾದವು ಸ್ಥಾನಪಡೆದಿವೆ.

ಈ ಕಥೆಗಳ ಜೊತೆಯಲ್ಲಿ ೨೯ ಕವನಗಳನ್ನೂ ಇವರು ಸೇರಿಸಿದ್ದಾರೆ. ಕೊಡಗಿನ ಜೀವನದಿ ಕಾವೇರಿ, ಕೊಡಗಿನ ಕಿತ್ತಳೆ, ಕೊಡಗಿನ ಪರಿಸರ, ಕೊಡಗಿನ ಹೆಣ್ಣು, ಸ್ವಾತಂತ್ರ್ಯದ ಹಂಬಲ, ಗಾಂಧೀಜಿ, ಹರಿಕರುಣೆ, ಹಳೆಯ ನೆನಪುಗಳು ಇವರ ಕವನಗಳಲ್ಲಿ ಸ್ಥಾನ ಪಡೆದಿವೆ. ಪಾಕಿಸ್ಥಾನವು ೧೯೬೫ರಲ್ಲಿ ನಮ್ಮ ನಾಡಿನ ಮೇಲೆ ದಾಳಿಮಾಡಿದಾಗ ಬರೆದ ಕವನ 'ಸಮರಗೀತೆ'ಯಲ್ಲಿ -

'ಸುಂದರ ಕಾಶ್ಮೀರ
ನಮ್ಮದೆ ನಾಡು
ಮೋಸದಿ ಕಸಿಯಲು ಬಂದಿಹರು !

ಐಕ್ಯದಿ ಬನ್ನಿರಿ
ಬಾಂಧವರೆಲ್ಲ
ಮಾತೆಯ ಸಂಕಟ ನೀಗಿಸಲು ||............

ಎಂಬುದಾಗಿ ತಾಯ್ನಾಡಿನ ರಕ್ಷಣೆಗಾಗಿ ತುಡಿಯುತ್ತಾರೆ. "ಕೊಡಗಿನ ಹುಡುಗಿ" "ಗೋವಿನ ಹಾಡಿನ ಧಾಟಿಯಲ್ಲಿರುವ ಕಥನ ಕವನ. ಬಾಲ್ಯದ ಶಾಲೆಯ ದಿನಗಳಿಂದಲೂ ಆತ್ಮೀಯತೆಯನ್ನು ಬೆಳಸಿಕೊಂಡು ಮುಂದೆ ಆ ಪ್ರೀತಿ ಹೆಮ್ಮರವಾದಾಗ ಸಮಾಜದ ಕಟ್ಟುಪಾಡುಗಳಿಗೆ ಬಲಿಯಾಗಿ ಬದುಕನ್ನು ಕಳೆದುಕೊಂಡ ಯುವಪ್ರೇಮಿಗಳ ಪ್ರೀತಿ ಸಾವಿನಲ್ಲಿ ಅಂತ್ಯವಾದ ಕತೆಯಿದು.

'ಮಗುವಿನ ಪ್ರಶ್ನೆ' ಕವನ ಅತ್ತೆ ಸತ್ತಾಗ ಅಳುತ್ತಾ ಕೂರುವ ಅಮ್ಮನನ್ನು ಏಕೆ ಅಳುವೆ ಎಂದ ಮಗ -

"ಅಳುವುದು ಕೇಳ್ವುದೆ ಅಳಿದವರಿಂಗೆ ?
ಅಳುವುದು ಏಕೆ, ಹೇಳಮ್ಮಾ ?
ಅಳಿದವಗತ್ತರೆ, ಉಳಿದವರಿಂಗೆ

ಅಳುವವರು ಆರು ಹೇಳಮ್ಮಾ."

ಎಂದು ಕೇಳುತ್ತಾ ಸತ್ತವರಿಗಿಂತಲೂ ಬದುಕಿ ಉಳಿದವರ ಬದುಕು ಮುಖ್ಯ, ಎಂಬುದರ ಕಡೆಗೆ ಗಮನ ಹರಿಸುತ್ತದೆ.

'ಕೊಡಗಿನ ಕಾವೇರಿ' ಕಾವೇರಿಯ ಜನನದಿಂದಾರಂಭಿಸಿ, ಆಕೆ ನದಿಯಾಗಿ ಹರಿದಲ್ಲಿವರೆಗಿನ ಘಟನೆಗಳನ್ನು ತಿಳಿಸುವ ಕಥನಕವನ.

ಬಾಪೂಜಿಯವರ ಶ್ರಮದಿಂದ ದೊರಕಿದ ಸ್ವಾತಂತ್ರ್ಯವನ್ನು ಸದುಪಯೋಗ ಮಾಡಿಕೊಳ್ಳಲು ಕರೆನೀಡುವ ಕವನ "ಸ್ವರಾಜ್ಯಗೀತೆ" :

"ಕಾಲವ ಕಳೆಯದೆ, ನಡೆಯಿರಿ ಮುನ್ನ
ಬಾಲಕರೆಲ್ಲಾ ನೀವಿಂದೂ
ಲೀಲೆಯಿಂದಲಿ ದೊರೆತ ಸ್ವರಾಜ್ಯದಿ
ಲೋಲರಾಗಲು ತಾ ಮುಂದೂ....."

"ಕರ್ಮದಿ ದುಡಿದು, ಧರ್ಮದಿ ಮಡಿದು
ಮಾತೆಗೆ ಮಾಡಿರಿ ಪೂಜೆಯನೂ
ಒಮ್ಮತದಿಂದ, ನಿಶ್ಚಲದಿಂದ
ದುಡಿಯಲು ಬಾಪೂ ಹೇಳಿಹನು ||"........

ಕೃತಿಯೊಳಗೆ ಅಲ್ಲಲ್ಲಿ ಕೊಡವ ಪದ, ವಾಕ್ಯ, ನುಡಿಗಟ್ಟುಗಳನ್ನು ಬಳಸಿದ್ದು, ಕೃತಿಯ ಕೊನೆಯಲ್ಲಿ ಇವುಗಳಿಗೆ ಕನ್ನಡದಲ್ಲಿ ಅರ್ಥ ನೀಡುವುದರ ಮೂಲಕ ಕೊಡವೇತರ ಕನ್ನಡ ಓದುಗರಿಗೆ ವಿಷಯವನ್ನು ಸರಿಯಾಗಿ ಗ್ರಹಿಸಲು ನೆರವಾಗಿದ್ದಾರೆ.

ಒಟ್ಟಾರೆಯಾಗಿ ಇಲ್ಲಿನ ಕಥೆ, ಕವನಗಳ, ವಿಷಯ, ಭಾಷೆ, ಶೈಲಿಯಲ್ಲಿ ದಟ್ಟ ಪ್ರಾದೇಶಿಕತೆಯನ್ನು ಬಿಂಬಿಸುವುದರ ಮೂಲಕ ಆ ಕಾಲದ ಕೊಡಗನ್ನು ಕಣ್ಣಿಗೆ ಕಟ್ಟಿಕೊಡುವಲ್ಲಿ ಲೇಖಕಿ ಸಫಲರಾಗಿದ್ದಾರೆ ಎನ್ನಬಹುದು.

## ೩. ಭುಗಿಲ ಗೊಂಚಲು

೧೯೮೦ರಲ್ಲಿ ಪ್ರಕಟವಾದ ಈ ಕೃತಿ ೩೬ ಸಣ್ಣ ಕಥೆಗಳು ಹಾಗೂ ೩೦ ಕವನಗಳ ಸಂಕಲನ. ಜನ ಸಾಮಾನ್ಯರಿಗೆ ಓದಲು ಪುಟ್ಟ ಕಥೆಗಳಲ್ಲೇ ಆಸಕ್ತಿ ಎಂಬ ವಿಷಯವನ್ನು ಮನಗಂಡು ತನ್ನ ಸುತ್ತಲಲ್ಲಿ ಘಟಿಸಿದ ಹಲವಾರು ಸಣ್ಣಪುಟ್ಟ ವಿಚಾರಗಳನ್ನು ತಾನು ಕಥೆಯಾಗಿಸಿದುದಾಗಿ ಲೇಖಕಿ ಹೇಳಿಕೊಂಡಿದ್ದಾರೆ.

ದಿನನಿತ್ಯದ ಬದುಕಿನ ವಿಚಾರಗಳನ್ನು ವಸ್ತುವಾಗಿಸಿಕೊಂಡ ಇಲ್ಲಿನ ಕಥೆಗಳಲ್ಲಿ - ಪ್ರೀತಿಸಿದ ಹುಡುಗನನ್ನು ಅಂತಸ್ತಿನ ಅಹಂಕಾರದಲ್ಲಿ ದೂರವಿಡಲು ಪ್ರಯತ್ನಿಸುವ, ತನ್ನ ಗಂಡನ ದುರ್ನಡತೆಯನ್ನು ಪ್ರತಿಭಟಿಸುವ, ಗೆಳತಿಯ ಒಳಿತನ್ನು ಬಯಸುವ, ಚಾಡಿಮಾತಿನಿಂದ ಸಂಸಾರ ಮುರಿದುಬೀಳುವ ಮುಂತಾದ ವಿಷಯಗಳಿವೆ. ಇನ್ನು ಕೆಲವು ಕಥೆಗಳು ವಿಪರೀತ ಉಂಡು ಫಜೀತಿ ಪಡುವ, ಗಡಿಬಿಡಿತನದಿಂದ ಮೋಸ ಹೋಗುವ ವಿಚಾರಗಳನ್ನು ಲಘುಹಾಸ್ಯಮಿಶ್ರಿತ ಶೈಲಿಯಲ್ಲಿ ತಿಳಿಸುತ್ತವೆ. ನಡುನಡುವೆ ಗಂಭೀರವಾಗಿ ಚಿಂತನೆಗೆ ಹಚ್ಚುವ, ಮಾನವೀಯತೆಯನ್ನು ಮೆರೆಯುವ, ಮೂಢನಂಬಿಕೆಗಳನ್ನು ನಿರಾಕರಿಸಿ ವೈಚಾರಿಕ ಚಿಂತನೆಯ ಕಡೆಗೆ ಎಡೆಮಾಡಿಕೊಡುವ ಕಥೆಗಳೂ ಇವೆ.

ದೈಹಿಕ ದುರ್ಬಲತೆಯನ್ನು ಮೀರಿ ಮಾತೃ ಪ್ರೇಮವನ್ನು ಮೆರೆದು ಬದುಕು ಕಟ್ಟಿಕೊಳ್ಳುವ ಅಂಗವಿಕಲ ಹೆಣ್ಣೊಬ್ಬಳ ಕಥೆ 'ಮಾತೃಪ್ರೇಮ'ದ ವಸ್ತುವಾದರೆ "ಚದುರಚತುರೆ" ಹೆಣ್ಣಿನ ದೃಶ್ಯವನ್ನು ಬಿಂಬಿಸುವ ಕಥೆ. ಶ್ರೀಮಂತನಾದರೂ ಕುರೂಪನಾಗಿದ್ದ ಚಂದ್ರಚೂಡನಿಗೆ ಅತ್ಯಂತ ಸುಂದರಿಯಾದ, ಬಡಮನೆತನದ ವಂದನಳನ್ನು ಮಧ್ಯವರ್ತಿಗಳು ಮೋಸದಿಂದ ಮದುವೆ ಮಾಡಿಸಿದಾಗ ಹೆದರದೆ ಉಪಾಯದಿಂದ ಮದುವೆಯಾದ ಮೊದಲ ದಿನವೇ ಗಂಡನ ಆಸ್ತಿಯೆಲ್ಲವನ್ನು ತನ್ನ ಹೆಸರಿಗೆ ಬರೆಸಿಕೊಂಡು ಆತನನನ್ನು ಭಿಕಾರಿಯಾಗಿಸಿ ತವರಿಗೆ ಹಿಂತಿರುತ್ತಾಳೆ. ನಾರಿ ಮುನಿದರೆ ಮಾರಿ' ಎಂಬ ಮಾತನ್ನು ನೆನಪಿಸಿಕೊಂಡ ಲೇಖಕಿ ವಂದನಳ ದಿಟ್ಟತನಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತಾಳೆ. ಈ ಮೂಲಕ ಬಡಹೆಣ್ಣುಮಕ್ಕಳ ಮೇಲೆ ಶ್ರೀಮಂತರ ದಬ್ಬಾಳಿಕೆಯನ್ನು ವಿರೋಧಿಸುವ ನೆಲೆಯನ್ನು ವ್ಯಕ್ತಪಡಿಸಿದ್ದಾರೆ.

'ಸತಿಯ ಸ್ವರ್ಗಾರೋಹಣ' ಲೇಖಕಿಯ ಬದುಕಿನಲ್ಲಿ ನಡೆದ ಘಟನೆ. ಮೊದಲ ಮಗ ಇನ್ನೂ ಹಸುಗೂಸಾಗಿರುವಾಗ ಅತ್ಯಂತ ಜ್ವರದಿಂದ ನರಳಿ ಕ್ಷಣಹೊತ್ತು ಈ ಲೋಕವನ್ನು ಬಿಟ್ಟು ಬೇರೊಂದು ಲೋಕವನ್ನು ಮೆಟ್ಟಿಲೇರಿ ಹತ್ತಿಹೋದುದಾಗಿಯೂ, ಅಲ್ಲಿ ನಾರಾಯಣನನ್ನು ಕಂಡು ಮತ್ತೆ ಹಿಂತಿರುಗಿ ಬಂದುದಾಗಿಯೂ ಹೇಳುತ್ತಾರೆ. ಆ ಹೊತ್ತಿನಲ್ಲಿ ತಮಗಾದ ವಿಶಿಷ್ಟ ಅನುಭವವನ್ನು ಕಥೆಯಲ್ಲಿ ಬೇರೊಂದು ಪಾತ್ರದ ಮೂಲಕ ನಿರೂಪಿಸುತ್ತಾರೆ.

'ಇಟ್ ಈಸ್ ಸಂಬಡಿ' ಕಥೆಯಲ್ಲಿ ಪರದೇಶದಲ್ಲಿ ಓದುವ ಕನಸು ಹೊತ್ತ ಬಡವರ ಮನೆಯ ಚಂಗಪ್ಪ ಶ್ರೀಮಂತ ಕುಟುಂಬದ ಹೆಣ್ಣನ್ನು ಮದುವೆಯಾಗುತ್ತಾನೆ. ಹೊರದೇಶಕ್ಕೆ ವಿದ್ಯಾಭ್ಯಾಸಮಾಡಲು ಹೋಗುತ್ತಾನೆ. ಅಲ್ಲಿ ಬೇರೊಬ್ಬಳನ್ನು ಮದುವೆಯಾಗಿ ಒಂದು ಮಗುವಿನೊಂದಿಗೆ ಹಲವು ವರ್ಷಗಳ ನಂತರ ಮನೆಗೆ ಹಿಂತಿರುಗುತ್ತಾನೆ. ಇಲ್ಲಿ ಆತನಬರವನ್ನೇ ಕಾಯುತ್ತಾ ಕುಳಿತ ಹೆಂಡತಿಯನ್ನು ಪರದೇಶದಲ್ಲಿ ಕಟ್ಟಿಕೊಂಡ ಮಡದಿ ಯಾರೆಂದು ಕೇಳಿದಾಗ 'ಇಟ್ ಈಸ್ ಸಂಬಡಿ' ಎನ್ನುತ್ತಾನೆ. ಆಧುನಿಕ ಶಿಕ್ಷಣ ವ್ಯವಸ್ಥೆಗೆ ತೆರೆದುಕೊಂಡ ಕೊಡವ ಕುಟುಂಬಗಳ ಸಂಕ್ರಮಣ ಸ್ಥಿತಿಯನ್ನು ಈ ಕಥೆ ನಿರೂಪಿಸುತ್ತದೆ.

ನಾಗರ ಹಾವನ್ನು ಕೊಂದರೆ 'ನಾಗದೋಷ' ಉಂಟಾಗುತ್ತದೆಂಬ ಕೊಡವರ ಸಾಂಪ್ರದಾಯಿಕ ನಂಬಿಕೆಯನ್ನು ಮೂಲವಾಗಿಟ್ಟುಕೊಂಡು ಕೆಲವಾರು ಕಥೆಗಳು ರಚಿತವಾಗಿವೆ. 'ಬೇಡದ ಬಂಧು'ವಿನಲ್ಲಿ ಮದುವೆ ಮನೆಗೆ ನಾಗರಹಾವು ನುಗ್ಗಿದ ಕಥೆ ಇದ್ದರೆ, 'ಮಾಡಿದ್ದುಂಡ ಮಹಾರಾಯ' ಕಥೆಯಲ್ಲಿ ಹೊಸ ಮನೆ ಕಟ್ಟಲು ಜಾಗಶುದ್ಧಿ ಮಾಡುತ್ತಿದ್ದಾಗ ಕಂಡ ನಾಗರಹಾವನ್ನು ಕೊಂದ ಆ ಮನೆಯ ಯಜಮಾನ ಅದೇ ವರ್ಷ ಸಾವನ್ನಪ್ಪುತ್ತಾನೆ. ಇಲ್ಲಿ ಸಾಂಪ್ರದಾಯಿಕ ನಂಬಿಕೆಗೆ ಒತ್ತು ಕೊಡುತ್ತಾರೆ. ಲೇಖಕಿ 'ಮಂಕುಬೂದಿ' ಕಥೆಯನ್ನು ಬರೆಯಲು ಬಿ. ವೆಂಕಟಾಚಾರ್ಯರ 'ದುರ್ಗೇಶನಂದಿನಿ' ಕೃತಿ ಪ್ರೇರಣೆ ಎನ್ನುತ್ತಾರೆ. ಮುಖ ಲಕ್ಷಣ ಹೇಳಿ ಕಾಸು ಗಿಟ್ಟಿಸಿಕೊಳ್ಳುವ ಮಾಯಾವಿ ಹೆಣ್ಣುಗಳನ್ನು ನಂಬದೆ, ಅಂತಹವುಗಳನ್ನು ನಿರಾಕರಿಸುವಂತೆ ತಿಳಿಸುತ್ತಾರೆ. 'ಕಾಳಿಂಗಯ್ಯನ ಭವಿಷ್ಯ' ಕಥೆಯಲ್ಲೂ ಜ್ಯೋತಿಷ್ಯವನ್ನು ನಿರಾಕರಿಸುವ ರೀತಿ ಇದೆ.

ಈ ಕಥೆಗಳ ಜೊತೆಗೆ ಸೇರಿಸಿರುವ ಕವನಗಳಲ್ಲಿ ಈ ದೇಹವನ್ನು ಬಾಡಿಗೆ ಮನೆಗೆ ಹೋಲಿಸಿ, ಅಂಬಿಗನಿಗೆ ಹೋಲಿಸಿ, ವಿಧಿಯನ್ನು ನೆಚ್ಚಿಕೊಳ್ಳುವ ಅಧ್ಯಾತ್ಮದ ರೀತಿಗೆ ಒತ್ತುಕೊಟ್ಟ ಕವನಗಳು ಕೆಲವಿವೆ. ಗುಡುಗು, ಪ್ರಕೃತಿ, ಹಕ್ಕಿಗಳು, ಕಾವೇರಿ, ಕೃಷ್ಣರನ್ನು ಕುರಿತು ವಿವರಿಸಿರುವ ಕವನಗಳೂ ಇವೆ.

'ಬಾಡಿಗೆ ಮನೆ' ಕವನದಲ್ಲಿ ಈ ಬದುಕಿನ ನಶ್ವರತೆಯನ್ನು, ದೇಹವನ್ನು ಬಾಡಿಗೆ ಮನೆಗೆ ಹೋಲಿಸುವುದರ ಮೂಲಕ ತಿಳಿಸುತ್ತಾರೆ.

ನಿದರ್ಶನಕ್ಕೆ -

"ಕಲ್ಮಣ್ಣು ಕಬ್ಬಿಣದ
ಮನೆಯಲ್ಲವಿದು - ನೋಡೆ
ಮೂಳೆ, ಮಾಂಸ, ರಕುತದ
ಮನೆಗೆ ಚರ್ಮದ ಗೋಡೆ."

'ರಾಜರತ್ನ' ಲೇಖಕಿಯ ಮೆಚ್ಚಿನ ಕವಿ ಜಿ.ಪಿ. ರಾಜರತ್ನಂ ಅವರ ಅಗಲಿಕೆಯ ಸಂದರ್ಭದಲ್ಲಿ ಸಂತಾಪ ಸೂಚಿಸಿದ ಕವನ.

ರವಿ ಮುಳುಗೆ
ಕವಿ ಕುಲದ
ಜನ ಮರುಗೆ
ಅನುನಯದ ॥
ಕವಿ ಸಂಕುಲಕೆ
ಒದಗಿತು ಶೋಕ
ರಾಜರತ್ನಕೆ

ದೊರಕಿತು ನಾಕ ||

ಎನ್ನುತ್ತ ಕನ್ನಡ ಸಾಹಿತ್ಯಲೋಕದ ಸೂರ್ಯ ಮುಳುಗಿದನೆಂದು ಶೋಕಗೆಯ್ಯುತ್ತಾರೆ.

ಮನುಷ್ಯ ದೇವರಿಗೆ ಸಲ್ಲಿಸಬೇಕಾಗಿರುವ ಕಾಣಿಕೆ ಯಾವುದೇ ರೂಪದಲ್ಲಿರಬೇಕಾಗಿಲ್ಲ. ನಾವು ಸಲ್ಲಿಸುವ ಭಕ್ತಿಯೇ ಪ್ರೀತಿಯ ಕೊಡುಗೆ ಎನ್ನುತ್ತಾರೆ.

"ದೇವನೆಡೆಗೆ

ಭಕ್ತಿವೆಸಗೆ

ಅದುವೆ ಶಿವಗೆ

ಮುದದ ಕೊಡುಗೆ."

ಎಂಬಲ್ಲಿ ಪ್ರೀತಿ, ವಿಶ್ವಾಸ, ನಂಬಿಕೆಗಳಲ್ಲಿ ದೇವರನ್ನು ಕಾಣಬೇಕಾಗಿರುವ ಸರಳ ಸೂತ್ರವನ್ನು ಮುಂದಿಡುತ್ತಾರೆ.

## ಅಪ್ರಕಟಿತ ಬರಹಗಳು

೧೯೬೦ ರ ದಶಕದಲ್ಲಿ ಕೊಡವ ಭಾಷೆಯಲ್ಲಿ ಬರೆದ 'ಅಪರೂಪ' ಎಂಬ ಕಥೆ, ಕನ್ನಡದಲ್ಲಿ ಬರೆದಿರುವ 'ಕನ್ಯಾಬಲಿ' ಮತ್ತು 'ಕೃತಘ್ನ' ಎಂಬ ಎರಡು ಕಥೆಗಳು ಜೊತೆಗೆ 'ವಿಧಿವಿಲಾಸ' ಎಂಬ ೧೦ ಪ್ರಕರಣಗಳನ್ನು ಒಳಗೊಂಡ ದೊಡ್ಡ ಗಾತ್ರದ ಕಾದಂಬರಿಯೊಂದು ಹಸ್ತಪ್ರತಿಯಲ್ಲೇ ಉಳಿದಿವೆ.

"ಅಪರೂಪ' ಕಥೆ ಕೊಡವ ಹಾಗೂ ಮುಸ್ಲಿಂ ಕುಟುಂಬಗಳ ಅನ್ಯೋನ್ಯ ಸ್ನೇಹದ ಕಥೆ, ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯನಾಗಿದ್ದ ಕಾಳಪ್ಪ, ಮರವ್ಯಾಪಾರಿ ರಷೀದ್ ಆತ್ಮೀಯ ಸ್ನೇಹಿತರು. ಇವರ ಮಕ್ಕಳೂ ಕೂಡ ಅದೇ ಸ್ನೇಹವನ್ನು ಮುಂದುವರಿಸಿದ್ದರು. ಒಂದೇ ತರಗತಿಯಲ್ಲಿ ಓದುತ್ತಿದ್ದ ಮಕ್ಕಳು ಅಪ್ಪಾಜಿ ಹಾಗೂ ಸಫಿ. ಇವರ ನಡುವೆ ಅಪರೂಪದ ಸ್ನೇಹವಿತ್ತು. ಅಪ್ಪಾಜಿಗೆ ಬಿ.ಎ. ಓದುವ ಆಸೆ ಇದ್ದಾಗ ಕಾಳಪ್ಪನಲ್ಲಿ ಹಣವಿರಲಿಲ್ಲ. ರಷೀದ್‌ನ ಮಗ ಶಫಿ ತಂದೆಯ ವ್ಯಾಪಾರದಲ್ಲಿ ಸಹಾಯಕನಾಗುತ್ತಾನೆ. ಆದರೆ ರಷೀದ್ ಮತ್ತು ಶಫಿ ಅಪ್ಪಾಜಿಯ ವಿದ್ಯಾಭ್ಯಾಸದ ಖರ್ಚುವೆಚ್ಚವನ್ನು ಭರಿಸುತ್ತಾರೆ. ಅಪ್ಪಾಜಿ ಕೊನೆಗೆ ತಾನು ಓದಿದ ಹೈಸ್ಕೂಲಿನಲ್ಲೇ ಉಪಾಧ್ಯಾಯನಾಗಿ ಉದ್ಯೋಗಕ್ಕೆ ಸೇರುತ್ತಾನೆ.

ಹಿಂದೂ-ಮುಸಲ್ಮಾನರ ನಡುವೆ ಜಾತಿಯ ಕಿಂಚಿತ್ತೂ ಕಿಡಿಯಿಲ್ಲದೆ ಆತ್ಮೀಯತೆಯ ಹಿನ್ನೆಲೆಯನ್ನು ತೋರಿದ ಈ ಕಥೆ ಉತ್ತಮ ಭಾಷಾ ಶೈಲಿ, ಕಥನ ತಂತ್ರಗಳಿಂದ ಕೂಡಿದೆ.

"ಕನ್ಯಾಬಲಿ' ವರದಕ್ಷಿಣೆಗೆ ಬಲಿಯಾದ ಮುಗ್ಧ ಹೆಣ್ಣೊಬ್ಬಳ ಕಥೆ. ಗಂಡನ ಮನೆಯಲ್ಲಿ ನಿರಂತರವಾಗಿ ಹಿಂಸೆ ಅನುಭವಿಸಿ ಬಾಳಲಾರದೆ ತವರಿಗೆ ಹಿಂತಿರುಗಿದ ಮಗಳನ್ನು ಸಮಾಜದಲ್ಲಿ ತಮ್ಮ ಸ್ಥಾನಮಾವನ್ನು

ಉಳಿಸಿಕೊಳ್ಳುವ ನಿಟ್ಟಿನಲ್ಲಿ ಗಂಡನ ಮನೆಯೇ ಹೆಣ್ಣಿರಬೇಕಾದ ಸ್ಥಳವೆಂದು ಹೇಳುವ ಹೆತ್ತವರು, ಎಲ್ಲರೂ ಹೇಗೆ ಅಮಾಯಕ ಹೆಣ್ಣಿನ ಸಾವಿಗೆ ಕಾರಣರಾಗುತ್ತಾರೆ ಎಂಬುದನ್ನು ಕಥೆ ವಿಸ್ತಾರವಾಗಿ ಚರ್ಚಿಸುತ್ತದೆ. ಹೆತ್ತವರ ಜವಾಬ್ದಾರಿಯ ಕುರಿತೂ ಎಚ್ಚರಿಸುತ್ತದೆ.

"ಕೃತಘ್ನ' ಕಥೆಯಲ್ಲಿ ಹತ್ತನೆಯ ತರಗತಿಯಿಂದ ಇಂಜಿನಿಯರಿಂಗ್ ಪದವಿ ಪಡೆದುಕೊಳ್ಳುವವರೆಗೆ ಬಡಹುಡುಗನೊಬ್ಬನನ್ನು ಓದಿಸಿದ ಆ ಸಾಹುಕಾರನಿಗೆ ಮೋಸಮಾಡಿ ಹೇಳದೇ ಹೊರಟು ಹೋದ ಸಂಗತಿಯಿದೆ.

'ವಿಧಿವಿಲಾಸ' ಕಾದಂಬರಿ ಒಟ್ಟು ೩೦ ಪ್ರಕರಣಗಳಾಗಿ ವಿಭಾಗಿಸಿಕೊಂಡಿದ್ದಾರೆ. ಹಸ್ತಪ್ರತಿಯಲ್ಲಿ ಇದು ೧೫೫ ಪುಟಗಳಷ್ಟು ದೀರ್ಘವಾಗಿದೆ.

ಅನ್ನೋನ್ಯ ಗೆಳೆಯರಾಗಿದ್ದ ಶಿವಪ್ರಸಾದ ಹಾಗೂ ಶಚೀಂದ್ರರು ಪ್ರೀತಿಯಿಂದ ಒಟಿಗೆ ಆಟವಾಡಿಕೊಂಡಿದ್ದ ತಮ್ಮ ಮಕ್ಕಳಿಗೆ ಮುಂದೆ ಮದುವೆ ಮಾಡಿಸಿ ಸಂಬಂಧವನ್ನು ಗಟ್ಟಿಗೊಳಿಸುವ ಯೋಚನೆ ಮಾಡುತ್ತಾರೆ. ಅದಕ್ಕೆ ಸಾಕಿಯಾಗಿ ಪತ್ರವೊಂದರಲ್ಲಿ ವಿಷಯವನ್ನು ದಾಖಲಿಸಿ ಇಬ್ಬರೂ ಸಹಿ ಹಾಕಿ ತಮ್ಮತಮ್ಮ ಪೆಟ್ಟಿಗೆಯಲ್ಲಿ ಭದ್ರವಾಗಿರಿಸುತ್ತಾರೆ. ಸುಮಾರು ಹನ್ನೆರಡು ವರ್ಷಗಳು ಕಳೆದುಹೋಗುತ್ತವೆ. ಈ ನಡುವೆ ಶಿವಪ್ರಸಾದ್ ಹಾಗೂ ಶಚೀಂದ್ರರು ಮರಣ ಹೊಂದುತ್ತಾರೆ. ಎರಡೂ ಕುಟುಂಬಗಳು ದೂರವಾಗುತ್ತವೆ. ಇದಕಿದಂತೆ ಕೊನೆಯಗಳಿಗೆಯಲ್ಲಿ 'ವಿಧಿಯ ವಿಲಾಸ' ದಂತೆ ಎರಡೂ ಕುಟುಂಬಗಳು ಮತ್ತೆ ಒಂದಾಗಿ ಉಮೇಶ-ಪದ್ಮರ ವಿವಾಹವಾಗುತ್ತದೆ.

ಸುಮಾರು ೧೫೦ ಪುಟಗಳಿರುವ ಈ ಕಾದಂಬರಿಯಲ್ಲಿ ಮದುವೆಯಾಗುವ ಗಂಡಸರು ವರದಕ್ಷಿಣೆಯನ್ನು ವಿರೋಧಿಸಿ ಸರಳ ವಿವಾಹವನ್ನು ಬಯಸುತ್ತಾರೆ. ಅತ್ತೆ-ಸೊಸೆಯರು ತಾಯಿ-ಮಗಳಂತೆ ಅನ್ನೋನ್ಯವಾಗಿರುವ ಸಂದರ್ಭಗಳೇ ಹೆಚ್ಚು ಬರುತ್ತವೆ. ಗಂಡು ಮಕ್ಕಳಂತೆಯೇ ಹೆಣ್ಣು ಮಕ್ಕಳು ಉನ್ನತ ವ್ಯಾಸಂಗವನ್ನು ಮಾಡುವ, ಹೊರ ಊರುಗಳಲ್ಲಿ ಉದ್ಯೋಗವನ್ನು ಮಾಡುವ, ತಮ್ಮ ಆಯ್ಕೆಯಂತೆ ಮದುವೆಯಾಗುವ ಪ್ರಗತಿಪರ ವಿಚಾರಗಳಿವೆ. ಹಾಗೆಯೇ ಕುಡಿತದ ದುಷ್ಪರಿಣಾಮಗಳು, ಕುಟುಂಬದ ನಾಶ ಮುಂತಾದ ವಿಷಯಗಳೂ ಕಾದಂಬರಿಯಲ್ಲಿ ಬರುತ್ತವೆ. ಕಾದಂಬರಿಯು ಭಾಷೆ, ಶೈಲಿ, ಕಥನ ತಂತ್ರಗಳಲ್ಲಿ ಹೊಸಗನ್ನಡದ ಆರಂಭಕಾಲದ ಕಾದಂಬರಿಗಳನ್ನು ಹೋಲುತ್ತದೆ.

ಒಟ್ಟಾರೆಯಾಗಿ ಪಾರ್ವತಿಪೂವಯ್ಯನವರ ಸಾಹಿತ್ಯವನ್ನು ಗಮನಿಸಿದಾಗ -

* ತನ್ನ ಸಹಜ ಪ್ರಾಕೃತಿಕ ಸೌಂದರ್ಯದಿಂದ ಕೊಡಗು ಎಲ್ಲರನ್ನೂ ಆಕರ್ಷಿಸುವಂತೆ ಇವರ ಕವಿ ಮನಸ್ಸಿನ ಮೇಲೆ ದಟ್ಟ ಪ್ರಭಾವವನ್ನು ಬೀರಿದೆ. ಪ್ರಕೃತಿಯ ವೈವಿಧ್ಯಮಯ ಸಂಗತಿಗಳ ಕುರಿತು ಇವರು ಬರೆದಿರುವ ಕವನಗಳು, ಇವರ ಕಥೆ, ಕಾದಂಬರಿಗಳಲ್ಲಿ ಬಂದಿರುವ ಪ್ರಕೃತಿ ವರ್ಣನೆಗಳು ಇದನ್ನು ಸ್ಪಷ್ಟಪಡಿಸುತ್ತವೆ. ಇವರ ಸಾಹಿತ್ಯದುದ್ದಕ್ಕೂ ಪ್ರಕೃತಿಯ ಮುಗ್ಧತೆ, ಗಾಂಭೀಯ್ಯ, ಪ್ರಶಾಂತತೆ, ಮೌನ ಮಡುಗಟ್ಟಿ ನಿಂತಿವೆ.

* ಬ್ರಿಟಿಷರ ಆಳ್ವಿಕೆಯ ಕಾಲದಲ್ಲಿ ಕೊಡಗಿನ ಜನವರ್ಗ ಆಧುನಿಕ ಶಿಕ್ಷಣ ವ್ಯವಸ್ಥೆಗೆ ತೆರೆದುಕೊಳ್ಳುತ್ತದೆ. ಉನ್ನತ ವಿದ್ಯಾಭ್ಯಾಸದ ಕಡೆಗೂ ಆಕರ್ಷಿತರಾದ ಜನಗಳು ಉದ್ಯೋಗಗಳಲ್ಲಿ ತೊಡಗಿಸಿಕೊಳ್ಳುತ್ತಾರೆ. ಹಾಗೇ ಹೊಸಬದುಕಿನ, ಆಲೋಚನಾ ವಿಧಾನದ ಪರಿಣಾಮವಾಗಿ ಅವರಲ್ಲಾಗುವ ಕೌಟುಂಬಿಕ ಬದಲಾವಣೆಗಳು; ಅಂತರ್ಜಾತೀಯ ವಿವಾಹಗಳಾದಾಗ, ಕುಟುಂಬ, ಸಮಾಜದಲ್ಲಿ ನಡೆಯುವ ಸಂಘರ್ಷ, ಮುಂತಾದ ಸಂದರ್ಭಗಳ ಸಂಕ್ರಮಣ ಸ್ಥಿತಿಯನ್ನು ವಸ್ತುವಾಗಿಸಿಕೊಳ್ಳುವುದರ ಮೂಲಕ ಆ ಕಾಲದ ಸಮಾಜದ ಸ್ಥಿತಿಗತಿಗಳನ್ನು ಸೂಕ್ಷ್ಮವಾಗಿ ಇವರ ಕೃತಿಗಳು ಮುಂದಿಡುತ್ತವೆ.

* ಮಹಿಳೆಯ ಬದುಕಿನ ವಿವಿಧ ವಯೋಮಾನದ ಸ್ಥಿತ್ಯಂತರಗಳನ್ನು ಕೇಂದ್ರವಾಗಿಸಿಕೊಂಡು ಕೆಲವಾರು ಕಥೆಗಳನ್ನು ಬರೆದಿದ್ದಾರೆ. ಮುಖ್ಯವಾಗಿ ಶಿಕ್ಷಣದಿಂದ ಹೆಣ್ಣಿನ ಬದುಕಿನಲ್ಲಾದ ಬದಲಾವಣೆಗಳನ್ನು ಗುರುತಿಸುತ್ತಾರೆ. ಹೆಣ್ಣಿನ ಆಲೋಚನೆಗಳಿಗೆ, ನಿರ್ಧಾರಗಳಿಗೆ ಹೆಚ್ಚು ಒತ್ತುಕೊಡುವ 'ಸ್ತ್ರೀಪ್ರಾಧಾನ್ಯತೆಯ ಕಥೆಗಳಲ್ಲಿ ಪ್ರಗತಿಪರ ಧೋರಣೆ ಇದೆ. ಎಂತಹ ಕಷ್ಟ ಬಂದಾಗಲೂ ಜೀವನ್ಮುಖಿವಾಗಿ ಚಿಂತಿಸುವ, ಜೀವನಾನುಭವಗಳನ್ನು ನಿರಾಕರಿಸದೆ ಸ್ವೀಕರಿಸಬೇಕೆಂಬ ನಿಲುವನ್ನು ಕಥೆಗಳು ವ್ಯಕ್ತಪಡಿಸುತ್ತವೆ.

* ಬೆಟ್ಟ ಕಾಡುಗಳ ನಡುವೆ ಬದುಕುವ ಕೊಡಗಿನ ಜನಸಮುದಾಯಗಳಿಗೆ ಬೇಟೆ ಒಂದು ಸಾಂಪ್ರದಾಯಿಕ ಕ್ರೀಡೆ ಮಾತ್ರವಾಗಿರದೆ ಜೀವನದ ಭಾಗವೇ ಆಗಿದೆ. ಇಂತಹ ಬೇಟೆಯ ಸಂದರ್ಭಗಳಲ್ಲಿ ತಿಳಿದೂ, ತಿಳಿಯದೆಯೂ ನಡೆದುಹೋಗುವ ಅನಾಹುತಗಳನ್ನು, ಬೇಟೆಯ ಮೋಜಿನ ಜೊತೆ ಜೊತೆಯಲ್ಲೇ ಕಥೆಗಳು ದಾಖಲಿಸುತ್ತವೆ.

* ತಂದೆಯಿಂದ ಮಕ್ಕಳಿಗೆ ವಂಶಪರಂಪರಾಗತವಾಗಿ ಬರುವ ಆಸ್ತಿಯ ಹಕ್ಕುದಾರಿಕೆ, ಪಾಲುದಾರಿಕೆ ಇಂದಿಗೂ ಕೊಡಗಿನ ಜೀವಂತ ಸಮಸ್ಯೆಗಳಲ್ಲಿ ಒಂದು. ಅನ್ಯೋನ್ಯವಾಗಿದ್ದ ಕುಟುಂಬಗಳು ಆಸ್ತಿಯ ನೆಪದಲ್ಲಿ ಹಕ್ಕುದಾರಿಕೆಯ ಹಿನ್ನೆಲೆಯಲ್ಲಿ ವೈಷಮ್ಯವನ್ನು ಬೆಳೆಸಿಕೊಳ್ಳುವ, ದ್ವೇಷ ಮಿತಿಮೀರಿದಾಗ ಸಹೋದರರೇ, ತಂದೆ-ಮಕ್ಕಳೇ ಕೋವಿಯಿಂದ ಗುಂಡಿಟ್ಟು ಕೊಲ್ಲುವ, ಸಾವಿಗೀಡಾಗುವ ವಿಚಾರಗಳು ಕೃತಿಗಳಲ್ಲಿ ಬಂದಿವೆ. ಗಂಡು-ಹೆಣ್ಣೆಂಬ ಭೇದವಿಲ್ಲದೆ ಎಲ್ಲರೂ ಕೋವಿಯನ್ನು (ಬಂದೂಕನ್ನು) ಬಳಸುವ ವಿಶೇಷ ರೀತಿ ದಟ್ಟ ಪ್ರಾದೇಶಿಕತೆಯನ್ನು ಬಿಂಬಿಸುತ್ತವೆ.

* ಹೆಂಡತಿಯನ್ನು ಕಳೆದುಕೊಂಡ ಗಂಡ ಮರು ಮದುವೆ ಮಾಡಿಕೊಳದೆ ಮಕ್ಕಳ ವಿದ್ಯಾಭ್ಯಾಸ ಪ್ರಗತಿಯ ಕುರಿತು ಚಿಂತಿಸುವ, ಹಾಗೆಯೇ ಗಂಡನಿಲ್ಲದ ವಿಧವೆ ಹೆಣ್ಣು ಮರು ಮದುವೆ ಮಾಡಿಕೊಳ್ಳದೆ ತನ್ನ ಗಂಡನ ಆಸ್ತಿಯನ್ನು ಮುನ್ನಡೆಸುತ್ತಾ, ಮಕ್ಕಳೊಂದಿಗೆ ಧೈರ್ಯ್ಯದಿಂದ ಬಾಳ್ವೆ ನಡೆಸುವ ದಿಟ್ಟತನವನ್ನು ಇಲ್ಲಿನ ಕಥೆಗಳು ಮುಂದಿಡುತ್ತವೆ.

* ವರದಕ್ಷಿಣೆಯಂತಹ ಸಮಸ್ಯೆಗಳು ಇಲ್ಲಿನ ಜನಸಮುದಾಯವನ್ನು ಹೆಚ್ಚಾಗಿ ಕಾಡದಿದ್ದಾಗಲೂ, ಆಧುನಿಕ ಶಿಕ್ಷಣದ ಪರಿಣಾಮವಾಗಿ ಅಲ್ಲಲ್ಲಿ ವರದಕ್ಷಿಣೆಗಾಗಿ ಪೀಡಿಸುವ ಕೆಲವು ಘಟನೆಗಳು ಸಂಭವಿಸಿದಾಗ ಅವುಗಳನ್ನು

ಗಂಡುತನ. ಸ್ವಾಭಿಮಾನವನ್ನು ಮುಂದಿಟ್ಟುಕೊಂಡೇ ನಿರಾಕರಿಸುವ ವಿಚಾರಗಳನ್ನು ತರಲಾಗಿದೆ. ಪ್ರಾದೇಶಿಕ ನಂಬಿಕೆಗಳು, ನುಡಿಗಟ್ಟುಗಳು ಉದ್ದಕ್ಕೂ ಬಳಕೆಯಾಗಿವೆ. ಕೊಡಗಿನ ಗೌರಮ್ಮನವರ ನಂತರ ಕನ್ನಡದಲ್ಲಿ ಸಾಹಿತ್ಯರಚನೆ ಮಾಡಿರುವ ಇವರು ಮುಖ್ಯವಾಹಿನಿಗೆ ಬರದೆ ಎಲೆಮರೆಯ ಕಾಯಿಯಾಗಿಯೇ ಉಳಿದರು. - ಹೊಸಗನ್ನಡದ ಆರಂಭದ ಕಾದಂಬರಿಗಳು ಇವರ ಅಪ್ರಕಟಿತ ಕಾದಂಬರಿ 'ವಿಧಿವಿಲಾಸ'ದ ಮೇಲೆ ಹೆಚ್ಚಿನ ಪ್ರಭಾವ ಬೀರಿರುವುದನ್ನು ಕಾಣಬಹುದು. ಕಾದಂಬರಿಯ ಶೈಲಿ, ತಂತ್ರ, ಭಾಷೆಯಲ್ಲಿ ಇದನ್ನು ಗುರುತಿಸಬಹುದಾಗಿದೆ.

ತಮ್ಮ ಇಳಿವಯಸ್ಸಿನಲ್ಲಿ ಆಧ್ಯಾತ್ಮದತ್ತ ಒಲವನ್ನು ಬೆಳೆಸಿಕೊಂಡ ಲೇಖಕಿ ಈ ಹಿನ್ನೆಲೆಯ ಹಲವಾರು ಕವನಗಳನ್ನು ಬರೆದಿದ್ದಾರೆ.

'ದೇಶಸುತ್ತು, ಕೋಶ ಓದು' ಎಂಬಂತೆ ಇವರಿಗೆ ಓದುವ ಹವ್ಯಾಸದ ಜೊತೆಗೆ ಭಾರತದ ಉದ್ದಗಲಕ್ಕೂ ಪ್ರವಾಸಮಾಡಿ ಬಂದಿದ್ದ ಅನುಭವವಿತ್ತು. ಈ ತಿರುಗಾಟದ ಅನುಭವಗಳೂ ಕೂಡ ಇವರ ಬರವಣಿಗೆಯ ಶಕ್ತಿಯಾಯಿತು. ಕೊಡವ ಕನ್ನಡ ಸಾಹಿತ್ಯವಲಯದ ಶಕ್ತಿಯನ್ನು ಇವರು ಹೆಚ್ಚಿಸುವಂತಾಯಿತು.

# ಅನುಬಂಧ

೧. ಪಾರ್ವತಿ ಪೂವಯ್ಯನವರ ಬದುಕಿನ ಪ್ರಮುಖ ಘಟನೆಗಳು.

೨. ೧೯೯೦ ರಲ್ಲಿ ಮೈಸೂರಿನ ದಸರಾ ಕವಿಗೋಷ್ಠಿಯಲ್ಲಿ ವಾಚಿಸಿದ ಕವನ.

೩. ಭಾರತಕ್ಕೆ ಸ್ವಾತಂತ್ರ್ಯ ಬಂದಾಗ ೧೯೪೭ರಲ್ಲಿ ಬರೆದ ಕವನ 'ಬಾಪೂಜಿಯ ಸ್ತುತಿ'

೪. 'ಸ್ವರಾಜ್ಯ' ಕುರಿತ ಕವನ.

೫. ಜೆ.ಓ. ಟೆರಿಯವರು ತಾವು ಬರೆದ ಇಂಗ್ಲಿಷ್ ಕವನ PEACE' ನ್ನು ಪಾರ್ವತಿಯವರಿಗೆ ಅರ್ಪಿಸಿದ ಕುರಿತ ವಿವರ.

೬ ಕುಟುಂಬದ ಭಾವಚಿತ್ರಗಳು.

೭) ಕಲಾಕೃತಿಗಳು, ಪೇಂಟಿಂಗ್‌ನ ಛಾಯಾಪ್ರತಿ.

೮) ಪಾರ್ವತಿಯವರ ಅಪ್ರಕಟಿತ ಕಥೆ 'ಕನ್ಯಾಬಲಿ'.

೯) ಸಾಹಿತ್ಯ ಗೋಷ್ಠಿಗಳಲ್ಲಿ ಭಾಗವಹಿಸಿದ ಆಹ್ವಾನ ಪತ್ರಿಕೆ.

೧೦) ಅವರ ಪ್ರವಾಸದ ಛಾಯಾಚಿತ್ರಗಳ ಪ್ರತಿಗಳು.

೧) ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕದ ಎದುರು

೨) ದೆಹಲಿಯ ಕುತುಬ್ ಮಿನಾರ್ ಎದುರಲ್ಲಿ

೩) ದೆಹಲಿಯ ಇಂಡಿಯಾಗೇಟ್ ಎದುರಲ್ಲಿ

೪) ರಾಜಘಾಟ್ ಎದುರು ಗೌರವಸಮರ್ಪಣೆ

೫) ಬನಾರಸ್‌ನಲ್ಲಿ - ಗಂಗೆಯಲ್ಲಿ

೬) ಕಾಶ್ಮೀರದ ಗುಲ್ಬಾರ್ಗ್‌ನ ದಾರಿಯಲ್ಲಿ ಕುದುರೆ ಸವಾರಿ

೭) ಆಗ್ರಾದ ತಾಜ್‌ಮಹಲ್‌ನ ಮುಂದೆ

೮) ಜೈಪುರದ ಅಮರ್ ಪ್ಯಾಲೆಸ್‌ನಲ್ಲಿ

೯) ಕಲ್ಕತ್ತಾದ ರಾಮಕೃಷ್ಣ ಮಠ ಭೇಟಿ

# ೧. ಪಾರ್ವತಿ ಪೂವಯ್ಯನವರ ಬದುಕಿನ ಪ್ರಮುಖ ಘಟನೆಗಳು :

| | | |
|---|---|---|
| ೩-೫-೧೯೧೩ | : | ಜನನ |
| ೧೯೩೩ | : | ಮಡಿಕೇರಿಯಲ್ಲಿ ೧೮ನೆಯ ಕನ್ನಡ ಸಾಹಿತ್ಯ ಸಮ್ಮೇಳನದ ಸ್ವಾಗತ ಗೀತೆಯ ಪ್ರಭಾವ. |
| ೧೯೩೪ | : | ಮಡಿಕೇರಿಯಲ್ಲಿ ಗಾಂಧೀಜಿಯವರನ್ನು ಭೇಟಿಯಾದ ಸಂದರ್ಭ. |
| ೧೯೩೫ | : | ಕೂತಂಡ ಪೂವಯ್ಯನವರೊಂದಿಗೆ ವಿವಾಹ. |
| ೧೯೪೨ | : | ಶ್ರೀಮತಿ ಕತ್ರೀನಾ ಐವರ್‌ಬುಲ್ ರೊಂದಿಗೆ ಒಡನಾಟ - ರೆಡ್‌ಕ್ರಾಸ್ ಸಂಸ್ಥೆಯ ಸದಸ್ಯತ್ವ. |
| ೧೯೪೭ | : | ಮಹಾತ್ಮ ಗಾಂಧೀಜಿ ಕುರಿತು ಕೊಡವ ಭಾಷೆಯಲ್ಲಿ ಸ್ವರಚಿತ ಕವನವಾಚನ. |
| ೧೯೫೬ | : | ಪಾಲಿಬೆಟ್ಟದಲ್ಲಿ ಮಹಿಳಾ ಸಮಾಜ ಆರಂಭಿಸಿ ಅಧ್ಯಕ್ಷರಾಗಿ ಸೇವೆ. |
| ೧೯೬೧ | : | ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಸ್ವರಚಿತ 'ಸ್ವರಾಜ್ಯ' ಕವನ ವಾಚನ. |
| ೧೯೭೬ | : | ಪ್ರಥಮ ಕೃತಿ 'ಕೊಡಗಿನ ಸಣ್ಣಕಥೆಗಳು ಮತ್ತು ಕವನಗಳು' ಪ್ರಕಟ. |
| ೧೯೭೭ | : | ಎರಡನೆಯ ಕೃತಿ 'ಕೊಡಗಿನ ಕಥೆಗಳು' (ಕಥೆಗಳು ಮತ್ತು ಕವನಗಳು) ಪ್ರಕಟ. |
| ೧೯೮೦ | : | ಮೂರನೆಯ ಕೃತಿ 'ಭುಗಿಲ ಗೊಂಚಲು' ಪ್ರಕಟ. |

೧೯೯೦ : ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ನಡೆದ ದಸರಾ ಕವಿಗೋಷ್ಠಿಯಲ್ಲಿ ಸ್ವರಚಿತ ಕೊಡವ ಕವನ ವಾಚನ.

೧೯೯೦ : ಪಾರಾಣೆಯಲ್ಲಿ ನಡೆದ ೫ನೆಯ ಕೊಡವತಕ್ಕ್ ಸಮ್ಮೇಳನದ ಅಧ್ಯಕ್ಷಸ್ಥಾನ.

೧೯೯೦ : ವಿರಾಜಪೇಟೆ ತಾಲೂಕು ಕನ್ನಡ ರಾಜ್ಯೋತ್ಸವ ಸಮಿತಿಯ ಸನ್ಮಾನ.

೧೯೯೪ ಫೆಬ್ರವರಿ೧೧: ಮರಣ.

## ೧. ೧೯೯೦ರಲ್ಲಿ ಮೈಸೂರಿನ ದಸರಾ ಕವಿಗೋಷ್ಠಿಯಲ್ಲಿ ವಾಚಿಸಿದ ಕವನ.

ಜೂಜುಮಾಡ್ಲ ! ಬೊಜಿಕುಂಞಯೇ
ಬೇಜರಿಲ್ಲತೇ ||
ಚಾಯಿ ತೊಟ್ಟಿಲ್ | ಜೂಜು ಮಾಡ್ಲ ||
ಚಾಯಿ ಕುಂಞ ||೧||
ಅವ್ವಂಡ ಕೊದಿಕುಂಞ
ಅಪ್ಪಂಡ ಕುಳಿಕುಂಞ
ದೇವಡ ಮುತ್ತ್ ಕುಂಞ "ಜೂಜು"
ಮನೆಕೋರ್ ಬೊಳಕ್ ನೀನ್ ||
ಮನಸ್‌ಕ್ ಬೊಳಕ್ ನೀನ್ || || ೧ ||
ಜನಕ್ಕೆಲ್ಲ ಕೊಡಿಯಾನಕುಂಞನೀನ್
ಪತ್‌ತಿಂಗ ಪೊತ್ತಕುಂಞ
ಪೆತ್ತ್‌ವ್ವಂಗೊತ್ತ ಕುಂಞ
ಸತ್ಯತ್ ಬಾಳ್ನೀನ್ ಬೋಜಿಕುಂಞ || ೧ ||
ಮಕ್ಕಡ ಮಾಣಿಕ್ಯ ||
ಒಕ್ಕಡ ಚಾಣಕ್ಯ ||
ಮುಕ್ಕಣ್ಣ ನೆಕ್ಕಲು ಪೊಲತುನಿನ್ನ ||೧||
(ಕವನದ ಅನುವಾದ)

ನಿದ್ದೆ ಮಾಡು ಮುದ್ದುಮಗುವೇ

ನೀ ಬೇಸರಿಸದೇ.....

ಸೊಗದ ತೊಟ್ಟಿಲಲಿ ನಿದ್ದೆಮಾಡುನೀ

ಸೊಗಸು ಕಂದನೇ......

ತಾಯಿಯ ಮುದ್ದುಮಗು

ತಂದೆಯ ಪ್ರೀತಿಮಗು

ದೇವರ ಮುತ್ತುಮಗು ॥ನಿದ್ದೆ॥

ಮನೆಗೊಂದು ದೀಪ ನೀನು

ಮನಕೊಂದು ಶಾಂತಿ ನೀನು

ಜನರಿಗೆ ಮುದ್ದಾದ ಮಗುವು ನೀನು ॥ ನಿದ್ದೆ ॥

ಹತ್ತು ತಿಂಗಳು ಹೊತ್ತ ಮಗು

ಹೆತ್ತಮ್ಮನಿಗೊತ್ತ ಮಗು

ಸತ್ಯದಿ ಬಾಳುನೀ ಸೊಗದ ಮಗು ॥ ನಿದ್ದೆ ॥

ಮಕ್ಕಳಾ ಮಾಣಿಕ್ಯ

ವಕ್ಕದಾ ಚಾಣಕ್ಯ

ಮುಕ್ಕಣ್ಣನೆಂದೆಂದು ಕಾಯುವನು ನಿನ್ನ ॥ ನಿದ್ದೆ ॥

## ೩. ಬಾಪೂಜಿಯ ಸ್ತುತಿ (೧ ಅಕ್ಟೋಬರ್ ೧೯೪೭)

ಗಾಂಧಿ ಮಹಾತ್ಮನ । ತುದಿಪಿ ನಾನಿಂದ್ ।

ಮಹದವತಾರ । ಪುರುಷನೋ ।

ಇಂದ್ ಕೌಟ್ಟ್ನ । ಸ್ವರಾಜ್ಯಕ್ಕವನೇ ।

ಮೂಲ ಕಾರಣ । ಕರ್ತನೆಣ್ಣೊಂಡು ।

ಪಟೇಲ, ನೆಹರು । ಸರೋಜಿನಿಯಡ ದಿಟ್ಟ ಸಾಧನೆಲ್ ।

ಸತ್ಯ ಅಹಿಂಸೆ । ಧರ್ಮದಯತ್ಲ್ ।

ಜನ ನಷ್ಟ ಇಲ್ಲತೆ । ಸ್ವರಾಜ್ಯ ಕ್ಟ್ಟ್ಚಿ ।

ವೀರಮಾತೆ । ಭಾರತಾಂಬೆಡ ।

ಶೂರಮಕ್ಕಳಿವೂ ।

ಅಪೂರ್ವ ತರತ್‌ಲ್ | ಪರದೇಶಿ ಜನಳ |
ಸೇರಿಕೂಡಿತ್ | ಸ್ವರಾಜ್ಯಪಡ್‌ಂದತ್ |
ಪರಮೇಶ ದೇವನೋ | ಗಾಂಧಿ ಮಹಾತ್ಮಂಗ್
ಚಿರಾಯು ಕೊಡ್‌ಕಡ್‌ಂದ್ |
ಪರಿಶುದ್ಧ ಭಕ್ತಿಲ್ | ಬೋಡುವಿನಾ |
ಪರಮೇಶ ದೇವಂಗ್ | ಅಡ್ಡಬುದ್ದಿತ್ |
ಗಾಂಧಿ ರಾಜನ | ತುದಿಪಿ ನಾನಿಂದ್ |
(ಅನುವಾದ)
ಗಾಂಧಿ ಮಹಾತ್ಮನ | ಸ್ತುತಿಪೆ ನಾನಿಂದು |
ಮಹದವತಾರ | ಪುರುಷನಾ ||
ಇಂದು ದೊರಕಿದ ಸ್ವರಾಜ್ಯಕ್ಕವನೇ
ಮೂಲಕಾರಣ ಕರ್ತನೆನಬೇಕು
ಪಟೇಲ ನೆಹರು ಸರೋಜಿನಿಯರ
ದಿಟ್ಟ ಸಾಧನೆಯಲಿ |
ಸತ್ಯ, ಅಹಿಂಸೆ ಧರ್ಮದಯದಲಿ | ಜನ
ನಷ್ಟ ವಿಲ್ಲದೆ ಸ್ವರಾಜ್ಯ ದೊರಕಿತು
ವೀರಮಾತೆ ಭಾರತಾಂಬೆಯ
ಶೂರ ಮಕ್ಕಳಿಗೆ.
ಅಪೂರ್ವ ತೆರದಲಿ ಪರದೇಶಿಯರನು
ಸೇರಿ ಕೂಡಿ ಸ್ವರಾಜ್ಯಪಡೆದರು
ಪರಮೇಶ ದೇವನು ಗಾಂಧಿ ಮಹಾತ್ಮನು
ಚಿರಾಯುವಾಗಲೆಂದು
ಪರಿಶುದ್ಧ ಭಕ್ತಿಯಲಿ ಬೇಡುವೆನಾ
ಪರಮೇಶ ದೇವಗೆ ನಮಿಸಿನಾ
ಗಾಂಧಿರಾಜನ ಸ್ತುತಿಪೆನಾನಿಂದು ||

## ೪. 'ಸ್ವರಾಜ್ಯ'

ಎಂಗಕಿಂದ್ ಕ್ಟ್ಟ್‌ಚಿ । ಬೋಂಡ್ಯ ಸ್ವರಾಜ್ಯ ।
ಬಂಗತ್‌ನ ಮರ್‌ಂದಿತಿಕ್ಕ । ಕುಶಿಲ್ ಕೂಡಿ ಕಳಿಕನ ।
ಎಚ್ಚಕ್ಕೋ ಕಾಲಕ್ । ಕ್ಟ್ಟ್‌ಚಿ ಇಂದ್ । ಮೆಚ್ಚಿತ್
ಮೂಡ್‌ನ ಸ್ವತಂತ್ರಾ। ಗಾಂಧಿಯು ಮಾಡ್‌ನ
ಸಾಧನೆ ಕಾಯಿತ್ । ಇಂದ್ ಕ್ಟ್ಟ್‌ಚಿ ಸ್ವಾತಂತ್ರಾ ।
ಇಂದ್ ಪಾರ್‌ವ ದೇಶತ್ ಎಲ್ಲಾ । ಮೂಂದ್
ರಂಗ್‌ರ ಬಾವುಟ । ಕೊಡಿಲ್ ಚೋಪ್ ।
ನಡುಲ್ ಬೊಳ್‌ಪ್ । ಅಡಿಲ್ ಕಾಂಬದ್
ಪಚ್ಚೆಯೋ । ಮದ್ಯತ್ ಉಂಡ್ । ಅಶೋಕ
ಚಕ್ರ । ಎದ್ದಿತ್ ಕಾಂಬ ನೋಟಿರೋ
ಎಲ್ಲರೂ ಬಂದಿತ್ । ಇಲ್ಲಿಯೇ ಸೇರಿತ್ ।
ನಲ್ಲೋರ್ ಮನತ್ ಬೋಡನಾ । ಭಾರತ
ತಾಯಿಕ್ । ಭಾಗ್ಯ ಬಂದಿತ್ । ದಾರುಕ್ಕೂ
ಬೊತ್ತುಲೆ ಇಂಞ ಅವ । ಪ್ರೀತಿಲ್
ಈಶ ಭಕ್ತಿಲ್ ಬೋಡನ । ಮುಕ್ತಿನ
ಎಂಗಕ್ ತರಂಡೂಂದ್ । ಎಂಗಡ ದೇಶಕ್
ಎಂಗಡ ಬಾವುಟ । ಇಂಗ್ಲಿಷ್ ಕಾರಕ್ ಇಂಞಲ್ಲೆ !
(ಅನುವಾದ)
ಎಮಗಿಂದು ದೊರಕಿತು ಬೇಕಾದ ಸ್ವರಾಜ್ಯ
ಕಷ್ಟಗಳನ್ನು ಮರೆತುನಾವು ಸೊಗದಿ ಸೇರಿ ಆಡುವ
ಎಷ್ಟೋ ವರ್ಷಕೆ ದೊರಕಿತಿಂದು ಮೆಚ್ಚುತ
ಮಾಡಿದ ಸ್ವಾತಂತ್ರ್ಯ ! ಗಾಂಧಿಯು ಮಾಡಿದ
ಸಾಧನೆಗಾಗಿ । ಇಂದು ದೊರಕಿತು ಸ್ವಾತಂತ್ರಾ
ಇಂದು ಹಾರಿದೆ ದೇಶದಲೆಲ್ಲಾ ಮೂರು
ಬಣ್ಣದ ಬಾವುಟ । ಮೇಲೆ ಕೆಂಪು
ನಡುವೆ ಬಿಳುಪು । ಕೆಳಗೆ ಕಾಣ್ಬುದು

ಹಸಿರು | ನಡುವಲಿಹುದು ಅಶೋಕ
ಚಕ್ರ | ಎದ್ದು ಕಾಣ್ಬುದು ನೋಡಿರೋ
ಎಲ್ಲರೂ ಬರುತ ಇಲ್ಲಿಯೇ ಸೇರುತ
ಒಮನದಿಂದಲಿ ಬೇಡುವಾ | ಭಾರತ
ತಾಯಿಗೆ ಭಾಗ್ಯ ಬಂದಿದೆ | ಯಾರಿಗೂ
ಹೆದರಳು ಇನ್ನವಳು | ಪ್ರೀತಿಯಲಿ
ಈಶ ಭಕ್ತಿಯಲಿ ಬೇಡುವ | ಮುಕ್ತಿಯ
ಎಮಗೆ ತರಲೆಂದು | ನಮ್ಮಯ ದೇಶಕೆ
ನಮ್ಮಯ ಬಾವುಟ ಬ್ರಿಟಿಷರಿಗೆ ಇನ್ನಿಲ್ಲ.

## 5. PEACE

### (You Can't Find It In The Marketplace!)

**Dedicated to Mrs.K.M. Poovaiah who provided the inspriation during a visit by the writer to her home at Laxmi Estate in beautiful Coorg, Karnataka, India, by remarking about Peace: “You can't find it in the marketplace”**

**May you, Mrs. Poovaiah possess that Peace in abundance and may all who enter your presence sense that Peace and be blessed by it.**

**J.O. Terry**

# ೬. ಕುಟುಂಬದ ಭಾವಚಿತ್ರಗಳು



ಮಗ  ಉತ್ತಪ್ಪನೊಂದಿಗೆ ಪೂವಯ್ಯ – ಪಾರ್ವತಿ ದಂಪತಿ.



೧೯೬೬ರಲ್ಲಿ ತೆಗೆದ ಕುಟುಂಬದ ಭಾವಚಿತ್ರ



ಆತ್ಮೀಯರೊಂದಿಗೆ ಪೂವಯ್ಯ - ಪಾರ್ವತಿ ದಂಪತಿ




ಪಾರ್ವತಿಪೂವಯ್ಯ




ಸಹೋದರಿಯೊಂದಿಗೆ ಪಾರ್ವತಿಯವರು

೭. ೧. ಪೇಂಟಿಂಗ್



೭.೨. ಪೇಂಟಿಂಗ್



೮.೧. ಜೇಡಿಮಣ್ಣಿನ ಕಲಾಕೃತಿ



೮.೨. ಜೇಡಿಮಣ್ಣಿನ ಕಲಾಕೃತಿ



## ಅಪ್ರಕಟಿತ ಕತೆ – ಕನ್ಯಾಬಲಿ

೧. - ನೋಡಿ, ಪಕ್ಕದ ಮನೆಯಲ್ಲಿ ಯಾರೋ ಅಳುತ್ತಿರುವಂತೆ ಕೇಳಿಸುತ್ತದೆ. ಅದೋ, ಕೇಳಿದಿರಾ? ಅಯ್ಯೋ, ಪಾಪ ! ಏಳಿ, ನೋಡಿ ಬನ್ನಿ.

- ಹೋಗೇ ನಿನಗೆ ನಿದ್ರೆ ಬಾರದೆಂದರೆ ನಿದ್ರಿಸುವವರನ್ನೂ ನೀನು ನಿದ್ರಿಸಬಿಡೆ ಸುಮ್ಮನೆ ಮಲಗು. ಇಲ್ಲವಾದರೆ ಪುಸ್ತಕವಾವುದಾದರೂ ಓದು.

- ರಾಮ, ರಾಮಾ ! ಯಾರೋ ಹೊಡೆಯುತ್ತಿರುವರು. ಒಮ್ಮೆ ಕಿವಿಗೊಡಿರಿ. ಬಹಳ ಹೊತ್ತಿನಿಂದ ಕೇಳುತ್ತಿರುವೆನು.

- ಅದಕ್ಕೆ ನಾನೇನು ಮಾಡಲಿ ? ಹೋಗಿ, ನಾನೂ ಹೊಡೆಯಲೆ.

- ಅಳುವ ಧ್ವನಿಯೂ ಕೇಳಿಸುತ್ತಿರುವುದು. ಎದ್ದು ಹೋಗಬಾರದೇ? ಎಂತಹವರಪ್ಪಾ ನೀವು?

- ಅವರ ಕಣ್ಣಲ್ಲಿ ನೀರು ತುಂಬಾ ಇದೆ, ಅಳುವರು ! ಈ ಕಗ್ಗತ್ತಲೆಯಲ್ಲಿ ಯಾರು ಹೋದಾರು?

- ಏಳಿ, ಅಂದ್ರೆ ! ವಿಚಾರಿಸಿ ಬನ್ನಿ, ನಿಮಗೆ ರವಷ್ಟೂ ಕರುಣೆ ಇಲ್ಲವೆಂದು ತೋರುವುದು. ಹಗಲಾಗಿದ್ದರೆ ನಾನೇ ಓಡಿ ಬಿಡುತ್ತಿದ್ದೆ. ನಿಮ್ಮನ್ನು ಎಬ್ಬಿಸುತ್ತಿರಲಿಲ್ಲ. ದೇವರೇ !

- ನಿನ್ನ ಉಪದ್ರ ತಪ್ಪದು. ಯಾವುದಾದರೊಂದು ನೆಪ ಸಿಕ್ಕಿಯೇ ಬಿಡುವುದು. ಬೆಳಕು ಹರಿಯಲಿ. ಆಮೇಲೆ ಹೋಗುವೆ. ಕಂಡವರು "ಕರಿದೆವ್ವ" ವೆಂದು ಹೆದರಿಕೊಂಡಾರು ! ನೀನು ನಿದ್ರಿಸು.

- ಇಲ್ಲ. ದಮ್ಮಯ್ಯ ಕಿವಿ ಗೊಡಿರಿ. ಹೆಮ್ಮಕ್ಕಳ ಸ್ವರ ! ಯಾರೋ ಕೋಲಿನಿಂದ ಬಡಿಯುತ್ತಿರುವರು. ಬೇಗ ಹೋಗಿ ಅಂದ್ರೆ ನಿಮ್ಮದು ಮರಜನ್ಮವೇನು? ನನಗೆ ನಿದ್ರೆ ಬಾರದು. ಹೇಗೆ ನಿದ್ರಿಸಲಿ?

-ನನ್ನದು ಮರಜನ್ಮವೂ ಅಲ್ಲ. ಕಲ್ಲು ಜನ್ಮವೂ ಅಲ್ಲ. ನಿನ್ನಂತೆ ನರಜನ್ಮವೇ! ಈಗ ಶಾಂತಳಾಗು. ನಡುರಾತ್ರಿಯಲ್ಲಿ ಈ ಕಗ್ಗತ್ತಲೆಯಲ್ಲಿ ಹೊರಗೆ ಹೋದರೆ 'ತಲೆ ಸರಿ ಇಲ್ಲ'ದವನೆಂದು ಗ್ರಹಿಸದಿರರು, ಕಂಡವರು ! ನಿನಗೇನಂತೆ !

- ನೀವು ಎದ್ದು ಹೋಗುವುದನ್ನು ಯಾರಪ್ಪ ಕಾದಿರುವರು! ನಾವು ನೆರೆಯವರಾಗಿದ್ದು ಫಲವೇನು? ಸಹಾಯಕ್ಕೆರಗ ಬೇಡವೇ? ಹೋಗಿ !

- ಹೆಂಡತಿಯ ಮಾತುಕೇಳಿ ತಡೆಯಲಾರದೆ ವಸಂತ ಎದ್ದೇ ಬಿಟ್ಟ. ನಿದ್ರೆಯ ಮಂಕಿನಲಿದ್ದ ತನ್ನೆರಡು ಕಣ್ಣುಗಳನ್ನು ಒರೆಸಿಕೊಂಡು, ಬಟ್ಟೆ ಬದಲಿಸಿದ. ಕೋಣೆಯ ಬಾಗಿಲನ್ನು ತೆರೆದು ಹೊರಗೆ ಕಾಲಿಟ್ಟ,

- ನಾ ಬರಲೇ? - ಎಂದಳು ಕುಮುದ

- ಬೇಡ - ಎಂದ ವಸಂತಕುಮಾರ.

ಗೋಕುಲಂನ ಮಾರುತಿ ಬೀದಿ, ಏಳೆಂಟು ಮನೆಗಳಿದ್ದವು. ಮೊದಲ ಮನೆ ವಸಂತ ಕುಮಾರನದು. ಸರಕಾರಿ ನೌಕರಿಯಿಂದ ನಿವೃತ್ತಿ ಹೊಂದಿದ ಮೇಲೆ ಗೋಕುಲಂನಲ್ಲಿ ಬಂದು ನೆಲಸಿದ್ದ ಕುಮುದೆ ಆತನ ಪತ್ನಿ. ಕಾಂತಿ ಮತ್ತು ಶಾಂತಿ ಇಬ್ಬರು ಹೆಮ್ಮಕ್ಕಳು. ಭಾಸ್ಕರ ಒಬ್ಬನೇ ಮಗ.

ಪಕ್ಕದ ಮನೆಯಲ್ಲಿ ಚಕ್ರಪಾಣಿ ತನ್ನ ಕುಟುಂಬದೊಡನೆ ವಾಸವಿದ್ದ. ಆತನ ಮಡದಿ ಗೌರಮ್ಮ, ನಿರಂಜನ ಒಬ್ಬನೇ ಮಗ, ವಿನಿತ ಮತ್ತು ಸುನಿತ ಇಬ್ಬರು ಹೆಮ್ಮಕ್ಕಳು. ಇಬ್ಬರಿಗೂ ಮದುವೆಯಾಗಿತ್ತು. ವಿನಿತ ಮದ್ರಾಸಿನಲ್ಲಿದ್ದಳು. ಆಕೆಯ ಗಂಡ ದಾಮೋದರ ಎಲೆಕ್ಟ್ರಿಕ್ ಎಂಜಿನಿಯರ್, ಸುನಿತ ಮಂಗಳೂರಿನಲ್ಲಿ. ಆಕೆ ಗಂಡ ಡಾ || ಉಮಾಪತಿ, ನಿರಂಜನ್ ಇಂಜಿನಿಯರ್, ಆತನಿಗೆ ಮೈಸೂರಿನಲ್ಲಿಯೇ ಕೆಲಸ, ಒಬ್ಬನೇ ಮಗನೆಂದು ದೂರದ ಕೆಲಸಕ್ಕೆ ತಂದೆ ತಾಯಿಗಳು ಹೋಗ ಬಿಡಲಿಲ್ಲ. ಮುದ್ದಿನಿಂದ ಸಲಹಿದ್ದುದರಿಂದ ಆತ ತಂದೆ ತಾಯಿಗಳ ಕೈಗೊಂಬೆಯಂತಿದ್ದ. ಆತ ಬೃಂದಾವನದಲ್ಲಿದ್ದ ಶ್ರೀನಿವಾಸನ ಮಗಳಾದ ನಿರ್ಮಲೆಯನ್ನು ಮದುವೆಯಾಗಿದ್ದ.

ಒಂದು ವರುಷ ಕಳೆದಿತ್ತು. ಶ್ರೀನಿವಾಸನಿಗೆ ಇಬ್ಬರು ಹೆಣ್ಣು ಮಕ್ಕಳು, ನಿರ್ಮಲೆ ಮತ್ತು ನರ್ಮದೆ. ನಿಷದ್ ಮತ್ತು ಆತನ ಪತ್ನಿ ಮಾಧವಿ. ನೀರಜ್ ಇಬ್ಬರು ಗಂಡುಮಕ್ಕಳೂ ಚಿಕ್ಕವರು. ಶಾಲೆಗೆ ಹೋಗಿಕೊಂಡಿದ್ದರು.

ಗೋಕುಲಂನ ವಸಂತಕುಮಾರನ ಹಿರಿಯ ಮಗಳಾದ ಕಾಂತಿಯೂ ಶ್ರೀನಿವಾಸನ ಹಿರಿಯ ಮಗಳಾದ ನಿರ್ಮಲೆಯೂ ಒಂದೇ ಶಾಲೆಯಲ್ಲಿ ಓದಿದವರು. ಸಮವಯಸ್ಸಿನವರು. ಹತ್ತನೆ ಕ್ಲಾಸ್ ಓದಿ, ಮನೆಯಲ್ಲಿ ಕುಳಿತರು. ಕಾಲೇಜಿನ ಮೆಟ್ಟಿಲು ಹತ್ತುವ ಅಭಿಲಾಷೆ ಇರಲಿಲ್ಲ. ಹೊಲಿಗೆ, ಸಂಗೀತ ಕಲಿಯುತ್ತಿದ್ದರು.

ಸಹಪಾಠಿ ನಿರ್ಮಲೆಯ ವಿವಾಹ ನಿಶ್ಚಯವಾದ ವಾರ್ತೆ ಕಾಂತಿಗೆ ತಿಳಿಯಿತು. ಇಷ್ಟು ಬೇಗ ಏಕೆ ಒಪ್ಪಿದೆ ಎಂದು ಕಾಂತಿ ನಿರ್ಮಲೆಯನ್ನು ಪ್ರಶ್ನಿಸಿದಳು. ತಂದೆ ತಾಯಿಗಳ ಇಚ್ಛೆಯನ್ನು ಮೀರಲಾಗದೆ ನಿರ್ಮಲೆ ಒಪ್ಪಿಕೊಂಡಳು. ವರದಕ್ಷಿಣೆ ಎಂದು ಮೊದಲೇ ರೂ. ೧೫,೦೦೦/- ಕೊಟ್ಟಿದ್ದರು, "ಸ್ಕೂಟರ್, ಸೂಟ್, ವಾಚ್" ಎಂದು ಮತ್ತೊಮ್ಮೆ ರೂ. ೧೫,೦೦೦/- ಕೊಡ ಬೇಕಾಯಿತು. ವರುಷ ಒಂದು ಕಳೆಯುತ್ತಲೇ ಹೊಸ ಮನೆ ಕಟ್ಟಲು ಇನ್ನಷ್ಟು ಹಣಬೇಕೆಂದು ಕಿರುಕುಳ! "ಕೊಡದಿದ್ದರೆ ತವರಿಗೆ ಹೋಗಿ ಬಿಡು ಎಂದು" ಸೊಸೆಗೆ ಅತ್ತೆಯ ಕಟ್ಟಪ್ಪಣೆ! ಬಾಯಿಂದಲ್ಲದೆ ಕೈಯ ಪ್ರಹಾರಗಳಿಗೇನು ಕಡಿಮೆ ಇರಲಿಲ್ಲ. ಪಾಪದ ಹುಡುಗಿ! ತಂದೆ ತಾಯಿಗಳಿಗೆ ಕಷ್ಟ ಕೊಡುವುದು ಆಕೆಗೆ ಮನವಾಗಲಿಲ್ಲ. ಅವರು ಸಿರಿವಂತರಾಗಿರಲಿಲ್ಲ. ಅತ್ತೆಯ ಬಿರುನುಡಿಗಳನ್ನೂ, ಹೊಡೆತವನ್ನೂ, ಎಷ್ಟೆಂದು ಸಹಿಸಬಲ್ಲಳು?

ಒಪ್ಪಿದ್ದಕ್ಕಿಂತ ಹೆಚ್ಚು ವರದಕ್ಷಿಣೆ ಕೊಟ್ಟಿದ್ದರು. ಇನ್ನೂ ಕೊಡಬೇಕೆಂದರೆ ಅಸಾಧ್ಯವೆಂದು ನಿರ್ಮಲೆ ತಿಳಿದಿದ್ದಳು. ಹೆತ್ತವರನ್ನು ಹೆಚ್ಚಾಗಿ ಪೀಡಿಸಲು ಆಕೆಗೆ ಮನವಾಗಲಿಲ್ಲ. ಕಾಂತಿ ಅಂದಂತೆ ತಾನು "ಇಷ್ಟು ಬೇಗ ಮದುವೆಗೆ ಒಪ್ಪಿಕೊಳ್ಳಬಾರದಿತ್ತು" ಎಂದು ಈಗ ದುಃಖಿಸ ತೊಡಗಿದಳು. ಅತ್ತೆಯ ಅಪ್ಪಣೆಯಂತೆ ತವರಿಗೆ ಹೋಗಲಿಲ್ಲ.

ಗೌರಮ್ಮ ನೋಡಿದಳು. ಪಿತ್ತನೆತ್ತಿಗೇರಿತು ! ಮೊದಲೇ ಕಾಳಿ ! ಈಗಂತು ಭದ್ರಕಾಳಿಯೇ ಆಗಿಬಿಟ್ಟಳು.

-ಹೇಳಿದ್ದು ಕಿವಿಗೆ ಕೇಳಿಸಲಿಲ್ಲವೇ? ಈಗ ಹೊರಡು. ಅಪ್ಪ ! ನಿನ್ನ ಅಹಂಕಾರವೇ! ಏನನ್ನಲಿ? ಶೀಘ್ರದಲ್ಲಿ ಕೊಂಡು ಬಾ. ಬರಿಗೈಯಲ್ಲಿ ಬಂದರೆ ಮತ್ತೆ.....!

ಮಾತು ಪೂರೈಸಲಿಲ್ಲ. ಅತ್ತೆಯ ಬಿಂಕದ ನುಡಿಕೇಳಿ ನಿರ್ಮಲೆಗೆ ತಲೆ ತಿರುಗಿದಂತಾಯಿತು. ಶೂಲದಂತೆ ಆಕೆಯ ಕಿವಿಗಳನ್ನು ಇರಿದವು ತವರಿಗೆ ಹೋಗಿ ಫಲಿವಿಲ್ಲ! ಹಣಗಳಿಸಲು ಅಪ್ಪನನ್ನು ಕನ್ನ ಹೊಡೆಯ ಬೇಕಷ್ಟೆ ! ಅಲ್ಲಿ ಹೋದರೆ ತಂದೆ ತಾಯಿಗಳಿಬ್ಬರೂ ಸಮಾಧಾನ ಪಡಿಸಿ ಈ ನರಕಕ್ಕೇ ಮರಳಿ ಕಳುಹುವರು ಎಂದು ನತದೃಷ್ಟೆಗೆ ಗೊತ್ತು. ಒಂದು ವೇಳೆ ಹೋಗದೆ ಇಲ್ಲೇ ಉಳಿದೆನಾದರೆ, ಚಿತ್ರ ಹಿಂಸೆಯನ್ನೆಂತು ಸಹಿಸಲಿ? ಅಯ್ಯೋ, ನಾನೇಕೆ ಕಾಂತಿಯ ಮಾತು ಕೇಳಲಿಲ್ಲ? ನನಗೆ ಬುದ್ಧಿ ಸಾಲದೆ ಹೋಯಿತು. ಹೇ ದೇವಾ ! ದಯೆ ತೋರು ಎಂದು ಮರುಗಿದಳು.

- ಯೋಚಿಸಿ, ಯೋಚಿಸಿ ನಿರ್ಮಲೆಗೆ ಬುದ್ಧಿ ಶೂನ್ಯವಾಯಿತು. ಕಂಗೆಟ್ಟಳು. ಎರಡು ದಿನ ಕಳೆಯಿತು. ಮೂರನೆ ದಿನ ಗೌರಮ್ಮ ನೋಡಿದಳು - ಕಣ್ಣುಗಳು ಕೆಂಡದಂತಾದವು.

ಬೆಳಗಿನ ಫಲಾಹಾರ ಮುಗಿದಿರಲಿಲ್ಲ. ಸೊಸೆಯನ್ನು ಹುಡುಕಿದಳು. ಅಡುಗೆ ಮನೆಯಲ್ಲಿದ್ದ ಆ ಬಡಪಾಯಿಯನ್ನು ಎಳೆದುಕೊಂಡು ಬಂದು, ಹೊರಕ್ಕೆ ತಳ್ಳಿದಳು. ತಳ್ಳಿದ ರಭಸಕ್ಕೆ ನಿರ್ಮಲೆ ಕೆಳಗೆ ಬಿದ್ದಳು. ಪಕ್ಕದಲ್ಲೊಂದು ಕಲ್ಲಿತ್ತು. ಪುಣ್ಯವಶಾತ್ ತಲೆಗೆ ತಾಗಲಿಲ್ಲ, ಬಹಳ ಹೊತ್ತಿನ ಮೇಲೆ ಚೇತರಿಸಿಕೊಂಡು ಎದ್ದಳು.

ತಾಯಿಗೆ ಹೆದರಿ ನಿರಂಜನ್ ಪತ್ನಿಯ ಸಹಾಯಕ್ಕೆ ಬರಲಿಲ್ಲ. ಜಗತ್ತಿನಲ್ಲಿ ನನಗಾಗಿ ಮರುಗುವವರಿಲ್ಲವೇ? ಎಂದು ತನ್ನ ಹಣೆಯ ಬರಹವನ್ನು ಬೈದುಕೊಂಡಳು. ಈಗ ಮಾಡುವುದಾದರು ಏನು?

ಒಳಗೆ ಹೋಗಲು ಧೈರ್ಯ ಬರಲಿಲ್ಲ. ಅದು ಹುಲಿಯ ಗುಹೆಯಂತೆ ತೋರಿತ್ತು ಆಕೆಗೆ ಉಟ್ಟ ಸೀರೆಯಲ್ಲೇ ತವರು ಮನೆಗೆ ಹೊರಟಳು. ಸೂರ್ಯ ಮುಳುಗುವ ಮುನ್ನ ಮನೆ ಸೇರಿಬಿಟ್ಟಳು.

ತಾಯಿ ತಂದೆಗಳು ಏನನ್ನುವರೋ ಎಂಬ ಚಿಂತೆ ನಿರ್ಮಲೆಯನ್ನು ಕಾಡಿತು. ದೇವರು ಕಂಡಂತಾಗಲಿ ಎಂದು ನೆನೆದು, ಸುತ್ತಮುತ್ತ ನೋಡಿದಳು. ಯಾರ ಮುಖವೂ ತೋರಲಿಲ್ಲ. ಮುಚ್ಚಿದ್ದ ಮುಂಬಾಗಿಲನ್ನು ತಟ್ಟಿದಳು.

ಬಾಗಿಲು ತಟ್ಟಿದ ಶಬ್ದ ಕೇಳಿ ನರ್ಮದೆ ಬಂದು ಕದ ತೆರೆದಳು, ನಡೆದು ಬಳಲಿ ಬೆಂಡಾಗಿದ್ದ ಸಹೋದರಿಯ ಬಾಡಿದ ಮುಖವನ್ನು ಕಂಡು ನರ್ಮದೆಗೆ ದುಃಖ ತಡೆಯಲಾಗಲಿಲ್ಲ, ಹೋಗಿ ಆಕೆಯನ್ನು ತಬ್ಬಿಕೊಂಡು ಅತಳು. ನಿರ್ಮಲೆಯ ಕಂಗಳಿಂದ ಅವಿರತವಾಗಿ ಕಣ್ಣೀರ ಕಾಲುವೆ ಸುರಿಯಲಾರಂಭಿಸಿತು. ಬಹಳ ಹೊತ್ತು ಅಕ್ಕನನ್ನು ಸಂತವಿಸಿ, ಒಳಕ್ಕೆ ಕರೆದೊಯ್ದು, ತನ್ನ ಕೋಣೆಯಲ್ಲಿ ಕುಳ್ಳಿಸಿರಿದಳು.

ಆಯಾಸಗೊಂಡಿದ್ದ ನಿರ್ಮಲೆ ಅಮ್ಮ ನೀರು ಕೊಡೆ, ಕುಡಿಯಲು ಎಂದಳು. ನರ್ಮದೆ ನೀರು ತಂದು ಅಕ್ಕನಿಗೆ ಕುಡಿಯಲು ಕೊಟ್ಟಳು. ಇಡೀ ದಿನ ಏನನ್ನೂ ತಿಂದಿರಲಿಲ್ಲ. ಎರಡು ಲೋಟ ನೀರು ಕುಡಿದಳು. ನಿರ್ಮಲ ಮನದ ನೋವಿನಿಂದಲೂ ಶರೀರದ ನೋವಿನಿಂದಲೂ ಉರಿದಿದ್ದ ಹೊಟ್ಟೆ ತಣ್ಣಗಾಯಿತು.

-ತಂಗಿಯನ್ನು ಅಪ್ಪಿಕೊಂಡು ಮನ ತಣಿವವರೆಗೆ ಅತ್ತಳು. ತನ್ನ ದುಃಖವನ್ನೆಲ್ಲಾ ತೋಡಿಕೊಂಡಳು ನಿರ್ಮಲೆ. ಶಾಂತ ಚಿತ್ತದಿಂದ ಅಕ್ಕನ ಕಷ್ಟವನ್ನು ತಂಗಿ ಕೇಳಿದಳು.

ಪಾಪ ! ಆಕೆ ಏನು ತಾನೇ ಮಾಡಬಲ್ಲಳು. ಮಾತನಾಡುತ್ತಿದ್ದ ಸದ್ದು ಕೇಳಿ ಒಳಗಿದ್ದ ಮಾಧವಿ ಅಲ್ಲಿಗೆ ಬಂದಳು. ಅಕ್ಕನಿಗೊದಗಿದ ದುರ್ದೆಶೆಯನ್ನು ನರ್ಮದೆ ಕೂಲಂಕಷವಾಗಿ ತಾಯಿಗೆ ತಿಳಿಸಿದಳು.

- ಏನು ಮಾಡುವುದು ಮಕ್ಕಳೇ ! ನನ್ನ ವಿಧಿ. ನಮ್ಮ ಪೂರ್ವ ಕರ್ಮದ ಫಲವೂ, ವಿಧಿ ಲಿಪಿಯನ್ನು ಯಾರಿಂದಲೂ ತಪ್ಪಿಸಲಾಗದು. ಅನುಭವಿಸಿಯೇ ತೀರಬೇಕು. ಅವರು ಕೇಳಿದಂತೆ ಕೊಟ್ಟುಕೊಂಡಿರಲು

ಸಾಧ್ಯವೇನಮ್ಮಾ? ಇಲ್ಲಿ ಹಣದ ಮರ ಇದೆಯೇ ದೇವಾ ! ಕೇಳಿದ್ದಕ್ಕಿಂತ ಹೆಚ್ಚು ಕೊಟ್ಟಿರುವೆವು ! ಹೀಗಾಗುವುದೆಂದು ಅರಿತಿದ್ದಿದ್ದರೆ ಆ ಸಂಸಾರಕ್ಕೆ ನಿನ್ನ ಕೊಡುತ್ತಿರಲಿಲ್ಲ. ನಮ್ಮ ಗ್ರಹಚಾರ ! ಯಾರನ್ನು ದೂರುವುದು ?

- ಮದುವೆ ಬೇಡವೆಂದು ನಾನು ಹಠ ಹಿಡಿದೆನಲ್ಲವಾ? ನೀವು ಕೇಳಲಿಲ್ಲ. ಈಗ ನಾನೇನು ಮಾಡಲಿ? ಆ ಧನ ಪಿಶಾಚಿಗಳಿಗೆ ತೃಪ್ತಿಯೇ ಇಲ್ಲ. ಕಡೆಗೆ ನನ್ನನ್ನೇ ಬಲಿ ತೆಗೆದುಕೊಂಡು ಬಿಡುವರೇನೋ !

ತಾಯಿ ಮಕ್ಕಳ ಮಾತು ಕಿವಿಗೆ ಬೀಳಲು ಶ್ರೀನಿವಾಸ ಅತ್ತ ಬಂದ. ನಿಜ ಸಂಗತಿ ತಿಳಿಯಲು ಆತ ಮೂಗಿನ ಮೇಲೆ ಬೆರಳಿಟ್ಟು, ಬೆರಗಾಗಿ ನಿಂತ. ಮಗಳ ಸ್ಥಿತಿ ಕಂಡು ಕೊರಗಿದ, ಮಾಡುವುದೇನು? ಮದುವೆಯಾದ ಮಗಳನ್ನು ಮನೆಯಲ್ಲಿರಿಸಿಕೊಳ್ಳುವುದೆಂತು? ಆಕೆ ಇರಬೇಕಾಗಿದ್ದು ಗಂಡನ ಮನೆಯಲ್ಲಿ ಎಂದು ಚಿಂತಿಸಿ

- ಅವರು ಕೇಳಿದಂತೆ ಕೊಡಲು ಸಾಧ್ಯವಿಲ್ಲಮ್ಮ ಯಾರಾದರ ಮನೆ ಕನ್ನ ಹೊಡೆಯಬೇಕಷ್ಟೆ ! ಬೇರೆ ದಾರಿ ಇಲ್ಲ..

- ಇರಲಿ. ನನ್ನ ಬಳಿ ಇರುವುದನ್ನು ಕೊಡುವೆನು. ನೀನಿರಬೇಕಾಗಿದ್ದು ಗಂಡನ ಬಳಿಯಲ್ಲಿ. ಆತ ಏನನ್ನೂ ನುಡಿಯನೇ.

- ಇಲ್ಲಪ್ಪಾ ! ಹೋಗಲಾರೆ. ಎಂದಿಗೂ ಇನ್ನಲ್ಲಿ ಹೋಗಲಾರೆ ! ನನ್ನ ಜೀವ ಸಹಿತ ಕೊಲ್ಲುವರಪ್ಪಾ ! - ಎಂದು ಬಿಕ್ಕುತ್ತ ಹೇಳಿದಳು.

- ನಿನ್ನ ಗಂಡನಿಲ್ಲವೇನೇ? ತಂದೆ ತಾಯಿಗಳಿಗೆ ಕೊಂಚವಾದರೂ ಹೇಳಬಹುದಲ್ಲಾ?

- ಅಯ್ಯೋ ! ಹಾಗಿದ್ದಿದ್ದರೆ ನನಗೆ ಈಗತಿ ಬರುತ್ತಿರಲಿಲ್ಲಮ್ಮಾ ! ನನ್ನ ಪಾಲಿಗೆ ಅವರು ಇದ್ದರೂ ಇಲ್ಲದಂತೆ ! ಕರಿಗಲ್ಲಿಗಿಂತ ಕಡೆ ! ಅತ್ತೆಯವರದೇ ವೇದವಾಕ್ಯ. ಅವರನ್ನು ಬಾಯೆತ್ತ ಬಿಡರು ದಮ್ಮಯ್ಯ, ನನ್ನ ಕಳುಹಬೇಡಿ. ಬೇಡಿಕೊಳ್ಳುವೆನು. ನೀವು ನನ್ನನ್ನು ಬಲತ್ಕರಿಸಿದರೂ ನಾನು ಆಜನ್ಮ ಅವಿವಾಹಿತಳಾಗಿಯೇ ಇರುವೆನು. ಇಂತಹ ನಿರ್ಭಾಗ್ಯಶಾಲಿಗಳ ಪರವಾಗಿ ಶ್ರಮಿಸುವೆನು. ಒಂದು ಸಂಘವನ್ನು ರಚಿಸಿ, ಹೆಮ್ಮಕ್ಕಳ ದುಸ್ಥಿತಿಯನ್ನು ಹೋಗಲಾಡಿಸುವಂತೆ ಮಾಡುವೆ. ಸರಕಾರದವರ ಮೊರೆ ಹೋಗುವೆನು. ಯಾರಾದರೊಬ್ಬರಿಗೆ ಕರುಣೆ ಬರದಿರದು. ಸತಿ ಸಹಗಮನವಲ್ಲ. ಇದು ಸತಿ ದಹನ ! ಅತ್ತೆ ಮಾವ, ಗಂಡ, ನಾದಿನಿಯರೇ ಅದಕ್ಕೆ ಕಾರಣರಲ್ಲ. ತಿಳಿದೂ ತಿಳಿದೂ ತಮ್ಮ ಮಕ್ಕಳ ಬಾಳನ್ನು ಕೆಡಿಸಿಕೊಳ್ಳುವ ತಂದೆ ತಾಯಿಗಳೂ ಅರ್ಧಕರ್ಧ ಹೊಣೆಗಾರರೆ ! ಹೆತ್ತು, ಸಾಕಿ, ಸಲಹಿ, ಮದುವೆ ಮಾಡಿ ಕೊಟ್ಟುಬಿಟ್ಟರೆ ಅವರ ಜವಾಬ್ದಾರಿ ಮುಗಿದು ಹೋಯಿತು.

ಹಿಂಸೆ ತಾಳಲಾರದೆ ಬಂದು ಅತ್ತು, ಗೋಳಿಟ್ಟು ಬೇಡಿಕೊಂಡರೂ ಮಕ್ಕಳನ್ನು ಆ ನರರಾಕ್ಷಸರಲ್ಲಿಗೆ ತಂದೆ ತಾಯಿಗಳು ಖಂಡಿತ ಕಳುಹಿಸಬಾರದು. ಏನಾದರೂ ಮಾಡಿ, ಹೇಗಾದರೂ ಪಾಪದ ಮಕ್ಕಳನ್ನು ಕೊಲ್ಲದೇ ಬಿಡರೆಂದು ತಿಳಿದಿದ್ದೂ ಲೋಕಾಪವಾದದ ಭಯದಿಂದ ಏತಕ್ಕೆ ಕಳುಹಿಸಬೇಕು? ತಮ್ಮ ಮನೆಯಲ್ಲೇ

ಇಟ್ಟುಕೊಂಡರೆ ಆಗದೇ? ಒಂದು ತುತ್ತು ಅನ್ನ ಕೊಡಲು ಹೆತ್ತವರಿಗೆ ಸಾಧ್ಯವಿಲ್ಲವೇ? ವಿಪರೀತ ನಡೆದ ಮೇಲೆ ತಲೆ ಚಚ್ಚಿಕೊಂಡು ಅತ್ತರೆ ಸತ್ತವಳು ಎದ್ದು ಬರುವಳೇ?

ತಂದೆ ತಾಯಿಗಳಿಗೂ ಬುದ್ಧಿ ಕಡಿಮೆ ! ಮುಂದಾಲೋಚನೆ ಮಾಡಬೇಕು ತಿಳಿದೂ ಮಕ್ಕಳನ್ನು ಬಲಿ ಕೊಡುವುದು, ವರದಕ್ಷಿಣೆ ಎಂಬ ಕ್ರೂರ ಬಾಣದಿಂದ, ಜೀವ ಸಹಿತ ತಮ್ಮ ಮಕ್ಕಳನ್ನು ಖಂಡಿತ ಕೊಡಕೂಡದೆಂಬ ಕಾನೂನನ್ನು ಖಂಡಿತ ಜಾರಿಗೆ ತರುವುದು. ಹೆತ್ತವರು ಆ ಕಾನೂನನ್ನು ಪಾಲಿಸುವಂತೆ ಮಾಡುವೆವು.

ನಾನಿಲ್ಲೇ ಸಂತೋಷದಿಂದ ಸಾಯುವೆನು. ಅವರ ಚಿತ್ರಹಿಂಸೆಯಿಂದ ಸಾಯಲು ಬಿಡಬೇಡಿ-ನಿಮಗೆ ಕರುಣೆ ಬರಲಿ. ನಿರ್ಮಲೆಗೆ ಮತ್ತೆ ಉಸಿರೆತ್ತಲು ಶಕ್ತಿ ಇರಲಿಲ್ಲ. ಅಳಲಾರಂಭಿಸಿದಳು. ಪಕ್ಕದಲ್ಲಿ ನಿಂತಿದ್ದ ನರ್ಮದೆಯನ್ನಪ್ಪಿಕೊಂಡಳು.

- ನರ್ಮದೆಗೆ ತಾಳಲಾರದಾಯಿತು.

- ಇರಲಮ್ಮಾ, ಅಕ್ಕ ನಮ್ಮಲ್ಲೇ ! ಆ ರಕ್ಕಸರ ಸೆರೆಗೆ ಕಳುಹಿಸಬೇಡಿ. ನೋಡಿರುವಿರಾ ಆಕೆಯ ದೇಹವನ್ನು? ಮುಟ್ಟಿದೆಡೆ ಎಲ್ಲಾ ಬಾಸುಂಡೆಗಳೇ ! ಅವಳಾಗಿ ಸಹಿಸಿಕೊಂಡಿರುವಳು, ನಾನಾಗಿದ್ದಿದ್ದರೆ ! ಹೀಗೆ ಏನಾದರೊಂದು ಕಾಯ್ದೆ ಜಾರಿಗೆ ತರಲು ಸಾಧ್ಯವಿಲ್ಲದ ತಾಯಿ ತಂದೆಗಳು, ಹಾಗಾದರೆ ಹೆಮ್ಮಕ್ಕಳನ್ನು ದಯವಿಟ್ಟು ಹೆರಬೇಡಿ, -----

- ನೀನೆನ್ನುವುದು ನಿಜ, ಕಣೆ. ನಿರ್ಮಲಳನ್ನು ಅರ್ಧ ಜೀವ ಮಾಡಿರುವರು. ಹೆತ್ತವರು ಅದನ್ನು ನೋಡುವಂತಾಗಿದೆ. ಆನರಾಧಮರನ್ನು ಶಿಕ್ಷಿಸುವವರಿಲ್ಲ. ನನ್ನ ಹೊಟ್ಟೆಯುರಿಯನ್ನು ಯಾರಲ್ಲಿ ಹೇಳಿಕೊಳ್ಳಲಿ? ಹೀಯಾಳಿಸುವವರಲ್ಲದೆ ಸವಿಮಾತು ಹೇಳುವವರಿಲ್ಲ, ಸಹಾಯಕ್ಕೆ ಬರುವವರಿಲ್ಲ. ತಪ್ಪನ್ನೇ ಎತ್ತಿ ನುಡಿವರು.

ಅಕ್ಕ ಇಲ್ಲಿದ್ದರೆ ನಿನಗೂ ಹೆಸರು ತಪ್ಪದು. ನಿನ್ನ ಭವಿಷ್ಯವನ್ನೂ ಯೋಚಿಸಬೇಕು ನಾವು.

- ಅಕ್ಕ ಇಲ್ಲಿದ್ದರೆ ನನಗೇತರ ಮಾತು? ಆಕೆ ಈ ಮನೆಯಲ್ಲಿ ಹುಟ್ಟಿ ಬೆಳದವಳು ತಾನೇ? ಪರಕೀಯಳೇನು?

- ಹಾಗಲ್ಲಮ್ಮಾ, ಸತ್ಯ ಸಂಗತಿ ಹೇಳರು ! ಇಲ್ಲದ ಅಪರಾಧವನ್ನು ಪಾಪದ ಹುಡುಗಿಯ ಮೇಲೆ ಹೊರಿಸಿ ಬಿಡುವರು. ಒಳ್ಳೆಯ ಸುದ್ದಿ ಏನಾದರೂ ಹೊರಗೆ ಬರುವುದೇ? ಇಲ್ಲದ ಅಪವಾದಗಳನ್ನು ಹೊರಿಸಿ ಹೀಯಾಳಿಸುವರು. ಒಳ್ಳೆಯ ಸಂಗತಿ ಗೊತ್ತಿದ್ದರೂ ಹೇಳರು, ಮರ್ಯಾದೆ ಇರುವವರಿಗೆ ಅಷ್ಟೇ ಸಾಕು. ಮುಖ ತೋರಿಸರು? ಗಂಡನ ಮನೆಯಲ್ಲಿ ಸರಿ ನಡೆದಿಲ್ಲವೇನೋ! ತವರುಮನೆಯಲ್ಲಿ ಇರುವಳು. ಏನು ನಾಚಿಕೆಗೇಡು ! ತಂಗಿಯು ಮತ್ತೆ ಹೇಗಿದ್ದಾಳು?

- ಎಂದಾಡುವವರೇ ಹೆಚ್ಚು.

- ಸುಮ್ಮನಿರಮ್ಮ ನೀನು ! ಜನರ ಮಾತಿಗೆ ಕಿವಿಗೊಡಬೇಕೇ? ದೇವರನ್ನು ಒಲಿಸಬಹುದು. ನರರಕ್ಕಸರನ್ನು ಮೆಚ್ಚಿಸಲು ಅಸಾಧ್ಯ. ಇರಲಿ, ನನ್ನ ವಿಷಯ ನೀವು ಚಿಂತಿಸಬೇಕಾದುದಿಲ್ಲ. ವರದಕ್ಷಿಣೆಗಾಗಿ ಬರುವ ವಧುಭಕ್ಷಕರನ್ನು ಕಣ್ಣೆತ್ತಿಯೂ ನೋಡಲಾರೆ ಖಂಡಿತ! ನನ್ನನ್ನು ವರಿಸುವುದೇ? ಅಲ್ಲ ಹಣವನ್ನೇ? ಹಣಕ್ಕಾಗಿ ವರಿಸುವವನಿಗೆ ಎನ್ನಲ್ಲಿ ನೈಜವಾದ ಪ್ರೇಮ, ಪ್ರೀತಿ, ದಯೆ ಒಂದೂ ಇರಲಾರದು. ನಾನು ಅವಿವಾಹಿತೆಯಾಗಿಯೇ ಇರುವೆ. ಕಾಣುವುದಿಲ್ಲವೇ ಪ್ರತ್ಯಕ್ಷ ಅಕ್ಕನ ದುರ್ಗತಿ! ಬೇರೆ ನಿದರ್ಶನ ಬೇಕೇ! ಅಕ್ಕನ ಬಾಳು ಹಾಳು ಮಾಡದಿರಿ !

- ನೋಡು ನರ್ಮದೆ. ನಿನ್ನವಾಗ್ವಾದವನ್ನು ಯಾರೂ ಆಲಿಸರು. ನಿನ್ನ ಬಡಾಯಿ, ಧೈರ್ಯವೆಲ್ಲಾ ನಾವಿರುವ ತನಕ. ತಕ್ಕ ಸಮಯದಲ್ಲಿ ನಿನ್ನ ಕಲ್ಯಾಣ ನಡೆಯದಿದ್ದರೆ ನಮ್ಮ ಮರ್ಯಾದೆಗೆ ಕೇಡು. ಅದಕ್ಕೂ ಜನರಾಡಿಕೊಳ್ಳುವರು. ವೃದ್ಧಾಪ್ಯದಲ್ಲಿ ಅವರ ಕರ್ಕಶ ನುಡಿಗಳನ್ನು ಸಹಿಸಲಾರೆವು. ತಿಳಿಯಿತೇ !

- ಅಪ್ಪ ಹೇಳಿದಂತೆ, ಅಕ್ಕನನ್ನು ಸಂತೈಸಿ ಇದ್ದದ್ದನ್ನು ಕೈಗಿತ್ತು ಗಂಡನ ಮನೆಗೆ ಕಳುಹಿಸುವ, ಆ ನರಪ್ರೇತರಿಗೆ ತೃಪ್ತಿಯಾದೀತೇ ಎಂದು ನೋಡುವ.

- ಅವರು ಕೇಳಿದಂತೆ ಕೊಟ್ಟು ಕಳುಹಲು ಇಲ್ಲಿ ನಾವೇನು ಹಣದ ಮರಗಳನ್ನು ನೆಟ್ಟು ಬೆಳೆಸಿರುವೆವೇ? - ಎಂದು ಮಾಧವಿ ಕಷ್ಟದಿಂದ ನುಡಿದಳು.

- ನಿರ್ಮಲೆ ತಾಯಿಯ ಮಾತನ್ನು ಕೇಳಿದಳು. ಮುಖ ಕಪ್ಪಿಟ್ಟಿತು. ನರ್ಮದೆಯ ಮುಖವೂ ವಿವರ್ಣಗೊಂಡಿತು. ಕಣ್ಣುಗಳಲ್ಲಿ ನೀರು ತುಂಬಿತು.

- ಇಲ್ಲಮ್ಮಾ, ಖಂಡಿತ ನಾನಾಮನೆಗೆ ಹೋಗಲಾರೆ. ದಮ್ಮಯ್ಯ, ನೀವು ನನ್ನ ಕಳುಹಬೇಡಿ. ಅದಕ್ಕಿಂತ ನೀವು ನನ್ನನ್ನು ಬಾವಿಗೆ ದೂಡಿ ಬಿಡಿ. ನಿಶ್ಚಿಂತಳಾಗಿ ಪರಲೋಕ ಸೇರುವೆನು. ಯಾರಿಗೂ ನನ್ನಿಂದ ಕಷ್ಟಬೇಡ. ಒಮ್ಮೆ ಅಪ್ಪನಿಗೆ ಹೇಳಮ್ಮಾ ! ಎಂದು ಅಳುತ್ತಾ ನಿರ್ಮಲೆ ತಾಯಿಯ ಕಾಲಿಗೆ ಬಿದ್ದಳು.

ಕೋಣೆಯೊಳಗಿದ್ದ ಶ್ರೀನಿವಾಸ ತಾಯಿ ಮಕ್ಕಳ ಮಾತನ್ನು ಕೇಳಿದ. ತಲೆ ತಿರುಗಿತು. ದುಃಖ ತಡೆಯಲಾಗಲಿಲ್ಲ. ಅಕ್ಕನಿಗಾಗಿ ತಮ್ಮಂದಿರೂ ವಾದಿಸಿದರು. ಅವರಿನ್ನೂ ಚಿಕ್ಕವರು. ಹೆಚ್ಚಿಗೆ ಹೇಳಲು ತಿಳಿಯದೆ ಸುಮ್ಮನಾದರು.

- ಕಡೆಯ ಪ್ರಯತ್ನ ಪಿಶಾಚಿಗಳಿಗೆ ಕರುಣೆ ಬಂದೀತೇ ಎಂದು ನೋಡುವೆ ಎಂದು ನೆನೆದು ಮರುದಿನ ಶ್ರೀನಿವಾಸ ನಾಚಿಕೆಗೆ ಬೆನ್ನಿಟ್ಟ, ಸ್ನೇಹಿತನಿಂದ ಕೊಂಚ ಹಣವನ್ನು ಎರವು ತಂದ, ಮಗಳನ್ನು ಪ್ರಯಾಸದಿಂದ ಸಂತವಿಸಲೆತ್ನಿಸಿದ. ನಿರ್ಮಲೆ ಬಾಯಿ ಬಿಡಲಿಲ್ಲ. ಹಣದ ಚೀಲವನ್ನು ಆಕೆಯ ಕೈಗಿತ್ತು - ನಿರ್ಮಲಾ, ಇದೋ.. ತೆಗೆದುಕೊಂಡು ಹೋಗಿ, ಅತ್ತೆಗೆ ಕೊಡು. ಏನೂ ಹೇಳಬೇಡ. ಆಕೆ ಏನೆಂದರೂ ನೀನು ಸುಮ್ಮನಿದ್ದು ಬಿಡು.

ದೇವರು ನಿನಗೆ ಧೈರ್ಯವನ್ನೂ, ತಾಳ್ಮೆಯನ್ನೂ ಕೊಡಲಿ, ಮತ್ತೇನು ಹೇಳಲಿ? ಕೆಲವು ದಿನಗಳಲ್ಲಿ ನಾನು ಬರುವೆ - ಆತನ ಕಣ್ಣುಗಳಿಂದ ನೀರು ಸುರಿಯಿತು.

ನಿರ್ಮಲಳಿಗೆ ಮಾತನಾಡಲು ಬಾಯಿ ಬರಲಿಲ್ಲ. ಮೂಕಳಂತಾದಳು. ತಂದೆ ತಾಯಿಗಳ ಪರಿಸ್ಥಿತಿಯನ್ನು ಅರಿತುಕೊಂಡಳು - ದುಃಖ ಇಮ್ಮಡಿಸಿತು.

- ಆಗಲಮ್ಮಾ, ಹೋಗಿ ಬಾ, ದೇವರೇ ನಿನ್ನ ಕಾಪಾಡಲಿ. ಧರ್ಮ ಸಂಕಟದಲ್ಲಿ ಸಿಲುಕಿರುವೆವು ನಾವು. ಏನು ಮಾಡಲೂ ಧೈರ್ಯ ಸಾಲದು. ನಿನ್ನ ಭವಿಷ್ಯ ನಿನ್ನ ಕೈಯಲ್ಲಿದೆ - ಎಂದು ದುಃಖ ತುಂಬಿದ ಕಂಠದಿಂದ ಹೇಳಿದಳು ಮಾಧವಿ.

ಕೊಂಚ ಹೊತ್ತು ಚಿಂತಿಸುತ್ತಾ ನಿಂತಿದ್ದ ನಿರ್ಮಲೆ, ಒಮ್ಮೆಗೇ ಧೈರ್ಯ ತಂದುಕೊಂಡಳು. - ಆಗಲಮ್ಮ, ಧೈರ್ಯದಿಂದ ಹೋಗಿ ಆ ಯಮದೂತರ ಬಾಯಿಗೆ ಬಲಿಯಾಗುವೆ. ನಿಮ್ಮ ಆಶೀರ್ವಾದ ಕೊಡಿ - ಎಂದಂದು ತಾಯಿ ಕಾಲಿಗೆರಗಿದಳು. ತಂದೆಯ ಕಾಲಿಗೆ ಎರಗಿ ಆತನ ಆಶೀರ್ವಾದವನ್ನು ಪಡೆದಳು. ಇಬ್ಬರೂ ನೊಂದ ಮನದಿಂದ ಮಗಳನ್ನು ಆಶೀರ್ವದಿಸಿದರು.

ಪಕ್ಕದಲ್ಲಿ ನಿಂತಿದ್ದ, ತಂಗಿ, ತಮ್ಮಂದಿಯರನ್ನು ತಬ್ಬಿ, ಅವರಿಂದ ಬೀಳ್ಕೊಂಡು ನಿರ್ಮಲೆ ಏಕಾಂಗಿಯಾಗಿ ಹೊರಟಳು.

ಆಕೆಯನ್ನು ಅನುಸರಿಸಿ ಹೋಗಲು ತಮ್ಮಂದಿಯರ ಆಶೆ. ನಿರ್ಮಲೆ ಒಪ್ಪಲಿಲ್ಲ. ಅಕ್ಕ ಮರೆಯಾಗುವ ತನಕ ಕಣ್ಣೀರು ಸುರಿಸುತ್ತಾ ನಿಂತಿದ್ದರು ನರ್ಮದೆ, ನೀರಜ್ ಮತ್ತು ನಿಷದ್, ದುಃಖ ಇಮ್ಮಡಿಸಿತೆಂದು ನಿರ್ಮಲೆ ಒಮ್ಮೆಯಾದರೂ ಹಿಂತಿರುಗಿ ನೋಡಲಿಲ್ಲ! - ಸೊಸೆ ದೊಡ್ಡ ಗಂಟು ತರುವಳೆಂದು ಕಾದಿದ್ದಳು ಅತ್ತೆ. ನಿರ್ಮಲೆ ಮನೆ ಮೆಟ್ಟಲು ಹತ್ತಿ ಬರುವುದನ್ನು ಕಾಣುತ್ತಲೇ ಆಕೆಯನ್ನು ಹಸನ್ಮುಖಳಾಗಿ ಸ್ವಾಗತಿಸಿದಳು. ನಿರ್ಮಲೆ ತನ್ನ ಕೈಯಲ್ಲಿದ್ದ ಹಣದ ಚೀಲವನ್ನು ಅತ್ತೆಯ ಕೈಗಿತ್ತು, ವಂದಿಸಿದಳು. ಗೌರಮ್ಮನು ಚೀಲವನ್ನು ತೆರೆದು ನೋಡಿದಳು.

ಅದರೊಳಗಿದ್ದದ್ದನ್ನು ನೋಡಿ ಗೌರಮ್ಮನಿಗೆ ಚೇಳು ಕಚ್ಚಿದಂತಾಯಿತು! - ಇದೇನು ಹರಕೆ ಹಣವೋ? ಒಂದು ಕೋಣೆಗೂ ಸಾಲದು ಎಂದು ಗುಡುಗುಡಿಸಿದಳು. ನಿರ್ಮಲೆ ಧೈರ್ಯತಂದು ಅತ್ತೇ, ಅಪ್ಪನ ಕೈಯಲ್ಲಿದ್ದುದು ಕೊಟ್ಟಿರುವನು. ಬರುವ ತಿಂಗಳು ಕಳುಹಿಸುವರಂತೆ.

- ಏನು? ಬರುವ ತಿಂಗಳು? ಅಲ್ಲಿ ಬರುವ ವರುಷವೋ? ಇದೇಕೆ? - ಎಂದಂದು ಆ ಚೀಲವನ್ನೆತ್ತಿ ಬಿಸಾಡಿ ಬಿಟ್ಟಳು. ಗೌರಮ್ಮನ ಆರ್ಭಟದಿಂದ ಭೂಕಂಪವಾದಂತಾಯಿತು.

ಭದ್ರಕಾಳಿ ಶಾಂತಳಾಗಲಿಲ್ಲ. ಮೂಲೆ, ಮೂಲೆ ಹುಡುಕಿದಳು, ಹೊಡೆದು ಮುರಿದಿದ್ದ ಕೋಲಿನ ತುಂಡೊಂದು ಆಕೆಯ ಕಣ್ಣಿಗೆ ಬಿತ್ತು. ಅದನ್ನೆತ್ತಿಕೊಂಡು, ಪಾಪದ ನಿರ್ದೋಷಿಯನ್ನು ಬಡಿಯ ತೊಡಗಿದಳು.

ಹೊಡೆತದ ರಭಸಕ್ಕೆ ಮೈಮೇಲಿದ್ದ ಬಾಸುಂಡೆಗಳಿಂದ ರಕ್ತ ಸೋರಲಾರಂಭಿಸಿತು. ನೋವು, ಉರಿ, ತಾಳಲಾರದೆ ನಿರ್ಮಲೆ - ಅಯ್ಯೋ, ಅಪ್ಪಾ, ನನ್ನಮ್ಮಾ, ದಮ್ಮಯ್ಯ ! ತಾಳಲಾರೆ - ಉರಿ - ಬೇಡ, ಬಾಮ್ಮಾ ! ಎಂದು ಕಿರುಚಿ ಬಿಟ್ಟಳು. ಆಕೆಯ ಆರ್ತನಾದ ಯಾರ ಹೃದಯವನ್ನೂ ಕರಗಿಸಲಿಲ್ಲ. ಆಕೆಯ ಸಹಾಯಕ್ಕೆ ಒಬ್ಬರೂ ಬರಲಿಲ್ಲ. "ಕಲ್ಲುಗುಂಡು" ನಿರಂಜನ್ ಮಾಯವಾಗಿದ್ದ. ತನ್ನದೆರಡು ಕಣ್ಣುಗಳನ್ನು ತೆರೆದುಕೊಂಡು, ಭದ್ರಕಾಳಿ ಮಾತ್ರ ತತ್ತರಿಸುತ್ತಿದ್ದ ಆ ನಿರಪರಾಧಿಯನ್ನು ನೋಡುತ್ತಿದ್ದಳು.

ಮೈಯ್ಯ ಉರಿ, ನೋವು ತಾಳಲಾರದೆ ನಿರ್ಮಲೆ ಮತ್ತೊಮ್ಮೆ ಗಟ್ಟಿಯಾಗಿ ಅರಚಿಕೊಂಡಳು ! ಅಂದು ರಾತ್ರಿ ಕುಮುದೆಯನ್ನು ನಿದ್ರೆಯಿಂದ ಎಚ್ಚರಿಸಿದ್ದು ಆ ಧ್ವನಿಯೇ !

ವಸಂತಕುಮಾರನಿಗೆ ಮನೆಯ ಒಳಕ್ಕೆ ಹೋಗಲಾಗಲಿಲ್ಲ. ಬಾಗಿಲು ಭದ್ರವಾಗಿತ್ತು. ಗಟ್ಟಿಯಾಗಿ ಕೂಗಿದ. ಯಾರೂ ಬಾಗಿಲು ತೆರೆಯಲಿಲ್ಲ. ಒಳಗೆ ನರಳುವ ಶಬ್ದ ಮಾತ್ರ ಅಸ್ಪಷ್ಟವಾಗಿ ಕೇಳಿಸುತ್ತಿತ್ತು. ಗೋಡೆಗೆ ಒರಗಿ, ಕಿವಿಗೊಟ್ಟು ನಿಂತ.

- ಹೇಳಿದ್ದು ಕೇಳಲಿಲ್ಲ. ಅಷ್ಟು ಹಣ ನಿನ್ನ ಹೂಳಲಿಕ್ಕೋ? ನಡಿ ಮನೆಯಿಂದ ಅರಚಿಕೊಂಡರೆ, ನಿನ್ನಪ್ಪ, ಅಮ್ಮ, ಬಂದು ಬಿಡುವರೇ? ನಿನ್ನ ನೋಡುವವರಿಲ್ಲ, ಕೇಳುವವರೂ ಇಲ್ಲ. ಹೋಗು, ಎಲ್ಲಾದರೂ ಬಿದ್ದು ಸಾಯಿ ! - ವಸಂತಕುಮಾರನ ಕಿವಿಗೆ ಆ ಕರ್ಣ ಕಠೋರ ನುಡಿಗಳು ಕೇಳಿಸಿದವು. ಸಹಿಸಲಾಗಲಿಲ್ಲ. ಒಳಕ್ಕೆ ಹೋಗುವಂತಿಲ್ಲ. ಆ ಬಡಪಾಯಿಗೆ ಯಾವ ವಿಧದ ಸಹಾಯವನ್ನೂ ಮಾಡಲಾರದಾದನು. ರೋಷದಿಂದಲೂ, ದುಃಖದಿಂದಲೂ ಕುದಿಯಲಾರಂಭಿಸಿದ.

ತನ್ನ ಕಾಲಿನಿಂದ ಬಲವಾಗಿ ಮೂರು ಸಾರಿ ಮನೆಯ ಮುಂಬಾಗಿಲನ್ನು ಒದ್ದ. ಬಾಗಿಲು ಮುರಿದು ಬೀಳಬಹುದೆಂದು ಭಾವಿಸಿದ! ಅಂತಾಗಲಿಲ್ಲ. ನಿರಾಶನಾದ. ಅಷ್ಟರಲ್ಲಿ ನರಳುವಿಕೆ ನಿಂತು ಹೋಯಿತು.

ಇನ್ನಲ್ಲಿದ್ದು ಫಲವಿಲ್ಲವೆಂದು ವಸಂತಕುಮಾರ ಹಿಂತಿರುಗಿದ. "ಜಗತ್ತಿನಲ್ಲಿ ಇಂತಹ ನರರಾಕ್ಷಸರೂ ಇರುವರೇ" ಎಂದು ಚಿಂತಿಸುತ್ತಾ ಮನೆ ಸೇರಿದ.

ಕುಮುದೆ ಕಾದಿದ್ದಳು. ತಾನು ಕಿವಿಯಲ್ಲಿ ಕೇಳಿದ ಕರ್ಕಶ ನುಡಿಗಳನ್ನು ಆಕೆಗೆ ತಿಳಿಸಿದ.

ಆ ಕೋಮಲೆಯನ್ನು ನರರಾಕ್ಷಸರ ಬಾಯಿಗೆ ಕೊಟ್ಟದ್ದೇ ಮೋಸ, ಈಗ ಹೇಳಿ ಫಲವಿಲ್ಲ "ಕೆಟ್ಟ ಮೇಲೆ ಬುದ್ಧಿ ಅಟ್ಟ ಮೇಲೆ ಒಲೆ ಉರಿ" ಎಂಬ ನಾಣ್ಣುಡಿ ಮಿಥ್ಯವಾಗದು. ಮದುವೆ ಈಗಲೇ ಬೇಡವೆಂದು ಹಠ ಹಿಡಿದಿದ್ದಳು. ಜನರ ಬಿಂಕದ ನುಡಿಗಳಿಗಾಗಿ ಹೆದರಿ, ತಂದೆ ತಾಯಿಗಳು ಅನ್ಯಾಯವಾಗಿ ಮಗಳನ್ನು ಬಲಿಕೊಟ್ಟರು. ವರನೂ ಆಕೆಗೆ ತಕ್ಕವನಂತಿರಲಿಲ್ಲ.

ಜೊತೆಗೆ ವರದಕ್ಷಿಣೆಯ ಕಾಟ ! ಬಂಧು, ಮಿತ್ರರಿಂದ ಎರವು ತಂದು . ಕೊಟ್ಟಿದ್ದರು. ಪುನಃ ಪುನಃ ಕೊಟ್ಟು ಕೊಂಡಿರಲು ಸಾಧ್ಯವೇ? ಉದಾಸೀನ ಮಾಡಿದಷ್ಟೂ ಮಗಳನ್ನು ಹಿಂಸಿಸುವುದು ಹೆಚ್ಚಾಯಿತು. ಈಗೇನು ಮಾಡಿಬಿಟ್ಟರೋ? ಪಾಪ! ನಮ್ಮಿಂದ ಏನೂ ಸಹಾಯ ಮಾಡಲಾರದಾಯಿತಲ್ಲಾ! - ಎಂದು ಕುಮುದೆ ಮಮ್ಮಲ ಮರುಗಿದಳು.

ಆಕೆಯ ತವರು ಮನೆಯವರ ಪರಿಚಯವಿಲ್ಲ. ಇಲ್ಲವಾದರೆ ಅವರಿಗೆ ತಿಳಿಸಬಹುದಿತ್ತು, ನಾನು ಹೋಗಿ ಪೊಲೀಸಿಗೆ ತಿಳಿಸಿ ಬರುವೆನು-ನೀನು ಮಲಗು - ವಸಂತಕುಮಾರ ಸ್ಟೇಷನ್‌ಗೆ ಧಾವಿಸಿದ ಹಿಂತಿರುಗಿ ಬರುವಲ್ಲಿ ಕೋಳಿ ಕೂಗಿತ್ತು.

ಮರುದಿನ ಬೆಳಿಗ್ಗೆ ೫ ಗಂಟೆಯ ಸಮಯ. ನಿರ್ಮಲೆಯ ಮಾವನಾದ ಮುರಾರಿಗೆ "ನಿರ್ಮಲೆಗೆ ಸೌಖ್ಯವಿಲ್ಲ ಬಸಪ್ಪ ಆಸ್ಪತ್ರೆಯಲ್ಲಿರುವನು ಬೇಗ ಬನ್ನಿ" ಎಂದು ಫೋನ್ ಬಂತು. ಮುರಾರಿ ಇದ್ದುದು ಗೋಕುಲಂನಲ್ಲಿ, ನಿರ್ಮಲೆಯ ಕತೆ ಮುರಾರಿಗೆ ಒಂದೂ ತಿಳಿಯದು. ಮೊದಲೊಮ್ಮೆ ಮಾಧವಿ ತಮ್ಮನಿಗೆ ತಿಳಿಸಿದ್ದಳು. ಫೋನ್ ಬರುತ್ತಲೇ ಮುರಾರಿ, ಸುಮತಿಯನ್ನು ಕರೆದುಕೊಂಡು ಆಸ್ಪತ್ರೆಗೆ ಹೋದ. ವಿಚಾರಿಸುವಲ್ಲಿ, ಅಲ್ಲಿ ಯಾರೂ ಇರಲಿಲ್ಲ. ಮುರಾರಿ ಅತ್ತ ಇತ್ತ ಸುತ್ತಾಡಿದ. ಕಡೆಗೆ ಒಬ್ಬ ನರ್ಸು ಬಂದಳು.

ಮುರಾರಿ ಆಕೆಯನ್ನು ಕುರಿತು - ಎಲ್ಲಿ ನಮ್ಮ ರೋಗಿ? ಯಾವ ಕೋಣೆಯಲ್ಲಿರುವಳು ಎಂದು ಕೇಳಿದ.

- ನಿಮ್ಮ ರೋಗಿ ಆಗಲೇ ತೀರಿಕೊಂಡಳು.

- ಎಲ್ಲಿ? ತೋರಿಸಿ.

- ಪರೀಕ್ಷಿಸಲು ಡಾಕ್ಟರುಗಳು ಶವವನ್ನು ತೆಗೆದುಕೊಂಡು ಹೋಗಿರುವರು.

- ರೋಗಿಯನ್ನು ತಂದವರೆಲ್ಲಿ?

- ಸಂಗಡ ಬಂದವರು ನಮಗೆ ಏನನ್ನೂ ಹೇಳಲಿಲ್ಲ. ಶವವನ್ನು ಇಲ್ಲೇ ಬಿಟ್ಟು ಹೋಗಿಬಿಟ್ಟರು-ಎಂದು ದುಃಖದಿಂದ ಹೇಳಿದಳು ನರ್ಸು.

ಸಂಗತಿ ತಿಳಿದ ಮುರಾರಿಗೆ ಆಶ್ಚರ್ಯವೆನಿಸಿತು. ಡಾಕ್ಟರನ್ನು ಕಾಣಲು ಅತ್ತ ಹೋದ. ಶವದ ಪರೀಕ್ಷೆ ಮುಗಿಸಿ ಡಾಕ್ಟರ್ ಆಗ ತಾನೇ ಹೊರಗೆ ಬಂದಿದ್ದ.

ಆತನ ಮುಖ ಕಾಣುವಾಗಲೇ ಮುರಾರಿಗೆ ಸಂಶಯವಾಯಿತು. ಏನೋ ಅನರ್ಥ ನಡೆದಿದೆ ಎಂದು ಗ್ರಹಿಸಿದ.

- ನೀವು ಆ ನಿರ್ಭಾಗ್ಯೆಯ ತಂದೆಯವರೇನು ?

- ಅಲ್ಲ, ಆಕೆಯ ಸೋದರ ಮಾವ, ನಿಮ್ಮ ಪರೀಕ್ಷೆಯ ಫಲಿತಾಂಶ? ರೋಗವೆಂತದು? ವಿಪರೀತವಾಗಿಬಿಟ್ಟಿತ್ತೆ.

- ಆಕೆಗೆ ತಂದೆ ತಾಯಿಗಳಿಲ್ಲವೇ? ಏನೆನ್ನಲಿ? ನಾ ಬರುವ ಮೊದಲೇ ಆಕೆ ಪರಲೋಕಕ್ಕೆ ಹೋಗಿ ಬಿಟ್ಟಿದ್ದಳು. ರಕ್ಷಿಸಲು ಯತ್ನಿಸಿದೆ, ಕಾಲ ಮಾರಿ ಹೋಗಿತ್ತು. ಪಾಪ!

- ಆಕೆಯ ತಂದೆ ತಾಯಿಗಳಿರುವರು. ಅವರೇನು ಮಾಡಲಾಪರು? ವರದಕ್ಷಿಣೆ ಕೊಟ್ಟು, ಕೊಟ್ಟು ದಣಿದಿರುವರು. ನಿರ್ಭಾಗ್ಯೆ! ಅಲ್ಲಿಗೆ ಹೋಗೆನೆಂದು ಹಠ ಹಿಡಿದಿದ್ದಳಂತೆ! ಊರಿನ ಅಪವಾದಕ್ಕೆ ಬೆದರಿ ಮಗಳನ್ನು ಸಂತೈಸಿ ಕಳುಹಿದರಂತೆ. ಈ ರೀತಿ ಮಾಡುವರೆಂದು ಕನಸ್ಸಿನಲ್ಲಿಯೂ ಅವರು ನೆನೆಸಿರಲಿಕ್ಕಿಲ್ಲ.

- ಹೇಳಿ ಫಲವಿಲ್ಲ. ಹೆಣ್ಣು ಹೆತ್ತವರ ಹಣೆಯಬರೆಹ! ಹೆತ್ತವರಿಗೆ ತಿಳಿಸಿ. ಶವ ಇಲ್ಲೇ ಇದೆ. ನಿರ್ದೋಶಿಯನ್ನು ಹೊಡೆದು, ಹಿಂಸಿಸಿದುದಲ್ಲದೆ, ವಿಷವನ್ನ ಕೊಟ್ಟು ಬಿಟ್ಟಿರುವರು. ನಾವು ಬದುಕಿಸಿ ಬಿಡಬಹುದೆಂದು, ಕಾಲ ಮೀರಿದ ಮೇಲೆ ನಿಮಗೆ ತಿಳಿಸಿ, ಆಸ್ಪತ್ರೆಗೆ ತಂದು ಹಾಕಿ, ಹೊರಟು ಹೋಗಿ ಬಿಟ್ಟಿರುವರು. ಅಬ್ಬಾ! ಎಂತಹ ನರಾಧಮರು?


- ಎಂದು ಉಸುರ್ಗರೆದು, ಡಾಕ್ಟರು ಹೋದ. ಅಕ್ಕನಿಗೆ ಫೋನ್ ಮಾಡಿದ ಮುರಾರಿ ಆಸ್ಪತ್ರೆಯಿಂದಲೇ. ಮನೆ ಸರ್ವರೂ ಬಂದೇ ಬಿಟ್ಟರು. ತಮ್ಮನ ಕಂಡು ಮಾಧವಿ - ನಮಗೆ ತಿಳಿಸದೆ ನಿನಗೆ ತಿಳಿಸಿದರೇ “ಅಯ್ಯೋ” ಎಂದು ಗೋಳಾಡಿದಳು.

ಸಂಶಯದ ಸಂಗತಿಯಾದುದರಿಂದ ಮುರಾರಿ ಪೋಲೀಸಿಗೆ ಅರುಹ ಬೇಕಾಯಿತು. ತಂದೆ ತಾಯಿ, ತಂಗಿ, ತಮ್ಮಂದಿಯರೆಲ್ಲ ಆ ಜಡ ಶರೀರದ ಮೇಲೆ ಬಿದ್ದು ಹೊರಳಾಡಿದರು. ಅವರನ್ನು ಸಂತವಿಸಲು ಹುಟ್ಟಿಸಿದ ಬ್ರಹ್ಮನೇ ಬರಬೇಕು. ದುಃಖ ಸಂತಪ್ತರನ್ನು ಸಂತವಿಸಲು ಮುರಾರಿಯೂ, ಸುಮತಿಯೂ ಪ್ರಯತ್ನಿಸಿದರು. ಫಲವಾಗಲಿಲ್ಲ. ಸುದ್ದಿ ತಿಳಿದ ಪೊಲೀಸರು ಬಂದು ನಿರ್ಮಲೆಯ ಅತ್ತೆಯನ್ನೂ, ನಾದಿನಿಯನ್ನೂ ಹಿಡಿದುಕೊಂಡು ಹೋದರು. ಮಾವನೂ ಗಂಡನೂ ಪರಾರಿಯಾಗಿದ್ದರು.

ಕಾಲವಿಳಂಬಿಸದೆ ಮುರಾರಿ ಎಲ್ಲರಿಂದ ಕೂಡಿ ಹತಭಾಗಿನಿಯ ಕಳೇ ಬರವನ್ನು ಬೃಂದಾವನಕ್ಕೆ ಕೊಂಡೊಯ್ದು, ನಿರಪರಾಧಿಯ ಪಾರ್ಥಿವ ಶರೀರವು ಶೀಘ್ರ್ರದಲ್ಲಿಯೇ ಅಗ್ನಿದೇವನಿಗೆ ಅಹುತಿಯಾಯಿತು.

ನಿರ್ಮಲೆ ಸರ್ವ ಹಿಂಸೆಗಳಿಂದ ಈಗ ಮುಕ್ತಳಾದಳು.

## ೧೦. ೧ ಆಹ್ವಾನ ಪತ್ರಿಕೆ



ವೀರರಾಜಪೇಟೆ ತಾಲೂಕು ಕನ್ನಡ ರಾಜ್ಯೋತ್ಸವ ಸಮಿತಿ

34ನೇ ವರ್ಷದ ಕನ್ನಡ ರಾಜ್ಯೋತ್ಸವ ಸಮಾರಂಭ ಆಹ್ವಾನ

ತಾ. 6-12-1990ನೇ ಗುರುವಾರ ಆಚರಿಸಲಾಗುವ ರಾಜ್ಯೋತ್ಸವ ಸಮಾರಂಭಕ್ಕೆ

ತಮ್ಮೆಲ್ಲರನ್ನು ಆದರಪೂರ್ವಕವಾಗಿ ಸ್ವಾಗತಿಸುತ್ತೇವೆ

ಕರ್ನಾಟಕ ಸಂಘದಲ್ಲಿ — ಹಗಲು 10-15 ಗಂಟೆಗೆ: —

ಧ್ವಜಾರೋಹಣ:— ಶ್ರೀ ಕೆ. ಸಿ. ಶ್ರೀರಾಮಯ್ಯ, ಕೆ.ಎ.ಎಸ್., ತಹಸೀಲ್ದಾರ್, ವೀರಾಜಪೇಟೆ, ಇವರಿಂದ

ತಾಲೂಕು ಮೈದಾನದಲ್ಲಿ: ಹಗಲು 11-35 ಗಂಟೆಗೆ: ಸಭಾ ಕಾರ್ಯಕ್ರಮ

ಅಧ್ಯಕ್ಷರು:— ಶ್ರೀ ಎಂ. ಕೆ. ಪೂವಯ್ಯ, ಬಿ.ಎ.,ಬಿ.ಎಲ್. ಪ್ರಧಾನರು ಮಂಡಲ ಪಂಚಾಯತಿ, ವೀರಾಜಪೇಟೆ

ಮುಖ್ಯ ಅತಿಥಿ:— ಶ್ರೀಮತಿ ಸುಮಾ ವಸಂತ ಶಾಸಕರು, ವೀರಾಜಪೇಟೆ ತಾಲೂಕು


ಕರ್ನಾಟಕ ರಾಜ್ಯೋತ್ಸವ ಸಂದರ್ಭದಲ್ಲಿ ಸನ್ಮಾನಿತರು: —

1) ಶ್ರೀ ನಾರಾಯಣ ಶರ್ಮ, ನಿವೃತ್ತ ಅಧ್ಯಾಪಕರು, ಬೋಯಿಕೇರಿ


2) ಶ್ರೀ ಜಕ್ಕಿ ಚೆಂಗಪ್ಪ, ಕಲಾವಿದರು ಅಕ್ಷಯ ಕಲಾ ಬಳಗ, ವೀರಾಜಪೇಟೆ

ಸ್ವಾಗತಿಗಳು:— 3) ಶ್ರೀಮತಿ ಪಾರ್ವತಿ ಪೂವಯ್ಯ ಲಕ್ಷ್ಮಿ ಎಸ್ಟೇಟ್, ಪಾಲಿಬೆಟ್ಟ


## ೧೦. ೨. ಆಹ್ವಾನ ಪತ್ರಿಕೆ



# ೧೧. ಪ್ರವಾಸದ ಛಾಯಾಚಿತ್ರಗಳು



ಕನ್ಯಾಕುಮಾರಿಯ ವಿವೇಕಾನಂದ ಸ್ಮಾರಕದ ಎದುರಿಗೆ ಪಾರ್ವತಿ ಪೂವಯ್ಯ ಮಗ ಉತ್ತಪ್ಪನವರೊಂದಿಗೆ. (೧೯೭೭)



ದೆಹಲಿಯ ಕುತುಬ್ ಮಿನಾರ್ ಎದುರು ಕುಟುಂಬದೊಂದಿಗೆ (೧೯೬೭)



ದೆಹಲಿಯ ಇಂಡಿಯ ಗೇಟ್ ಎದುರಿಗೆ (೧೯೬೮)




ರಾಜಘಾಟ್‌ನ ಎದುರು ಗೌರವಾರ್ಪಣೆ




ಬನಾರಸ್‌ನಲ್ಲಿ ಗಂಗೆಯ ಮೇಲೆ ದೋಣಿಯಲ್ಲಿ ಸೊಸೆ ವಾಣಿಯೊಂದಿಗೆ




ಕಾಶ್ಮೀರದ ಗುಲ್ಮಾರ್ಗ್‌ನ ದಾರಿಯಲ್ಲಿ ಕುದುರೆ ಸವಾರಿಯಲ್ಲಿ.



ಆಗ್ರಾದ 'ತಾಜ್‌ಮಹಲ್' ಎದುರಿಗೆ



ಜೈಪುರದ 'ಅಮರ್ ಪ್ಯಾಲೆಸ್' ಎದುರು ಮಗ-ಸೊಸೆಯೊಂದಿಗೆ.



ಕಲ್ಕತ್ತಾ ರಾಮಕೃಷ್ಣ ಮಠದ ಎದುರಿಗೆ.